ಉಪಾಧ್ಯಕ್ಷರು.—ರೂಲ್ 59ರ ಪ್ರಕಾರ ನೀವು ಕಳಿಸಿರುವ ನಿಲುವಳಿ ಸೂಚನೆಯನ್ನು ಒಪ್ಪುವುದಕ್ಕಾಗುವುದಿಲ್ಲ. ಸಂಬಂಧಪಟ್ಟ ಬೇಡಿಕೆಗಳು ಇಲ್ಲಿ ಚರ್ಚೆಗೆ ಬಂದಾಗ ಬೇಕಾದಷ್ಟು ತಮಗೆ ಅವಕಾಶಕೊಡುತ್ತೇನೆ, ಆಗ ಮಾತನಾಡಬಹುದು.

ಶ್ರೀ ವಾಟಾಳ್ ನಾಗರಾಜ್.—ಆಹಾರ ಮಂತ್ರಿಗಳು ಈ ಸಭೆಯಲ್ಲಿ ಇದ್ದಾರೆ. ಆ ಕಡೆಯಿಂದ ತಮ್ಮ ಮೂಲಕ ನಮಗೆ ಅವರ ಒಂದು ಅಭಿಪ್ರಾಯವನ್ನು ನೀಡಲಿ. ಏಕೆಂದರೆ ಬೆಂಗಳೂರು ಜನತೆಗೆ ತುಂಬಾ ತೊಂದರೆಯಾಗುತ್ತಿದೆ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ಈಗಿನ ಪಡಿತರ ಪದ್ಧತಿಯಿಂದ ಜನರಿಗೆ ಬಹಳ ತೊಂದರೆಯಾಗಿದೆಯೆಂದು ಹೇಳುತ್ತಿದ್ದಾರೆ. ಅವರೂ ಸಹ ಆಡಳಿತ ಪಕ್ಷದೊಡನೆ ಕುಳಿತು ಚರ್ಚೆಮಾಡಲಿ.

ಶ್ರೀ ಬಿ. ಡಿ. ಜತ್ತಿ (ಆಹಾರ ಮತ್ತು ನಿತ್ಯೋಪಯೋಗಿ ಸರಬರಾಜು ಶಾಖೆಗಳ ಮಂತ್ರಿಗಳು).—ಈಗ ಆಯವ್ಯಯದ ಮೇಲೆ ಚರ್ಚೆ ಪ್ರಾರಂಭವಾಗುತ್ತದೆ. ಆಹಾರ ಇಲಾಖೆಗೆ ಸಂಬಂಧಪಟ್ಟ ಹಾಗೆ ಈ ಸಭೆಯಮುಂದೆ ಬೇಡಿಕೆ ಬರುತ್ತದೆ. ಆಗ ಬೆಂಗಳೂರಿನ ಆಹಾರ ಪರಿಸ್ಥಿತಿ ಬಗ್ಗೆ ಸಾಕಷ್ಟು ಚರ್ಚೆಮಾಡಬಹುದು, ನಾನೂ ಸಹ ಸವಿಸ್ತಾರವಾಗಿ ಉತ್ತರ ಹೇಳಬಹುದು. ಇವತ್ತು ಮಾನ್ಯ ಸದಸ್ಯರು ನನ್ನ ಕಡೆ ಬಂದರೆ ಅವರ ಸಮಸ್ಯೆ ಏನು ಇರುತ್ತದೋ ಅದನ್ನು ಬಿಡಿಸಲಿಕ್ಕೆ ಪ್ರಯತ್ನಮಾಡುತ್ತೇನೆ.

Business of the House

Mr. DEPUTY SPEAKER.—There is one announcement. Under Rule 163 (1) of the Rules of Procedure and Conduct of Business, the Speaker has allotted six days from to-day for general discussion of the Budget, for 1968–69. Now the debate will begin.

Sri H. B. JWALANAIAH (Hassan).—It has not come before the Business Advisory Committee.

Mr. DEPUTY SPEAKER.—It need not come.

BUDGET ESTIMATES FOR—1968-69

General Discusion

† ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಸಭಾಪತಿಯವರೇ, 1968-69ನೇ ಸಾಲಿಗೆ ಸಂಬಂಧಪಟ್ಟಹಾಗೆ ಹಣಕಾಸಿನ ಸಚಿವರು ಮಂಡಿಸಿರತಕ್ಕ ಆಯವ್ಯಯಪಟ್ಟಿಯನ್ನು ಚರ್ಚೆಮಾಡುವ ಈ ಕಾಲದಲ್ಲಿ ಕೆಲವು ವಿಷಯಗಳನ್ನು ಹೇಳಲಿಚ್ಛಿಸುತ್ತೇನೆ. 1967-68ನೇ ಇಸವಿಯಲ್ಲಿ ಬಜೆಟ್ ಮಂಡನೆ ಮಾಡಿದ ಕಾಲದಲ್ಲಿ ಇವರು ಹೇಳಿದ್ದಂಥ ಮತ್ತು ಕೊಟ್ಟಂಥ ಭರವಸೆಗಳನ್ನು ಮರೆತಿರತಕ್ಕ ವಚನಭ್ರಷ್ಟತೆಯನ್ನು ತೋರಿಸಿರತಕ್ಕದ್ದು ಈ ಸಭೆಗೆ ಬಹು ಚೆನ್ನಾಗಿ ಗೊತ್ತಿದೆ. ಇವರ ವಚನ ಭ್ರಷ್ಟತೆ ಏನೆಂಬುದನ್ನು ಅವರಾಗಿಯೇ ವ್ಯಕ್ತಮಾಡಿದ್ದಾರೆಂದು ನಾನು ಮೊಟ್ಟಮೊದಲನೆಯದಾಗಿ ಹೇಳಬೇಕಾಗಿದೆ.

ಹಣಕಾಸಿನ ಸಚಿವರು ತಮ್ಮ ಬಡ್ಜೆಟ್ಟಿನಲ್ಲಿ ತೋರಿಸಿರತಕ್ಕ 194·74 ಕೋಟಿ ರೂಪಾಯಿಗಳ ಆದಾಯದಲ್ಲಿ 182.76 ಕೋಟಿ ರೂಪಾಯಿಗಳ ವೆಚ್ಚವಾಗಿದೆ, ಅದರಿಂದಾಗಿ 11.98 ಕೋಟಿ ರೂಪಾಯಿಗಳ ಸರ್ಪ್ಲಸ್ ಬಡ್ಜೆಟ್ ಎಂಬುದಾಗಿ ಅವರು ಲೆಕ್ಕದಲ್ಲಿ ತೋರಿಸಿದ್ದಾರೆ. ಈಗ ನಾವು ಅವರ ಬಡ್ಜೆಟ್ ವರದಿಯನ್ನು ಮತ್ತು ಬಡ್ಜೆಟ್ ಪುಸ್ತಕಗಳನ್ನು ನೋಡಿದರೆ 11.98 ಕೋಟಿ ರೂಪಾಯಿಗಳ ಉಳಿತಾಯ ನಿಜವಾಗಿ ಆಗಿದೆಯೇ ಎಂಬುದನ್ನು ಯೋಚನೆಮಾಡಬೇಕಾಗಿ ಬರುತ್ತಿದೆ. ಅದು ಕೇವಲ ಅಣಕು ಮಾತ್ರ, ಆ ರೀತಿ ಹೇಳಿದ್ದಾರೆಂದು ನನಗೆ ತೋರುತ್ತದೆ. ಮುಂದೆ ಯಾವ ರೀತಿ ಹಣವನ್ನು ಅಳವಡಿಸುವುದಕ್ಕೆ ಪ್ರಯತ್ನಮಾಡಿದ್ದಾರೆ, ಮತ್ತು ಯಾವ ರೀತಿ ಖರ್ಚು ವೆಚ್ಚಗಳನ್ನು ಲೆಕ್ಕಹಾಕಿದ್ದಾರೆಂಬುದು. ಇದರಲ್ಲಿ ಸರಿಯಾಗಿ ಸ್ಪಷ್ಟಪಡಿಸಿಲ್ಲ. ಹೊಸದಾಗಿ

(ಶ್ರೀ ಎಸ್. ಶಿವಪ್ಪ)

ಸರ್ಕಾರದ ನೌಕರರಿಗೆ ಕೊಟ್ಟ ತುಟ್ಟಿಭತ್ಯಕ್ಕಾಗಿ ಆಗತಕ್ಕ ಸುಮಾರು 3 ಕೋಟಿ ರೂಪಾಯಿಗಳನ್ನು ಸರ್ಕಾರದಿಂದ ನಿವೃತ್ತರಾದವರಿಗೆ ಕೊಡುವ ಸೌಲಭ್ಯಗಳಿಗಾಗಿ ಅಗತಕ್ಕ ಸುಮಾರು 8 ಕೋಟಿ ರೂಪಾಯಿಗಳನ್ನು ಇವರ ಈಗಿನ ಲೆಕ್ಕದಲ್ಲಿ ಸೇರಿಸಿಲ್ಲವೆಂದು ನನಗೆ ತೋರುತ್ತದೆ. ಇವರು 67-68 ನೇ ಸಾಲಿನಲ್ಲಿ ಯೋಜನೆಗಳಿಗೆ ಹಣವನ್ನು ಒದಗಿಸಿದಮೇಲೆ 9 ಕೋಟಿ ರೂಪಾಯಿಗಳ ಓವರ್ ಡ್ರಾಫ್ಟ್ ಮಾಡಿ ಅದನ್ನು ತೀರಿಸುವುದಕ್ಕೋಸ್ಕರ ಒಂದು ಆಡಹಾಕ್ ಲೋನ್ ತೆಗೆದುಕೊಳ್ಳ ಬೇಕೆಂದು ಹೇಳಿದ್ದಾರೆ. ಅಂದಮೇಲೆ ಇವರ ಈ 11.98 ಕೋಟಿ ರೂಪಾಯಿಗಳ ಉಳಿತಾಯ ಎಲ್ಲಿ ಉಳಿಯುತ್ತದೆಂಬುದನ್ನು ಈ ಮಾನ್ಯ ಸಭಾಸದಸ್ಯರು ನೋಡಬೇಕು. ಇವತ್ತು ನಮ್ಮ ಬಡ್ಜೆಟ್ಟಿನಲ್ಲಿ ಓಪನಿಂಗ್ ಬ್ಯಾಲೆನ್ಸ್ ಏನಿದೆಯೆಂಬುದನ್ನು ನೋಡಬೇಕು.

ಇವೆಲ್ಲವನ್ನೂ ನೋಡಿದರೆ 11·98 ಕೋಟಿ ರೂಪಾಯಿ ಎಲ್ಲಿ ಉಳಿಯುತ್ತದೆ ಎನ್ನತಕ್ಕಂಥಾದನ್ನು ತಾವು ನೋಡಬೇಕು. ನಿಮ್ಮ ಬಡ್ಜೆಟ್ಟಿನ ಓಪನಿಂಗ್ ಬ್ಯಾಲೆನ್ಸ್ 12·79 ಕೋಟಿ ರೂಪಾಯಿಗಳ ಖೋತಾ ಸಿಲ್ಕಿನಿಂದ ಪ್ರಾರಂಭವಾದದ್ದು ಅದು ಮುಗಿಯುವ ಹೊತ್ತಿಗೆ ಸರ್‌ಪ್ಲಸ್ ಮುಗಿದು ಕೊನೆಗೆ 14.39 ಕೋಟಿ ರೂಪಾಯಿಗಳ ಖೋತಾ ಆಗಿ ಒಂದು ಕ್ಲೋಜಿಂಗ್ ಬ್ಯಾಲೆನ್ಸ್ ಆಗುತ್ತದೆ. ಕ್ಲೋಜಿಂಗ್ ಬ್ಯಾಲೆನ್ಸ್ ಇನ್ನೂ ಜಾಸ್ತಿಯಾಗಿ ಖೋತಾ ದಿನೇ ದಿನೇ ಹೆಚ್ಚಾಗುತ್ತದೆಯೇ ಹೊರತು ಉಳಿತಾಯ ಎಂದಿಗೂ ಇಲ್ಲ. ಇಷ್ಟೇ ಅಲ್ಲ, ಈ ವರ್ಷದ ಬಡ್ಜೆಟ್ಟಿನಲ್ಲಿ ಅನೇಕ ಅಂಕಿ ಸಂಖ್ಯೆಗಳನ್ನು ನಮಗೆ ಹೇಳಿದ್ದಾರೆ. ನಮ್ಮ ದೇಶದ ಹಣಕಾಸಿನ ಖಾತೆಯ ಕೆಲವು ಅಂಕೆಗಳನ್ನು ಕೊಟ್ಟಿದ್ದಾರೆ. ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಬಡ್ಜೆಟ್ ಭಾಷಣದಲ್ಲಿ ಈ ವರ್ಷ ಅಂಕೆಗಳನ್ನು ಅಳವಡನೆ ಮಾಡಿರತಕ್ಕದ್ದು ಹೋದವರ್ಷಕ್ಕಿಂತ ಉತ್ತಮವಾಗಿದೆ. ಮೈಸೂರು ದೇಶದ ಹಣಕಾಸಿನ ಪರಿಸ್ಥಿತಿ ಯಾವ ಮಟ್ಟದಲ್ಲಿದೆ ಎಂಬುದನ್ನು ನೋಡಿದರೆ 1968—69ನೇ ಸಾಲಿಗೆ ಸಾಲದ ಹೊರೆ ಸುಮಾರು 369 ಕೋಟಿ ರೂಪಾಯಿಗಳಿಗೆ ಏರುತ್ತಿದೆ. ತಾವು ಹೇಳತಕ್ಕ ರೀತಿಯಲ್ಲಿ ಸರ್ಕಾರದ ಆಸ್ತಿಪಾಸ್ತಿಗಳು 427 ಕೋಟಿ ರೂಪಾಯಿಗಳಷ್ಟು ಬೆಲೆ ಬಾಳತಕ್ಕದ್ದು ಇದೆಯೆಂದು ಅಂಕಿ ಅಂಶಗಳಿಂದ ಗೊತ್ತಾಗುತ್ತದೆ. ಇದಕ್ಕೆ ಸರ್ಕಾರದವರು ಪ್ರತಿವರ್ಷ 20 ಕೋಟಿ ರೂಪಾಯಿಗಳ ಬಡ್ಡಿಯನ್ನು ಕೊಡುತ್ತಿದ್ದಾರೆ. ಸರ್ಕಾರದವರು ಹಾಕಿರತಕ್ಕ 427 ಕೋಟಿ ರೂಪಾಯಿಗಳ ಬಂಡವಾಳ ಏನಿದೆ ಅದರಮೇಲೆ ಬರತಕ್ಕ ಲಾಭ ಎಷ್ಟು ಎಂಬುದನ್ನು ಎಲ್ಲೂ ತೋರಿಸಿಲ್ಲ. ಆದರೆ ನಮ್ಮ ಬಡ್ಜೆಟ್ಟಿನ ಆರ್ಥಿಕ ಸ್ಥಿತಿಯನ್ನು ಭದ್ರವಾದ ತಳಹದಿಯಮೇಲೆ ಹಾಕಿದ್ದೇವೆ ಎಂದು ಹೇಳುತ್ತಾರೆ. 431 ಕೋಟಿ ರೂಪಾಯಿಗಳ ಅಸೆಟ್ಸ್ ಏನಿದೆ ಅದರ ಮೇಲೆ ಬಂದಿರತಕ್ಕ ಆದಾಯ ಎಷ್ಟು ಎಂಬುದನ್ನು ತೋರಿಸಿಲ್ಲ. ಇವೊತ್ತು ಇಷ್ಟೊಂದು ಹಣವನ್ನು ಸಾಲ ಮಾಡಿ 20 ಕೋಟಿ ರೂಪಾಯಿಗಳ ಬಡ್ಡಿಯನ್ನು ಪ್ರತಿ ವರ್ಷ ಕೊಡಬೇಕಾದರೆ ಸರ್ಕಾರದವರು ಎಷ್ಟು ಸಂಸ್ಥೆಗಳಿಗೆ ಎಷ್ಟು ಜನ ಉದ್ಯಮಿಗಳಿಗೆ ಸಾಲವನ್ನು ಕೊಟ್ಟಿದ್ದಾರೆ? 1957-58ನೇ ಇಸವಿಯಲ್ಲಿ ಸರ್ಕಾರದ ಸಾಲ 15 ಕೋಟಿ ರೂಪಾಯಿಗಳು ಮಾತ್ರ ಇತ್ತು. ಈಗ 142.8 ಕೋಟಿ ರೂಪಾಯಿಗಳವರೆಗೆ ಏರಿದೆ ಕೊಟ್ಟಿರತಕ್ಕ ಸಾಲ. ಈಗಾಗಲೇ ಸರ್ಕಾರದವರು ಸಾಕಷ್ಟು ಸಾಲ ಮಾಡಿ ಒಂದು ವರ್ಷಕ್ಕೆ 20 ಕೋಟಿ ರೂಪಾಯಿಗಳ ಬಡ್ಡಿಯನ್ನು ಕೊಡುವಾಗ ವ್ಯಾಪಾರೋದ್ಯಮಿಗಳಿಗೆ ಮತ್ತು ಸಹಕಾರ ಸಂಘಗಳಿಗೆ ತಮ್ಮ ಮನಸ್ಸಿಗೆ ಬಂದಹಾಗೆ ಸಾಲವನ್ನು ಕೊಟ್ಟಿದ್ದಾರೆ. ಸುಮಾರು 148 ಕೋಟಿ ರೂಪಾಯಿಗಳಷ್ಟು ಸಾಲ ಸರ್ಕಾರದವರು ಕೊಟ್ಟಿರತಕ್ಕದ್ದು ವಸೂಲಾಗದೆ ಹಾಗೆಯೇ ನಿಂತಿದೆ ಎಂದು ಕಂಡುಬರುತ್ತಿದೆ ನಿಮ್ಮ ಅಂಕೆಗಳ ಪ್ರಕಾರ. ನಿಮ್ಮ ಸಾಲದ ಹೊರೆ ಮೊದಲಿಗಿಂತ 260 ಪರ್ಸೆಂಟ್ ಜಾಸ್ತಿಯಾಗಿದೆ. ಈಗ ವಾಪಸ್ಸು ಆಗತಕ್ಕಂಥಾದ್ದು ಎಷ್ಟು ಉಳಿದಿದೆ ಎಂದರೆ 794 ಪರ್ಸೆಂಟ್ ಉಳಿದಿದೆ. ನಿಮ್ಮ ಆರ್ಥಿಕ ನೀತಿ ಲಂಗು ಲಗಾಮು ಇಲ್ಲದ ಹಾಗಾಗಿದೆ. ನಿಮ್ಮ ಮನಸ್ಸಿಗೆ ಬಂದಹಾಗೆ ದುಡ್ಡು ಕೊಟ್ಟಿದ್ದೀರಿ, ಅದನ್ನು ತೆಗೆದುಕೊಂಡವರು ವಾಪಸ್ಸು ಕೊಟ್ಟಿಲ್ಲ. ನಿಮ್ಮ ಸರ್ಕಾರದ ಷೇರನ್ನು ಕೆಲವು ಕಂಪೆನಿಗಳಿಗೆ ಹಾಕ್ಕಿದ್ದೀರಿ, ನಿಮ್ಮ ಬಡ್ಜೆಟ್ ಪುಸ್ತಕದ ಪುಟ 284 ರಲ್ಲಿ ಹೇಳಿರುವಂತೆ 22·74 ಕೋಟಿ ರೂಪಾಯಿಗಳನ್ನು ಅನೇಕ ಸಂಸ್ಥೆಗಳಲ್ಲಿ ಷೇರು ಮೂಲಕ ಬಂಡವಾಳವನ್ನು ಹಾಕಿದ್ದಾರೆ. ಈ ಹಣಕ್ಕೆ ಬಂದಿರತಕ್ಕ ಡಿವಿಡೆಂಡ್ ಎಷ್ಟು ಎಂದರೆ ಕೇವಲ 17.89 ಲಕ್ಷ ರೂಪಾಯಿಗಳು ಮಾತ್ರ. $22\frac{3}{4}$ ಕೋಟಿ ರೂಪಾಯಿಗಳಿಗೆ $17\frac{3}{4}$ ಲಕ್ಷ ರೂಪಾಯಿಗಳು ಡಿವಿಡೆಂಡ್ ಬಂದಿರುವುದನ್ನು ಶೇಕಡಾವಾರು ಲೆಕ್ಕ ಹಾಕಿದರೆ 0.75 ಪರ್ಸೆಂಟ್ ಕೂಡ ಆಗುವುದಿಲ್ಲ. ಸಹಕಾರ ಸಂಘಗಳಿಗೆ ಮಾರ್ಚಿ 67 ರವರೆಗೆ 15.13 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅವುಗಳಿಂದ ವಾಪಸ್ಸು ಡಿವಿಡೆಂಡ್ ಬಂದಿರತಕ್ಕದ್ದು $4\frac{3}{4}$ ಲಕ್ಷ ರೂಪಾಯಿಗಳು ಮಾತ್ರ. ಅದನ್ನು ಲೆಕ್ಕ ಹಾಕಿದರೆ. ·25 ಪರ್ಸೆಂಟ್ ಕೂಡ ಬರುವುದಿಲ್ಲ. ನಮ್ಮ ದೇಶದಲ್ಲಿ ಇಷ್ಟೊಂದು ಸಾಲ ಮಾಡಿ,

ದೇಶವನ್ನು ಅಡವಿಟ್ಟು ತಂದಿರತಕ್ಕ ಹಣವನ್ನು ಲೆಕ್ಕಾಚಾರವಿಲ್ಲದೆ ಕೆಲವರಿಗೆ ಅನುಕೂಲ ಮಾಡಿ ಕೊಡುವುದಕ್ಕೆ ಸೊಸೈಟಿಗಳಿಗೆ ಮತ್ತು ಉದ್ಯಮಗಳಿಗೆ ಕೊಟ್ಟಿರತಕ್ಕದ್ದು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. ನಮ್ಮ ಹಣಕಾಸಿನ ಮೇಲೆ ಏನೊಂದು ಉತ್ಪತ್ತಿ ಅದರಿಂದ ಬರಬೇಕಾಗಿತ್ತೋ ಅದು ಬರಲಿಲ್ಲ ಎಂದು ಹೇಳಬೇಕಾಗಿದೆ. ನಮ್ಮದೇಶದಲ್ಲಿ ರೆವಿನ್ಯೂ ಏರಿದೆ ಇದು ಒಂದೇ ಪ್ರಕಾರ ವಾಗಿ ಏರುತ್ತಾ ಬಂದಿದೆಯೆಂದು ನಮ್ಮದೇಶದ ತೆರಿಗೆದಾರರಿಗೆಲ್ಲಾ ಷಹಭಾಷ್‌ಗಿರಿಯನ್ನು ಕೊಟ್ಟಿದ್ದಾರೆ. 1957—58ನೇ ಸಾಲಿನಲ್ಲಿ ನಮ್ಮ ದೇಶದ ಆದಾಯ 58 ಕೋಟಿ ರೂಪಾಯಿ ಗಳಿತ್ತು. ಅದು ಈ ದಿವಸ 194 ಕೋಟಿ ರೂಪಾಯಿಗಳಿಗೆ ಏರಿದೆ. ಇಷ್ಟೊಂದು ಏರಿಕೆ ಆಗ ಬೇಕಾದರೆ, ನಮ್ಮದೇಶದ ತೆರಿಗೆದಾರರು ದೇಶದ ಖಜಾನೆಗೆ ಚಾಚೂ ತಪ್ಪದೆ ತಮ್ಮ ಕರ್ತವ್ಯವನ್ನು ನಿರ್ವಹಣೆ ಮಾಡಿಕೊಂಡು ಬಂದಿದ್ದಾರೆ ಎಂದು ಗೊತ್ತಾಗುತ್ತದೆ. ಆ ರೀತಿ ತೆರಿಗೆದಾರರು ಕೊಟ್ಟಂತಹ ಹಣವನ್ನು ದುರ್ಲಕ್ಷ್ಯ ಮಾಡಿ ಇವರು ಈ ದೇಶದ ಖಜಾನೆಯ ಹಣವನ್ನು ಲೂಟಿ ಮಾಡಿದ್ದಾರೆ. 434 ಕೋಟಿ ರೂಪಾಯಿಗಳ ಸಾಲ ಮಾಡಿ ವರ್ಷಕ್ಕೆ 20 ಕೋಟಿ ರೂಪಾಯಿಗಳ ಬಡ್ಡಿಯನ್ನು ಕೊಡುತ್ತಿದ್ದಾರೆ. 4 ಆಣೆ ಕೂಡ ಬಡ್ಡಿಬಾರದೆ ಇರತಕ್ಕ ಸಂಸ್ಥೆಗಳಿಗೆ ಹಣವನ್ನು ಕೊಟ್ಟಿದ್ದೀರಿ, ಇದನ್ನು ಎಂತಹ ಸರ್ಕಾರ ಎಂದು ನಾವು ತಿಳಿಯಬೇಕಾಗಿದೆ? ನಮ್ಮದೇಶದ ಆರ್ಥಿಕಸ್ಥಿತಿಯನ್ನು ದಿವಾಳಿತನಕ್ಕೆ ಕೊಂಡೊಯ್ಯುವ ಈ ಸರ್ಕಾರದ ನೀತಿಯಿಂದ ಸರ್ಕಾರದ ಸಾಲದ ಹೊರೆ ದಿನೇ ದಿನೇ ಜಾಸ್ತಿಯಾಗುತ್ತಿದೆ. ಈಗ ನಮ್ಮದೇಶದ 434 ಕೋಟಿ ರೂಪಾಯಿಗಳ ಅಸೆಟ್ಸ್ ಏರಿದೆಯೆಂದು ಹೇಳಿದ್ದಾರೆ, ಅದರಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿಯೇ ಸುಮಾರು 60 ಕೋಟಿ ರೂಪಾಯಿಗಳ ಅಸೆಟ್ಸ್ ಇವೆಯೆಂದು ಹೇಳುತ್ತಿದ್ದಾರೆ. ಲೋಕೋಪಯೋಗಿ ಇಲಾಖೆ ಯಲ್ಲಿ ಮಾಡಿರತಕ್ಕ ಕಟ್ಟಡಗಳಲ್ಲಿ ಎಷ್ಟು ಸಿಮೆಂಟ್ ಇದೆಯೋ, ಎಷ್ಟು ಮಣ್ಣು ಇದೆಯೋ, ಯಾರು ಯಾರು ಎಷ್ಟು ಹಣವನ್ನು ಹೊಡೆದಿದ್ದಾರೋ, ಯಾರು ಪಾತಾಳಕ್ಕೆ ಹೋಗಿದ್ದಾರೆಯೋ, ಯಾರು ಮೇಲಕ್ಕೆ ಹೋಗಿದ್ದಾರೋ ಗೊತ್ತಿಲ್ಲ. ಇವರು ಇಲ್ಲಿ ಹೇಳಿರತಕ್ಕ ಅಸೆಟ್ಸ್ ಎಲ್ಲವೂ ಬರೀ ಕಾಗದದ ಮೇಲೆ ಇದೆಯೋ ಏನೋ! ಇದರಿಂದ ನಿಜವಾಗಿ ಇವರು ನಮ್ಮ ದೇಶದಲ್ಲಿ ಉತ್ಪತ್ತಿ ಬರತಕ್ಕ ಕಾರ್ಯವನ್ನು ಮಾಡಲಿಲ್ಲ ಎಂದು ನಮಗೆ ಗೊತ್ತಾಗುತ್ತದೆ. ನಿಮ್ಮ ಯೋಜನೆಗಳನ್ನು ಕಾರ್ಯ ಗತ ಮಾಡತಕ್ಕ ಪರಿಸ್ಥಿತಿಯಲ್ಲಿ, ನಾಲ್ಕನೆಯ ಪಂಚವಾರ್ಷಿಕಯೋಜನೆಯನ್ನು ಎರಡು ವರ್ಷ ಮುಂದಕ್ಕೆ ಹಾಕಿದ್ದೀರಿ. ಇದರಿಂದಲೇ ಗೊತ್ತಾಗುತ್ತದೆ ನಿಮ್ಮ ಹಣಕಾಸಿನ ಸ್ಥಿತಿ ಎಷ್ಟೊಂದು ವಿಷಮ ಸ್ಥಿತಿಗೆ ಏರಿದೆ ಎಂಬುದು. ನೀವು ಯಾವುಯಾವುದರಿಂದ ಹಣ ಬರುತ್ತದೆ, ಲಾಭ ಬರುತ್ತದೆ ಎಂದು ಭಾವನೆ ಮಾಡಿಕೊಂಡಿದ್ದೀರೋ ಅವುಗಳಿಂದ ಹಣ ಬಂದಿಲ್ಲ. ಯೋಜನೆಗಳಿಂದ ಲಾಭ ಬಾರದೇ ಅವು ತಲೆಕೆಳಗಾಗಿವೆ. ನಾಲ್ಕನೆಯ ಪಂಚವಾರ್ಷಿಕಯೋಜನೆ ಈಗ ಎರಡು ವರ್ಷಗಳ ಹಿಂದೆಯೇ ಕಾರ್ಯಗತವಾಗಬೇಕಾಗಿತ್ತು. 1968 ನೇ ಇಸವಿ ಬಂದರೂ ಕೂಡ ನಾಲ್ಕನೆಯ ಪಂಚವಾರ್ಷಿಕಯೋಜನೆಯ ಚಿತ್ರ ನಮ್ಮಮುಂದೆ ಇಲ್ಲ. 1970 ನೇ ಇಸವಿಗೆ ಈ ಯೋಜನೆ ಪ್ರಾರಂಭವಾಗುತ್ತದೆ ಎಂದು ಹೇಳುತ್ತಿದ್ದಾರೆ. ಆ ಚಿತ್ರ ನಮ್ಮ ಮುಂದೆ ಇಲ್ಲ. ಇದಕ್ಕೆ ಕಾರಣ ವನ್ನು ಕೂಡ ಆಯವ್ಯಯ ಪಟ್ಟಿಯಲ್ಲಿ ಹೇಳಿದ್ದಾರೆ. ಇದಕ್ಕೆ ಹಣದ ಉಬ್ಬರ ಮತ್ತು ಡೀ ವ್ಯಾಲ್ಯೂ ಯೇಷನ್ ಇತ್ಯಾದಿ ಕಾರಣಗಳನ್ನು ಕೊಟ್ಟಿದ್ದಾರೆ. ಡೀವ್ಯಾಲ್ಯೂಯೇಷನ್ನಿಗೆ ಯಾರೂ ಕಾರಣ? ಅದಕ್ಕೆ ನಿಮ್ಮ ಸರ್ಕಾರವೇ ಕಾರಣ.

ಇವೊತ್ತಿನದಿವಸ ಮಾನ್ಯ ಹಣಕಾಸಿನ ಮಂತ್ರಿಗಳು ಹಣಕಾಸಿನ ಸಂಕ್ಷಿಪ್ತ ಚಿತ್ರವನ್ನು ಮತ್ತು ಹಣಕಾಸಿನ ಅನೇಕ ವಿಷಯಗಳನ್ನು ಈ ಸಭೆಯ ಮುಂದಿಟ್ಟಿದ್ದಾರೆ. ಮೊದಲನೆಯದಾಗಿ ಮಾನ್ಯ ಅರ್ಥ ಸಚಿವರು ಈಗ ದೇಶದಲ್ಲಿರತಕ್ಕ ಭಾಷೆಯ ವಿಚಾರವಾಗಿ ಒಂದೆರಡು ಮಾತುಗಳನ್ನು ಹೇಳಿ ದ್ದಾರೆ. ತ್ರಿಭಾಷಾ ಸೂತ್ರವನ್ನು ಸರ್ಕಾರ ಒಪ್ಪಿಕೊಂಡಿದೆ. ಇದು ಈ ಸಭೆಯಮುಂದೆ ಚರ್ಚೆ ಯಾಗತಕ್ಕ ವಿಷಯ. ಈ ಸಭೆ ಈ ಭಾಷೆಯ ವಿಚಾರದಲ್ಲಿ ತನ್ನ ಒಂದು ಅಭಿಪ್ರಾಯವನ್ನು ಸೂಕ್ತ ವಾದ ರೀತಿಯಲ್ಲಿ ನಿರೂಪಿಸಬೇಕು. ಇದು ಅತಿ ಪ್ರಾಮುಖ್ಯವಾದ ವಿಷಯ. ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ತನ್ನ ಧೃಢವಾದ, ಧೀರವಾದ ನಿಲುವನ್ನು ಈ ಭಾಷೆಯ ವಿಚಾರದಲ್ಲಿ ತೆಗೆದುಕೊಳ್ಳದೆ ಇದು ಒಂದು ಗೊಂದಲಕ್ಕೆ ಕಾರಣವಾಗಿದೆ ಎಂದು ನಾನು ಮತ್ತೊಮ್ಮೆ ಒತ್ತಿಹೇಳಬೇಕಾಗಿದೆ. ಇವತ್ತು ರಾಷ್ಟ್ರದ ಮತ್ತು ರಾಜ್ಯದ ಹಿತವನ್ನು ಮತ್ತು ಸಮಗ್ರತೆಯನ್ನು ಕಾಪಾಡಿಕೊಂಡು ಹೋಗಬೇಕಾದರೆ ಮುಖ್ಯವಾಗಿ ಎಲ್ಲರಿಗೂ ಒಪ್ಪುವಂತಹ ಭಾಷಾ ಸೂತ್ರವನ್ನು ನಿರ್ವಹಿಸಬೇಕಾಗಿದೆ. ಈ ಭಾಷಾ ಸೂತ್ರದಲ್ಲಿ ರಾಜ್ಯ ಭಾಷೆಗೆ ಮಹತ್ವ ಕೊಡಬೇಕು ಎಂಬ ಬಗ್ಗೆ ಒಂದು ನಿರ್ಣಯವನ್ನು ಈ ಸಭೆಯ ಮುಂದೆ ಇಟ್ಟಿದ್ದೇವೆ. ಆ ನಿರ್ಣಯ ಈ ಸಭೆಯ ಮುಂದೆ ಬಂದಾಗ ನಮ್ಮ ಅಭಿಪ್ರಾಯ ವನ್ನು ಸೂಚಿಸುವುದು ನಮ್ಮ ಕರ್ತವ್ಯವೆಂದು ಭಾವನೆ ಮಾಡುತ್ತೇವೆ. ರಾಜ್ಯ ಭಾಷೆ ಮತ್ತು ರಾಷ್ಟ್ರ ಭಾಷೆ ಮತ್ತು ಸಮಗ್ರತೆ ಇವೆಲ್ಲವೂ ಕೂಡ ದೇಶದಲ್ಲಿ ಒಂದುಗೂಡಿ ಕೆಲಸ ಮಾಡತಕ್ಕ

(ಶ್ರೀ ಎಸ್. ಶಿವಪ್ಪ)

ಕಾಲದಲ್ಲಿ, ಈ ಭಾಷೆಯ ಬಗ್ಗೆ ದೇಶದಲ್ಲಿ ಉಂಟಾಗಿರತಕ್ಕ ಚಳುವಳಿಯನ್ನು ನಾವು ನೋಡಿದ್ದೇವೆ. ಇದಕ್ಕೆ ಕಾರಣವೆಂದರೆ ಉತ್ತರದವರು ದಕ್ಷಿಣದವರ ಮೇಲೆ ಕಡ್ಡಾಯವಾಗಿ ಹಿಂದಿಯನ್ನು ಹೇರ ಬೇಕು ಎಂದು ಹೊರಟಿರುವುದು. ಅವರ ಒಂದು ಹಠಮಾರಿತನದಿಂದ ಇಷ್ಟೊಂದು ಗೊಂದಲ ವಾಗುವುದಕ್ಕೆ ಕಾರಣವಾಗಿದೆ. ಈ ಭಾಷಾ ಗೊಂದಲ ಎಂಬುದು ಕಲೆ ಮತ್ತು ಸಾಹಿತ್ಯದ ಕಡೆಗೂ ಸಹ ಹೋಗಿದೆ. ಒಂದು ರಾಜ್ಯದಲ್ಲಿ ತಯಾರಾದ ಚಲನಚಿತ್ರವನ್ನು ಮತ್ತೊಂದು ರಾಜ್ಯದಲ್ಲಿ ಅಂದರೆ ಬೊಂಬಾಯಿನವರು ಮದ್ರಾಸ್‌ನಲ್ಲಿ ತಯಾರಾದ ಚಿತ್ರವನ್ನು, ಮದ್ರಾಸ್‌ನವರು ಬೊಂಬಾ ಯಿನಲ್ಲಿ ತಯಾರಾದ ಚಿತ್ರವನ್ನು ವಿರೋಧ ಮಾಡುತ್ತಿದ್ದಾರೆ. ನಮ್ಮ ರಾಜ್ಯದಲ್ಲೂ ಅಂತಹ ಸಂದರ್ಭ ಬರಬಹುದೆಂದು ಕಾಣುತ್ತದೆ. ಈ ಭಾಷಾ ಮೋಹ ಎಂಬುದು ಕಲೆ ಮತ್ತು ಸಾಹಿ ತ್ಯಕ್ಕೂ ಹೋಗಬಾರದು. ಕಲೆಗೂ ಭಾಷೆಗೂ ಸಂಬಂಧವಿಲ್ಲ. ಕಲೆ ಯಾವ ಭಾಷೆಯದ್ದೇ ಆಗಲಿ, ಉತ್ತೇಜನ ಕೊಡಬೇಕು. ಕಲೆಯ ಬಗ್ಗೆ ಯಾರೂ ಸಹ ದ್ವೇಷಸಾಧನೆ ಮಾಡುವುದಕ್ಕೆ ಹೋಗ ಬಾರದು. ಈ ಭಾಷೆಯ ಬಗ್ಗೆ ಒಂದು ಪರಿಹಾರವನ್ನು ಸೂಚಿಸುವುದು ಈ ಮನೆಯ ಸದಸ್ಯರ ಕರ್ತವ್ಯವೆಂದು ನಾನು ತಿಳಿದಿದ್ದೇನೆ. ಭಾಷೆಗೆ ಸಂಬಂಧಪಟ್ಟ ನಿರ್ಣಯ ಈ ಸಭೆಯ ಮುಂದೆ ಬಂದಾಗ ನಮ್ಮ ಅಭಿಪ್ರಾಯವನ್ನು ತಿಳಿಸುತ್ತೇವೆ.

ಇನ್ನು ಈ ಬಡ್ಜೆಟ್‌ನಲ್ಲಿ ಕೈಗಾರಿಕಾ ನೀತಿಯ ಬಗ್ಗೆ ಮೊದಲನೆಯದಾಗಿ ಪ್ರಾರಂಭ ಮಾಡಿದ್ದೀರಿ. ನಾನು ಕೈಗಾರಿಕಾ ನೀತಿಗಳನ್ನು ಕುರಿತು ಒಂದೆರಡು ವಿಚಾರಗಳನ್ನು ಹೇಳುತ್ತೇನೆ. ನಮ್ಮ ಮೈಸೂರು ರಾಜ್ಯದಲ್ಲಿ ಕೈಗಾರಿಕಾ ಕ್ಷೇತ್ರವು ಕುಂಠಿತವಾಗಿ ಮುನ್ನಡೆಯುತ್ತಿದೆ ಎಂಬು ದನ್ನು ನಾವು ಒಪ್ಪಿಕೊಳ್ಳಬೇಕಾಗಿದೆ. ನಿಮ್ಮ ಭಾಷಣದಲ್ಲಿ ಸರ್ಕಾರಿ ಉದ್ಯಮಗಳು ಮತ್ತು ಖಾಸಗೀ ಉದ್ಯಮಗಳು ಎರಡೂ ಸೇರಿ ನಮ್ಮ ಕೈಗಾರಿಕಾ ಉದ್ಯಮಗಳು ಮುನ್ನಡೆಯಬೇಕಾಗಿದೆ ಎಂದು ಹೇಳಿದ್ದೀರಿ. ಅದು ಹೇಗೆ ಸಾಧ್ಯ ಎಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ. ಸಮಾಜವಾದ ಮತ್ತು ಪ್ರಜಾಪ್ರಭುತ್ವವನ್ನು ಒಪ್ಪಿರುವ ರಾಜ್ಯ ನಮ್ಮದು. ಅದರಂತೆ ಕಾಂಗ್ರೆಸ್ ನವರಾದ ನೀವೂ ಸಹ ಒಪ್ಪಿಕೊಂಡಿದ್ದೀರಿ, ಭೇಷ್! ಆದರೆ ಆ ಒಂದು ತತ್ವವನ್ನು ನೀವು ಎಷ್ಟರ ಮಟ್ಟಿಗೆ ಪಾಲನೆ ಮಾಡುತ್ತಿದ್ದೀರಿ ಎಂಬುದನ್ನು ವಿಚಾರ ಮಾಡಬೇಕಾಗಿದೆ. ಈ ಒಂದು ತತ್ವ ವನ್ನು ಸರಿಯಾಗಿ ಪಾಲನೆ ಮಾಡದಿದ್ದರೆ ಈ ರಾಜ್ಯ ಎಲ್ಲಿಗೆ ಹೋಗಿ ನಿಲ್ಲುತ್ತದೆ ಎಂಬುದನ್ನು ವಿಚಾರ ಮಾಡಬೇಕಾಗಿದೆ. ಇಡೀ ಭಾರತದಲ್ಲಿ ಮೈಸೂರು ರಾಜ್ಯದಲ್ಲಿ ಮೊಟ್ಟಮೊದಲಿಗೆ ಮುಖ್ಯವಾದಂಥ ಕಾರ್ಖಾನೆಗಳನ್ನು ಸರ್ಕಾರದವರೇ ನೇರವಾಗಿ ಪ್ರಾರಂಭ ಮಾಡಿದರು. ಭದ್ರಾವತಿಯಲ್ಲಿರುವ ಕಬ್ಬಿಣದ ಕಾರ್ಖಾನೆ, ವಿದ್ಯುಚ್ಛಕ್ತಿ ತಯಾರು ಮಾಡುವ ಉದ್ಯಮ, ಗಂಧದ ಎಣ್ಣೆ ಕಾರ್ಖಾನೆ ಮೊದಲಾದ ಮುಖ್ಯಮುಖ್ಯವಾದಂಥ ಕಾರ್ಖಾನೆಗಳನ್ನು ಮೈಸೂರು ರಾಜ್ಯದಲ್ಲಿ ಇಡೀ ಭಾರತ ದೇಶದಲ್ಲಿಯೇ ಮೊಟ್ಟಮೊದಲಿಗೆ ಸರ್ ಎಂ. ವಿಶ್ವೇಶ್ವರಯ್ಯನವರ ಕಾಲದಲ್ಲಿ ಇದ್ದ ಬಂಡವಾಳ ದಲ್ಲಿಯೇ ಪ್ರಾರಂಭ ಮಾಡಿದ ಕೀರ್ತಿ ನಮ್ಮ ರಾಜ್ಯಕ್ಕೆ ಸಲ್ಲುತ್ತದೆ. ಈ ಸರ್ಕಾರ ಅಂದಿನ ಕಾಲದಲ್ಲಿ ಸಮಾಜವಾದದ ನೀತಿಯನ್ನು ಮನಗಂಡಿದ್ದರೂ ಸಹ ಇತ್ತೀಚೆಗೆ ಬಂದಂಥ ಸರ್ಕಾರ ಸಮಾಜವಾದ ವನ್ನು ಬರೀ ಬಾಯಿ ಮಾತಿನಲ್ಲಿ ಜೋರು ಜೋರಾಗಿ ಹೇಳಿಕೊಂಡು, ಇರುವ ಕಾರ್ಖಾನೆಗಳನ್ನು ಬಂಡವಾಳಶಾಹಿಗಳಿಗೆ ವಹಿಸುತ್ತಿದ್ದಾರೆ. ಸಮಾಜವಾದವನ್ನು ಗಾಳಿಗೆ ತೂರಿಬಿಡುತ್ತಿದ್ದಾರೆ. ಗುಲ್ಬರ್ಗದಲ್ಲಿರುವ ಎಂ.ಎಸ್.ಕೆ. ಮಿಲ್‌ಗೆ ಕೋಟಿಗಟ್ಟಲೆ ಹಣವನ್ನು ಸುರಿದಿರಿ. ಇವತ್ತಿನ ದಿವಸ ಸರ್ಕಾರದವರೇ ಅದನ್ನು ನಡೆಸುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದರೆ ನಿಮಗೆ ಏನು ಯೋಗ್ಯತೆ ಇದೆಯೆಂಬುದನ್ನು ಪ್ರಶ್ನೆ ಮಾಡಬೇಕಾಗುತ್ತದೆ. ಗುಲ್ಬರ್ಗದಲ್ಲಿರುವ ಗಿರಣಿಯನ್ನು ಒಬ್ಬ ಖಾಸಗೀಯವರು ವಹಿಸಿಕೊಂಡು ನಡೆಸುತ್ತೇವೆಂದು ಹೇಳುತ್ತಿರುವಾಗ ಸರ್ಕಾರದವರೇ ನಡೆಸು ವುದಕ್ಕೆ ಏತಕ್ಕೆ ಶಕ್ತಿಯಿಲ್ಲ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ನಿಮಗೆ ಸಲಹೆ ಕೊಡಲು ಒಳ್ಳೆಯ ತಜ್ಞರಿದ್ದಾರೆ. ಈಗಲೂ ಸಹ ಸರ್ಕಾರದವರು ಮನಸ್ಸು ಮಾಡಿದರೆ ಈ ಮಿಲ್ಲನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಸಾಧ್ಯವಿದೆ. ನಿಮಗೆ ನಡೆಸಿಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲದ್ದು, ಒಬ್ಬ ಖಾಸಗೀಯವರು ನಡೆಸುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ಆ ಮಿಲ್ಲನ್ನು ಖಾಸಗೀಯವರಿಗೆ ವಹಿಸುತ್ತಿರುವುದನ್ನು ನೋಡಿದರೆ ನಮಗೆ ಅನುಮಾನ ಬರುತ್ತಿದೆ. ಸರ್ಕಾರ ದವರು ಮೊದಲು ಬಂಡವಾಳವನ್ನು ಹಾಕಿ ಕೆಲವು ಕಾರ್ಖಾನೆಗಳನ್ನು, ಕೆಲವು ಗಿರಣಿಗಳನ್ನು ಪ್ರಾರಂಭ ಮಾಡಿ ನಂತರ ತಮ್ಮಲ್ಲಿ ನಡೆಸಿಕೊಂಡು ಹೋಗುವುದಕ್ಕೆ ಬಂಡವಾಳವಿಲ್ಲವೆಂದು ಖಾಸಗಿ ಯವರಿಗೆ ವಹಿಸುತ್ತಿರುವುದನ್ನು ನೋಡಿದರೆ, ಇದರ ಹಿನ್ನೆಲೆ ಏನೋ ಇದೆ ಎನ್ನುವ ಸಂಶಯ ಸ್ವಾಭಾವಿಕವಾಗಿ ಎಲ್ಲರಲ್ಲೂ ಉದ್ಭವವಾಗುತ್ತದೆ. ಸರ್ಕಾರದ ಹಣವನ್ನು ಸುರಿದು ಪ್ರಾರಂಭ

ಮಾಡಿದಂಥ ಕಾರ್ಖಾನೆಗಳನ್ನು ನಂತರದಲ್ಲಿ ನಡೆಸಿಕೊಂಡು ಹೋಗಲು ಬಂಡವಾಳವಿಲ್ಲವೆಂದು ತಮಗೆ ಬೇಕಾದವರಿಗೆ ಆ ಕಾರ್ಖಾನೆಗಳನ್ನು ವಹಿಸುತ್ತಿರುವುದರ ಬಗ್ಗೆ ನಮಗೆ ಶಂಕೆ ಬರುತ್ತಿದೆ. ಇವತ್ತಿನದಿವಸದವರೆಗೂ ಈ ಸರ್ಕಾರದವರು ಲಕ್ಷ ಲಕ್ಷಗಟ್ಟಲೆ ಹಣವನ್ನು ಖರ್ಚು ಮಾಡಿ ಬೇಕಾದಷ್ಟು ಜನ ತಜ್ಞರನ್ನು ಅಮೆರಿಕಾ, ರಷ್ಯಾ, ಜರ್ಮನಿ, ಜಪಾನ್ ಮುಂತಾದ ದೇಶಗಳಿಗೆ ಕಳಿಸಿದ್ದಾರೆ. ಅವರುಗಳು ಅಲ್ಲಿ ವಿಶೇಷ ತರಬೇತಿ ಪಡೆದು ವಾಪಸ್ ಬರುತ್ತಿದ್ದಾರೆ. ಇಷ್ಟೊಂದು ತಜ್ಞರನ್ನು ತಾವು ಇಟ್ಟುಕೊಂಡೂ ಸಹ ಸರ್ಕಾರದ ಅಧೀನದಲ್ಲಿರುವ ಕಾರ್ಖಾನೆಗಳನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಬಂದಿರುವ ಕಷ್ಟವಾದರೂ ಏನು ಎಂಬುದನ್ನು ಸರ್ಕಾರದವರು ಸ್ಪಷ್ಟವಾಗಿ ತಿಳಿಸಬೇಕು. ತಮಗೆ ಬೇಕಾದಂಥ ಕೆಲವು ಏಜೆನ್ಸಿಗಳನ್ನು ಬೇರೆ ದೇಶದಿಂದ ಕರೆದುಕೊಂಡು ಬಂದಿದ್ದೀರಿ. ಮಾನ್ಯ ಆರ್ಥಿಕ ಮಂತ್ರಿಗಳೂ ಸಹ ಎರಡು ಸಾರಿ ವಿದೇಶಕ್ಕೆ ಹೋಗಿ ಬಂದಿದ್ದಾರೆ. ಅಲ್ಲಿಗೆ ಹೋಗಿ ಏನು ಸಾಧನೆ ಮಾಡಿಕೊಂಡು ಬಂದರು ಎಂದು ಕೇಳುತ್ತೇನೆ. ಅಲ್ಲಿ ಏನೇನು ನೋಡಿದಿರಿ, ಅಲ್ಲಿಂದ ನಮ್ಮ ರಾಜ್ಯಕ್ಕೆ ಏನೇನು ತಂದಿರಿ ಮತ್ತು ಏನು ಕೆಲಸ ಮಾಡಿಕೊಂಡು ಬಂದಿರಿ ಎಂದು ಕೇಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅಲ್ಲಿಯ ಆನಂದ ನೋಡುವುದಕ್ಕೆ ಹೋಗಿದ್ದರು, ಮತ್ತು ಅಲ್ಲಿಂದ ನಮ್ಮ ರಾಜ್ಯಕ್ಕೆ ಆನಂದವನ್ನು ತಂದಿದ್ದಾರೆ.

ಶ್ರೀ ಎಸ್. ಶಿವಪ್ಪ.—ಸರ್ಕಾರದ ವತಿಯಿಂದ ತಾವು ಹೋಗಬಾರದಾಗಿತ್ತು. ತಾವು ವಿದೇಶಕ್ಕೆ ಹೋಗುವಾಗ ತಮ್ಮ ಮಿತ್ರರು, ಸರ್ಕಾರೀ ಅಧಿಕಾರಿಗಳನ್ನು ಸಹ ಕರೆದುಕೊಂಡು ಹೋಗಿದ್ದೀರಿ. ಅಲ್ಲಿಂದ ಬಂದಮೇಲೆ ಆ ಬಗ್ಗೆ ಕೊಟ್ಟಂಥ ವರದಿಯಾದರೂ ಏನು ? ಈ ದೇಶಕ್ಕೆ ಆದಂಥ ಸಾಧನೆಯಾದರೂ ಏನು ? ಅಲ್ಲದೆ ಮುಖ್ಯಮಂತ್ರಿಗಳು ಮತ್ತು ಆರ್ಥಿಕ ಮಂತ್ರಿಗಳಾದ ತಾವು ಜೋಡಿಯಾಗಿ ಕೂಡಿಕೊಂಡು ಕಲ್ಕತ್ತಾ, ಬೊಂಬಾಯಿ ಮೊದಲಾದ ದೊಡ್ಡ ದೊಡ್ಡ ಪಟ್ಟಣಗಳಿಗೆ ಹೋಗಿ ಅಲ್ಲಿಯ ಕೋಟ್ಯಾಧೀಶ್ವರರ ಮನೆ ಬಾಗಿಲನ್ನು ತಟ್ಟಿ ಈ ರಾಜ್ಯದಲ್ಲಿ ಉದ್ಯಮಗಳನ್ನು ಸ್ಥಾಪಿಸುವುದಕ್ಕೆ ಬನ್ನಿ ಎಂದು ಆಹ್ವಾನ ಕೊಟ್ಟಿರಿ. ಇದು ಯಾವ ಸರ್ಕಾರಕ್ಕೂ ಮರ್ಯಾದೆ ತರುವ ವಿಷಯವಲ್ಲ. ಸಮಾಜವಾದದ ಬಗ್ಗೆ ನಿಮಗೆ ಯೋಗ್ಯತೆಯಿಲ್ಲವೆಂದು ಹೇಳಬೇಕಾಗಿದೆ. ಇವತ್ತಿನ ದಿವಸ ಬಿರ್ಲಾ, ಟಾಟಾ ಮುಂತಾದ ದೊಡ್ಡ ದೊಡ್ಡ ಉದ್ಯಮಿಗಳ ಮನೆ ಬಾಗಿಲಿಗೆ ಹೋಗಿ ನಮ್ಮ ರಾಜ್ಯದಲ್ಲಿ ಬಂದು ಉದ್ಯಮಗಳನ್ನು ಸ್ಥಾಪಿಸಬೇಕೆಂದು ಭಿಕ್ಷಾಟನೆ ಮಾಡುತ್ತಿದ್ದೀರಿ. ನಮ್ಮ ರಾಜ್ಯದಲ್ಲಿ ಅಪಾರವಾದಂಥ ಅರಣ್ಯ ಸಂಪತ್ತು ಇದೆ. ವಿದ್ಯುಚ್ಛಕ್ತಿ ಅಪಾರವಾಗಿ ಉತ್ಪತ್ತಿಯಾಗುತ್ತದೆ. ಬೇಕಾದಷ್ಟು ನೀರಿನ ಅನುಕೂಲವಿದೆ. ಇಷ್ಟೆಲ್ಲಾ ಅನುಕೂಲತೆಗಳನ್ನು ಇಟ್ಟುಕೊಂಡು ಸರ್ಕಾರದವರು ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕೆ ನಮಗೆ ಯೋಗ್ಯತೆಯಿಲ್ಲವೆಂದು ಹೇಳುವುದಾದರೆ, ಇನ್ನು ಈ ರಾಜ್ಯವನ್ನಾದರೂ ಏತಕ್ಕೆ ಆಳಬೇಕು ಎಂದು ಕೇಳುತ್ತೇನೆ. ದಿವಂಗತ ಸರ್ ಎಂ. ವಿಶ್ವೇಶ್ವರಯ್ಯನವರು ಕೇವಲ ಒಂದು ಅಥವಾ ಒಂದೂವರೆ ಕೋಟಿ ರೂಪಾಯಿಗಳ ಬಂಡವಾಳದಲ್ಲಿ ಎಷ್ಟೊಂದು ಸಾಧನೆಗಳನ್ನು ಈ ರಾಜ್ಯದಲ್ಲಿ ಮಾಡಿಕೊಟ್ಟು ಹೋಗಿದ್ದಾರೆ ಎಂಬುದನ್ನು ಸರ್ಕಾರದವರು ಯೋಚನೆ ಮಾಡಬೇಕು. ಈ ರಾಜ್ಯದ ಆದಾಯ 194 ಕೋಟಿ ರೂಪಾಯಿಗಳಿದ್ದರೂ ಸಹ, ಇವತ್ತಿನದಿವಸ ಇರುವ ಕಾರ್ಖಾನೆಗಳನ್ನೇ ನಡೆಸಿಕೊಂಡು ಹೋಗುವುದಕ್ಕಾಗುವುದಿಲ್ಲ ಎಂದು ಸರ್ಕಾರದವರು ಹೇಳುವುದಾದರೆ ಇದಕ್ಕಿಂತ ಅಲಕ್ಷ್ಯದಿಂದ ಕೂಡಿದ ಸರ್ಕಾರ ಮತ್ತೊಂದು ಇಲ್ಲವೆಂದು ಧಾರಾಳವಾಗಿ ಹೇಳಬಹುದು. ದೇಶದ ಆರ್ಥಿಕ ಸ್ಥಿತಿ ಇಷ್ಟೊಂದು ದುಸ್ಥಿತಿಗೆ ಬಂದಿರುವುದನ್ನು ನೋಡಿ ಜನರು ಸಂಕಟಪಡುತ್ತಿದ್ದಾರೆ. ಸರಿಯಾಗಿ ಆಡಳಿತವನ್ನು ನಡೆಸಿಕೊಂಡು ಬಂದಿದ್ದರೆ ಈ ರಾಜ್ಯದಲ್ಲಿ ಸರ್ಕಾರದವರೇ ದೊಡ್ಡ ದೊಡ್ಡ ಕಾರ್ಖಾನೆಗಳನ್ನು ಸ್ಥಾಪಿಸಬಹುದಾಗಿತ್ತು. 10 ವರ್ಷದಲ್ಲಿ 351 ಕೈಗಾರಿಕೆಗಳಿಗೆ ಲೈಸನ್ಸ್ ಕೊಡಲಾಗಿದೆಯೆಂದು ಸರ್ಕಾರದವರು ಹೇಳಿದ್ದಾರೆ. ಈ 351 ಕೈಗಾರಿಕೆಗಳಿಂದ ಎಷ್ಟೊಂದು ಉತ್ಪತ್ತಿಯಾಯಿತು ಎಂಬ ಬಗ್ಗೆ ನನಗೆ ಸರಿಯಾದ ಅಂಕಿ ಅಂಶಗಳನ್ನು ಕೊಡಿ. ಈ 351 ಕೈಗಾರಿಕೆಗಳು ಸ್ಥಾಪನೆಯಾದ ಮೇಲೆ ಎಷ್ಟೊಂದು ಜನಗಳ ನಿರುದ್ಯೋಗ ಪರಿಹಾರವಾಯಿತು, ಎಷ್ಟು ಉತ್ಪಾದನೆಯಾಯಿತು ಎಂಬ ಬಗ್ಗೆ ಸರ್ಕಾರದವರೇ ಯೋಚನೆ ಮಾಡಬೇಕಾಗಿದೆ. ಇವತ್ತಿನ ದಿವಸ ಸರ್ಕಾರದವರು ತಾವೇ ನಡೆಸುವ ಕೆಲವು ಕಾರ್ಖಾನೆಗಳನ್ನು ಕಾರ್ಪೊರೇಷನ್‌ಗಳನ್ನಾಗಿ ಮಾಡಿದ್ದಾರೆ. ಭದ್ರಾವತಿ ಕಬ್ಬಿಣದ ಕಾರ್ಖಾನೆಯ ವ್ಯವಹಾರ ಒಂದು ದೊಡ್ಡ ಪರ್ವವಾಗಿದೆಯೆಂದು ಹೇಳಬಹುದು. ಈ ಕಾರ್ಖಾನೆಯ ಬಗ್ಗೆ ಶ್ರೀಮಾನ್ ಸಿದ್ಧವೀರಪ್ಪನವರು ಒಂದು ಪ್ರಶ್ನೆಯನ್ನು ಸರ್ಕಾರಕ್ಕೆ ಕಳಿಸಿದಾಗ ಅದಕ್ಕೆ ಸರಿಯಾದ ಉತ್ತರ ಸರ್ಕಾರದಿಂದ ಬರಲಿಲ್ಲ. ಸರ್ಕಾರದವರು ತಮಗೆ ಬೇಕಾದವರಿಗೆ 40-50 ಕೋಟಿ ರೂಪಾಯಿಗಳ ಕಂಟ್ರಾಕ್ಟನ್ನು ಕೊಡಿಸುವುದು. ಈ ರೀತಿ ಕೊಡುವಾಗ ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರಿಗೂ ಮತ್ತು ಕಂಟ್ರಾಕ್ಟರಿಗೂ ಬೇರೆಯವರಿಗೆ ತಿಳಿಯದಂತೆ

(ಶ್ರೀ ಎಸ್. ಶಿವಪ್ಪ)

ಒಂದು ಪರತತ್ತು ಆಗಿರುತ್ತದೆ. ಈ ಸರ್ಕಾರದವರು ತಮಗೆ ಬೇಕಾದವರಿಗೆ ಕಂಟ್ರಾಕ್ಟುಗಳನ್ನು ಕೊಡುವುದು, ತಮಗೆ ಬೇಕಾದವರಿಗೆ ಸರ್ಕಾರದ ಉದ್ಯಮಗಳನ್ನು ವಹಿಸಿಕೊಡುವುದನ್ನು ನೋಡಿದರೆ, ಒಂದು ಕಾಲದಲ್ಲಿ ಮೈಸೂರು ರಾಜ್ಯ ಯಾವ ಒಂದು ಕೈಗಾರಿಕೆಗೋಸ್ಕರವಾಗಿ ಹೆಸರು ಪಡೆದಿತ್ತೋ, ಆ ಹೆಸರನ್ನು ಹಾಳುಮಾಡುವುದಕ್ಕೆ ಹೊರಟಿದ್ದಾರೆಂದು ಹೇಳಬಹುದು. ಇರುವ ಕೈಗಾರಿಕೆಗಳನ್ನು ಖಾಸಗಿಯವರಿಗೆ ವಹಿಸುವುದು, ಬೇರೆ ದೇಶದವರನ್ನು ನಮ್ಮ ರಾಜ್ಯಕ್ಕೆ ಬಂದು ಕಾರ್ಖಾನೆಗಳನ್ನು ಸ್ಥಾಪಿಸಿ ಎಂದು ಭಿಕ್ಷಾಯಾಚನೆ ಮಾಡುತ್ತಿರುವ ಜೋಣ್ ನಿಮಗೇ ಸೇರಿದ್ದು ಎಂದು ಹೇಳಬೇಕಾಗಿದೆ.

2-30 P.M.

ಕೈಗಾರಿಕೆ ಆದಮೇಲೆ ಈ ವ್ಯವಸಾಯ ಕ್ಷೇತ್ರದಲ್ಲಿ ಮಾಡಿರುವ ಸಾಧನೆಯ ಬಗ್ಗೆ ಇವತ್ತಿನ ದಿವಸ ತಾವು ಬಹಳ ದೊಡ್ಡದಾಗಿ ಹೇಳುತ್ತಿದ್ದೀರಿ. ವ್ಯವಸಾಯ ಕ್ಷೇತ್ರದಲ್ಲಿ ಅಪಾರವಾದ ಹಣವನ್ನು ಖರ್ಚು ಮಾಡಿದ್ದೇವೆ ಮತ್ತು ಇದರಿಂದಾಗಿ ನಮ್ಮ ದೇಶದಲ್ಲಿ ಆಹಾರ ಉತ್ಪತ್ತಿ ಬಹಳ ಜಾಸ್ತಿ ಯಾಗುತ್ತದೆ ಎನ್ನತಕ್ಕಂತಹ ಮಾತುಗಳನ್ನು ಹೇಳುತ್ತಿದ್ದಾರೆ. 64—65, 66—67ರಲ್ಲಿ ಎಷ್ಟು ಇತ್ತು ಎಂದರೆ 40—42 ಲಕ್ಷ ಟನ್, ಇದ್ದು 66—67 ರಲ್ಲಿ 35 ಲಕ್ಷ ಟನ್ನಿಗೆ ಇಳಿದುಹೋಗಿದೆ. ಇವತ್ತಿನ ದಿವಸ ನಿಮ್ಮ ನೀತಿಯಿಂದಾಗಿ ಎಷ್ಟೋ ಬಡ ರೈತರಿಗೆ ಸರ್ಕಾರದಿಂದ ಸಹಕಾರ, ಸಹಾಯ ದೊರಕುತ್ತಾ ಇಲ್ಲ. ನೀವು ಕೊಡತಕ್ಕ ಸ್ಕೀಮಿನಿಂದ, ಸರ್ಕಾರದ ವತಿಯಿಂದ ಆಗತಕ್ಕ ಸಹಾಯ ರೈತನಿಗೆ ಇಂದು ದೊರೆಯುತ್ತಾ ಇಲ್ಲ. ಇವತ್ತು ಯಾವನು ಕಾಂಗ್ರೆಸ್‌ಪ್ರೇಮಿಯಾಗಿದ್ದಾನೋ, ಯಾವನು ಕಾಂಗ್ರೆಸ್ ಬಾಂಧವನಾಗಿದ್ದಾನೋ ಅಂಥವನಿಗೆ ಮಾತ್ರ ಸರ್ಕಾರದ ವತಿಯಿಂದ ರಕ್ಷಣೆ ಪಡೆಯುವುದಕ್ಕೆ ಸಾಧ್ಯವಿದೆ, ಪಡೆಯುತ್ತಾನೆ. ಅವನಿಗೆ ಏನು ಬೇಕಾದರೂ ಸಹಕಾರ ಸಂಘಗಳ ಮೂಲಕ ದೊರೆಯುತ್ತದೆ. ಆದರೆ ಬೇರೆ ರೀತಿಯ ಜನರಿಗೆ ಅದು ದೊರೆಯುತ್ತಾ ಇಲ್ಲ. ಹೀಗೆ ಸಹಕಾರಿ ಸಂಘಗಳು ಇಂದು ಎಲ್ಲಾ ಕೆಟ್ಟುಹೋಗಿವೆ. ದೇಶದಲ್ಲಿರತಕ್ಕ ಒಂದು ಕೆಟ್ಟ ಕ್ಷೇತ್ರವೆಂದರೆ ಅದು ಸಹಕಾರಿ ಸಂಘಗಳ ಕ್ಷೇತ್ರ. ಇವು ನಿಜವಾಗಿಯೂ ಬಡವನಿಗೆ ರಕ್ಷಣೆಯನ್ನು ಕೊಡುತ್ತಿಲ್ಲ. ನಿಜವಾಗಿಯೂ ಇಂದು ರೈತನು ಚಿಂತಾಜನಕ ಪರಿಸ್ಥಿತಿಯಲ್ಲಿದ್ದಾನೆ. ಇವತ್ತು ಈ ವ್ಯವಸಾಯ ಕ್ಷೇತ್ರದಲ್ಲಿ ನೋಡಿ, ಮತ್ತು ಈ ಒಂದು ಗ್ರೇಪ್ಸ್ ಕಲ್ಟಿವೇಶನ್ ನೋಡಿ. ರಾಗಿ ಬೆಳೆಯುವ ರೈತ, ಜೋಳ ಬೆಳೆಯುವ ರೈತರಿಗೆ ಏನು ಸಹಾಯ ಮಾಡುತ್ತಿದ್ದಾರೆ ? ಇಂದು ಬೆಂಗಳೂರಿನ ಸುತ್ತ ಮುತ್ತಲು ಲಕ್ಷಾಧೀಶರು 5-10 ಎಕರೆಗಳಲ್ಲಿ ಈ ಹಣ್ಣಿನ ತೋಟಗಳನ್ನು ಬೆಳೆಸುತ್ತಿದ್ದಾರೆ. ಗ್ರೇಪ್ ಕಲ್ಟಿವೇಶನಿಗೆ 15 ಕೋಟಿ ರೂಪಾಯಿಗಳನ್ನು ಹಂಚಿದ್ದಾರೆ. ಭಾಷಣದ 15 ನೇ ಪುಟದಲ್ಲಿ ಇದರ ಬಗ್ಗೆ ಹೇಳಿದ್ದಾರೆ. ಈ ರೀತಿಯಲ್ಲಿ ಇಂದು ಬಡ ರೈತರಿಗೆ ಸರ್ಕಾರದಿಂದ ದುಡ್ಡು ಸಿಗುತ್ತಾ ಇಲ್ಲ. ಮುಂದೆ ಹೇಳುತ್ತಿದ್ದೀರಿ—ದೇಶದಲ್ಲಿ ವ್ಯವಸಾಯದಿಂದಾಗಿ ಅಗ್ರಿಕಲ್ಚರಲ್ ಇನ್‌ಕಂ ಜಾಸ್ತಿ ಯಾಗಿದೆ. ಹಳ್ಳಿಗಳಲ್ಲಿ ರೈತರೆಲ್ಲರೂ ದುಡ್ಡಿನ ಸಂಪಾದನೆಯನ್ನು ಮಾಡುತ್ತಿದ್ದಾರೆ, ಆದ್ದರಿಂದ ಯಾವ ರೀತಿ ತೆರಿಗೆ ಹಾಕಬೇಕು ಎನ್ನತಕ್ಕಂತಹ ವಿಚಾರವನ್ನು ಯೋಚನೆ ಮಾಡಬೇಕು ಎನ್ನುವ ಮಟ್ಟಕ್ಕೆ ತಂದಿಟ್ಟಿದ್ದಾರೆ. ತಾವು ಯಾರನ್ನು ನೋಡಿ ಈ ಲೆಕ್ಕಾಚಾರಕ್ಕೆ ಬಂದಿದ್ದೀರಿ ಸ್ವಾಮಿ ? ಯಾರೋ ಕೆಲವರು ದೊಡ್ಡ ದೊಡ್ಡ ಶ್ರೀಮಂತರನ್ನು ನೋಡಿ ರೈತರೆಲ್ಲಾ ಹಣ ಇದೆ, ಅವರು ಸುಖವಾಗಿದ್ದಾರೆ, ಅವರ ಆರ್ಥಿಕ ಸ್ಥಿತಿ ಉತ್ತಮವಾಗಿದೆ ಎಂದು ಭಾವನೆ ಮಾಡಿದರೆ, ಅದಕ್ಕಿಂತಲೂ ತಪ್ಪು ಭಾವನೆ ಬೇರೆ ಯಾವುದೂ ಇಲ್ಲವೆಂದು ಹೇಳಬೇಕಾಗಿದೆ, ಇವತ್ತಿನ ದಿವಸ ನೂರಕ್ಕೆ 90 ಭಾಗ ರೈತರು ಬಡರಾಗಿದ್ದಾರೆ. ಅವನಿಗೆ ಇರುವುದಕ್ಕೆ ಮನೆ ಇಲ್ಲ, ಮಕ್ಕಳನ್ನು ಓದಿಸುವುದಕ್ಕೆ ಶಕ್ತಿ ಇಲ್ಲ, ಬೆಳೆ ಬೆಳೆಯುವುದಕ್ಕೆ ಬೀಜವೂ ಇಲ್ಲ, ಗೊಬ್ಬರವೂ ಇಲ್ಲ. ಇಂಥ ಆರ್ಥಿಕ ಪೇಚಿಗೆ ಸಿಕ್ಕತಕ್ಕ ರೈತನಿಗೆ, ನೀವು ಯಾವ ರೀತಿಯಲ್ಲಿ ತೆರಿಗೆ ಹೆಚ್ಚು ಮಾಡಬೇಕೆಂದು ಯೋಚನೆ ಮಾಡುತ್ತಿದ್ದೀರೋ, ಆ ಯೋಚನೆಯನ್ನು ಬಿಟ್ಟುಬಿಡಬೇಕು. ಅದೇ ರೀತಿಯಲ್ಲಿ ತಾವು ಭೂಕಂದಾಯವನ್ನು ವಜಾ ಮಾಡುತ್ತೇವೆಂದು ಹೇಳಿದ್ದೀರಿ. ಹಿಂದೆ ಭಾಷಣದಲ್ಲಿ ಎರಡು ವಿಚಾರಗಳನ್ನು ಹೇಳಿದ್ದೀರಿ. ಒಂದು ಭೂಕಂದಾಯವನ್ನು ರದ್ದು ಮಾಡುವುದು. ಎರಡನೆಯದು ಪಾನನಿರೋಧವನ್ನು ರದ್ದು ಮಾಡುವುದು. ಅದರಲ್ಲಿ ನಿಮಗೆ ಹಣ ಬರತಕ್ಕ ಒಂದನ್ನು ಮಾತ್ರ ಕಾರ್ಯಾಚರಣೆಗೆ ತಂದಿದ್ದೀರಿ. ಆದರೆ ಭೂಕಂದಾಯವನ್ನು ರದ್ದು ಮಾಡತಕ್ಕ ವಿಚಾರವನ್ನು ಕೈಬಿಟ್ಟಿದ್ದೀರಿ. ಈ ವಚನವನ್ನು ನೀವು ಕೊಟ್ಟು ಅದನ್ನು ಪಾಲಿಸದೆ ಪಾಪವನ್ನು ಮಾಡಿದ್ದೀರಿ. ಇಂಥ ಕೆಲಸವನ್ನು ತಾವು ಮಾಡಬಾರದು. ಒಂದು ಕೈಯಿಂದ ಹಣ ಬರುತ್ತದೆ. ಪಾನನಿರೋಧದಿಂದ 12 ಕೋಟಿ ರೂಪಾಯಿ ಬರುತ್ತದೆ. ಈ 12

ಕೋಟಿ ರೂಪಾಯಿ ಬರುವಾಗ, ಆ ಲಕ್ಷ್ಮಿಯ ಸಹಾಯದಿಂದ ಬಡ ರೈತನ ಸಹಾಯಕ್ಕೆ ಹೋಗಿದ್ದರೆ, ಈ 12 ಕೋಟಿ ಸಂಪಾದನೆಮಾಡುವ ರೀತಿಯಲ್ಲಿ ಈ ಕಂದಾಯವನ್ನು ರದ್ದು ಮಾಡಿದ್ದರೆ ನಾನು ನಿಮ್ಮನ್ನು ನೀವು ಮಾಡಿದ ಕಾರ್ಯವನ್ನು, ಕೊಟ್ಟ ಭಾಷೆಯನ್ನು ಪರಿಪಾಲನೆ ಮಾಡಿದ್ದೀರಿ ಎಂದು ಹೇಳುತ್ತಿದ್ದೆ. ತಾವು ಏನು ವಚನ ಕೊಟ್ಟಿದ್ದೀರೋ, ಅದನ್ನು ಮಾಡದೆ ಇವತ್ತು ರೈತರಿಗೆ ಒಂದು ಮೋಸವನ್ನು ಮಾಡಿದ್ದೀರಿ. ದೇಶದ ಬೆನ್ನುಮೂಳೆಯಾಗಿರತಕ್ಕ ಬಡ ರೈತನ ರಕ್ಷಣೆ ಮಾಡದಿರತಕ್ಕದ್ದು ಅಕ್ಷಮ್ಯ ಅಪರಾಧವೆಂದು ನಾನು ಭಾವಿಸಿಕೊಂಡಿದ್ದೇನೆ. ಈಗಲಾದರೂ ನಾನು ಸರ್ಕಾರಕ್ಕೆ ಹೇಳುತ್ತಿದ್ದೇನೆ—ನೀವು ಯೋಚನೆ ಮಾಡಬೇಕು, ದೇಶದಲ್ಲಿ ಏನು ಹಿಂದೆ ಹೇಳಿದ್ದೀರೋ ಅದನ್ನು ಎಂದರೆ ಈ ಕಂದಾಯ ವಜಾಮಾಡತಕ್ಕ ವಿಚಾರವನ್ನು ನೀವು ಪರಿಶೀಲನೆ ಮಾಡಬೇಕು. ವಜಾ ಮಾಡುವುದಿಲ್ಲವೆಂದರೆ ಇದಕ್ಕೆ ಏನೋ ಒಂದು ಪ್ರಬಲವಾದ ಕಾರಣವಿದೆ. ನೀವು ಹೇಳತಕ್ಕ ಕಾರಣವೇನು? ಇವತ್ತಿನ ದಿವಸ ಕಂದಾಯ ವಜಾ ಮಾಡುವುದರಿಂದ ಅದನ್ನು ತುಂಬಿಸುವುದಕ್ಕೆ ಅಗ್ರಿಕಲ್ಚರಲ್ ಇನಕಂ ಟ್ಯಾಕ್ಸ್ ಹಾಕಬೇಕಾಗುತ್ತದೆ, ಅದಕ್ಕೋಸ್ಕರ ನಾವು ಇದನ್ನು ವ್ಯವಸಾಯಕ್ಕೆ ಹಾಕುತ್ತೇವೆ ಎಂದು ಹೇಳುತ್ತಿದ್ದೀರಿ. ಇವತ್ತು ಅಗ್ರಿಕಲ್ಚರಲ್ ಇನಕಂ ಟ್ಯಾಕ್ಸ್ ಇದ್ದೇ ಇದೆ. ಯಾರು ಹೆಚ್ಚಾಗಿ ಬೆಳೆ ಬೆಳೆಯುತ್ತಾನೋ, ಅಂಥವನ ಮೇಲೆ ಈ ಟ್ಯಾಕ್ಸ್ ಹಾಕಲು ಕಾನೂನು ಇದೆ. ಅದರಿಂದ ದೇಶಕ್ಕೆ ದುಡ್ಡು ಬರುತ್ತಿದೆ. ಆದರೆ ಈ ಸಣ್ಣ ಬಡವನಿಗೆ ಈ ತೆರಿಗೆಯನ್ನು ಹೇಗೆ ಹಾಕುತ್ತೀರಿ? ಅವನು ಹೇಗೆ ಕೊಡುತ್ತಾನೆ? ಅವನಿಗೆ ಲುಕ್ಸಾನು ಆದರೂ ನೀವು ರಕ್ಷಣೆಕೊಟ್ಟು ನೀವೇ ಸಾಲ ಕೊಟ್ಟು ರಕ್ಷಣೆ ಮಾಡತಕ್ಕ ಸಂದರ್ಭ ಇದೆ. ಅವನು ಹಾಕಿದ ಬೀಜ ವಾಪಸ್ಸು ಬರುತ್ತಾ ಇಲ್ಲ. ಅವನಿಗೆ ಅದಕ್ಕೆ ಬೇಕಾದ ಗೊಬ್ಬರವನ್ನು ಹಾಕಲು ಅವನ ಹತ್ತಿರ ಹಣವಿಲ್ಲ. ಆದ್ದರಿಂದ ನಾನು ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ; ಏನೆಂದರೆ, ನೀವು ಇನ್ನಾದರೂ ಭೂಕಂದಾಯವನ್ನು ರದ್ದುಮಾಡತಕ್ಕದ್ದನ್ನು ಪರಿಶೀಲನೆ ಮಾಡಲೇಬೇಕು, ಇಲ್ಲದಿದ್ದರೆ ದೇಶದ ರೈತರು ತಾವಾಗಿಯೇ ದಂಗೆ ಏಳುವರು. ತಾವು ಈ ವಿಚಾರವನ್ನು ಪುನಃ ತೆಗೆದುಕೊಂಡು ಕಂದಾಯವನ್ನು ವಜಾ ಮಾಡಬೇಕೆಂದು ಸರ್ಕಾರವನ್ನು ಪುನಃ ಪುನಃ ಒತ್ತಾಯ ಮಾಡಿ ಹೇಳುತ್ತೇನೆ.

ಇನ್ನು ಹಳ್ಳಿಗಳ ವಿಚಾರ ಬಂದಾಗ ದೇಶದಲ್ಲಿ ಅನೇಕ ಕಾರ್ಯಕ್ರಮಗಳನ್ನು ಮಾಡಿ ದೊಡ್ಡ ದೊಡ್ಡ ನೀರಾವರಿ ಸೌಕರ್ಯಗಳನ್ನು ಒದಗಿಸಿ ಕೊಟ್ಟಿದ್ದೀರಿ ಎಂದು ಹೇಳಿದ್ದೀರಿ. ಒಂದು ಸಣ್ಣ ವಿಚಾರ ಇದು. ನೀವು ಹಳ್ಳಿಯಿಂದ ಡೆಲ್ಲಿಯವರೆಗೆ ರಸ್ತೆಗಳನ್ನು ಮಾಡಿದ್ದೀರಿ. ಹೌದು. ಇವತ್ತಿನ ದಿವಸ ಕುಡಿಯುವ ನೀರಿನ ವಿಚಾರದಲ್ಲಿ ನೀವು 2 ಸಾವಿರದ 700 ಹಳ್ಳಿಗಳಿಗೆ ಕುಡಿಯುವ ನೀರಿನ ಬಾವಿ ಇಲ್ಲವೆಂದು ನಿಮ್ಮ ಸಂಖ್ಯೆಯಲ್ಲಿ ತೋರಿಸುತ್ತೀರಿ. ಮೂರು ಸಾವಿರದ 500 ಬಾವಿಗಳು ಅರ್ಧಂಬರ್ಧವಾಗಿವೆ. ಆದ್ದರಿಂದ ಸುಮಾರು 6 ಸಾವಿರ ಹಳ್ಳಿಗಳಲ್ಲಿ ಬಾವಿಗಳಿಲ್ಲ ಎಂದರೆ ನಮ್ಮ ಮೈಸೂರಿನಲ್ಲಿರತಕ್ಕ ಐದನೆಯ ಒಂದು ಭಾಗದಷ್ಟು ಹಳ್ಳಿಗಳಿಗೆ ಇವತ್ತಿನ ದಿವಸ ಕುಡಿಯುವ ನೀರಿಲ್ಲವೆಂದು ಹೇಳಿದರೆ, 68 ನೇ ಇಸವಿಯಲ್ಲಿ ಸುಖೀ ರಾಜ್ಯ ಸ್ಥಾಪನೆ ಮಾಡುತ್ತೇವೆಂದು ಹೇಳಿದರೆ, ಇದಕ್ಕಿಂತ ನಾಚಿಕೆಕೇಡಿನ ಪ್ರಶ್ನೆ ಮತ್ತೆಯಾವುದು ಇದೆ ಎಂದು ನಾನು ನಿಮ್ಮಲ್ಲಿ ಕೇಳುತ್ತೇನೆ. ಇದರಲ್ಲಿ, ಈ ವಿಚಾರದಲ್ಲಿ ನಿಮಗಾದರೂ ಸಮಾಧಾನವಾಗಿದೆಯೇ? ಸಮಾಧಾನವಾಗಿದ್ದರೆ ಏಕೆ ಈ ಹಣಕಾಸಿನ ಮುಂಗಡ ಪತ್ರವನ್ನು ಮಾಡಿದ್ದೀರಿ?

ಇನ್ನು ನಾಲ್ಕನೇ ಪ್ಲಾನ್‌ನಲ್ಲಿ ತಾವು ಹೇಳಿದ ಹಾಗೆ ಇದು ಎರಡು ವರ್ಷಗಳಲ್ಲೇ ಆಗಬೇಕಾಗಿತ್ತು ಎಂದರೆ, 1966 ರಲ್ಲಿ ಆಗಬೇಕಾದ ಪ್ಲಾನು ಎನ್ನುವುದು 1970 ರವರೆಗೂ ಹೋಗಿದೆ. ಹೀಗಾದರೆ ಯೋಜನೆ ವಿಚಾರದ ಬಗ್ಗೆ ಮಾತನಾಡುತ್ತಾ ಒಂದು ಎರಡು ಮತ್ತು ಮೂರು ಎಂದು ಮೂರು ಯೋಜನೆಗಳನ್ನು ಮಾಡಿ ಈ ದೇಶಕ್ಕೆ ಏನು ಸಾಧನೆ ಮಾಡಿದ್ದೀರಿ ಎನ್ನುವುದನ್ನು ತಾವು ಇಲ್ಲಿ ಯೋಚನೆ ಮಾಡಬೇಕು. ಎಲ್ಲಕ್ಕಿಂತಲೂ ಮುಖ್ಯವಾಗಿ ಮೈಸೂರು ದೇಶದಲ್ಲಿ ನೀರಾವರಿ ಯೋಜನೆಗಳು ಹೆಚ್ಚಾಗಿ ಆಗಬೇಕಾಗಿದೆ. ಮೈಸೂರು ದೇಶ ಭಾರತ ದೇಶದಲ್ಲೆಲ್ಲಾ ನೀರಾವರಿಯಲ್ಲಿ ಅತಿ ಹಿಂದೆ ಉಳಿದಿರತಕ್ಕ ದೇಶ ಎಂದರೆ ಇಲ್ಲಿ ಶೇಕಡ 7.5 ರಷ್ಟು ಮಾತ್ರ ನೀರಾವರಿ ಪ್ರದೇಶ ಇದೆ ಎನ್ನುವುದನ್ನು ನೀವು ಹಾಗೂ ನಾವು ಒಪ್ಪಿಕೊಂಡಿರುವ ವಿಚಾರ. ಇಷ್ಟು ಅತಿ ಹಿಂದುಳಿದಿರತಕ್ಕ ನಮ್ಮ ಮೈಸೂರು ದೇಶದಲ್ಲಿ ಒಂದು ಎರಡು ಮತ್ತು ಮೂರು ಯೋಜನೆಗಳನ್ನು ಮಾಡಿ ನೀರಾವರಿ ಯೋಜನೆಗಳ ಪ್ರದೇಶವನ್ನು ಏನಾದರೂ ಸ್ವಲ್ಪ ಹೆಚ್ಚು ಮಾಡಿದ್ದೀರಾ ಅಥವಾ ಇನ್ನೇನನ್ನಾದರೂ ಸಾಧನೆ ಮಾಡಿದ್ದೀರಾ ಎನ್ನುವುದನ್ನು ನೀವು ಯೋಚನೆ ಮಾಡದೇ ನೀವು ಮಾಡುವ ಹಣದ ಖರ್ಚಿನಲ್ಲಿ ಇಷ್ಟು ಹಣವನ್ನು ಉಳಿತಾಯ ಮಾಡಿದ್ದೇವೆ ಎಂದು ಹೇಳುತ್ತಿದ್ದೀರಿ. ಅದು ಯಾವ ಯಾವ ಬಾಬುಗಳಲ್ಲಿ ಉಪಯೋಗಿಸದೇ ಉಳಿತಾಯ ಮಾಡಿದ್ದೀರಿ ಎಂದರೆ ನಿಮ್ಮ ಫಿಸಿಕಲ್ ಟಾರ್ಜೆಟ್ ಸುಮಾರು 160 ಕೋಟಿ ಎಂದು ಇತ್ತು, ಇದಕ್ಕೆ ನೀರಾವರಿ ಪೊಟೆನಷಿಯಲ್ 16 ಲಕ್ಷ ಎಕರೆಗಳು

(ಶ್ರೀ ಎಸ್. ಶಿವಪ್ಪ)

ಇತ್ತು ಎಂದು ನೀವೇ ಸೌತ್ ಡಿವಿಜನ್‌ನಲ್ಲಿ ಮಾಡಿರುವ ಅಂದಾಜಿನ ಪ್ರಕಾರ ಇವೆ. ಎಂದರೆ ಸುಮಾರು ಶೇ 20.9 ರಷ್ಟು ನೀರಾವರಿ ಪೊಟೆನ್‌ಷಿಯಲ್ ಕ್ರಿಯೇಟು ಮಾಡಬೇಕು ಎಂದು ಇತ್ತು. ಇದನ್ನು ನೀವು ಮೂರು ಯೋಜನೆಗಳಲ್ಲಿ ಮಾಡಿ ಖರ್ಚು ಮಾಡಬೇಕಾಗಿತ್ತು. ಆದರೆ ನೀವು ಖರ್ಚು ಮಾಡಿರುವುದು ಎಷ್ಟು ಎಂದರೆ 149.64 ಖರ್ಚು ಮಾಡಬೇಕೆಂದು ಇನ್ನ ಅಂದಾಜಿನಲ್ಲಿ ನೀವು ಖರ್ಚು ಮಾಡಿದ್ದು ಎಷ್ಟು ಎಂದರೆ ಕೇವಲ 60 ಕೋಟಿಯಷ್ಟು ಮಾತ್ರ ಮತ್ತು ಇದರಿಂದ ನೀರಾವರಿ ಪೊಟೆನ್‌ಷಿಯಲ್ ಕ್ರಿಯೇಟು ಮಾಡಿರುವುದು 6.8 ಲಕ್ಷ ಮಾತ್ರ. ಎಂದರೆ ನೀವು ಏನು ಮೊದಲು ಒಂದು ಅಂದಾಜು ಎಂದು ಇಟ್ಟುಕೊಂಡಿದ್ದಿರಿ ಅದರಲ್ಲಿ ಅರ್ಧ ಭಾಗದಷ್ಟು ನೀರಾವರಿಯ ಪೊಟೆನ್‌ಷಿಯಲ್‌ನ್ನೂ ಕ್ರಿಯೇಟು ಮಾಡಲಿಕ್ಕೆ ಆಗಲಿಲ್ಲ. ಇದೇನು ನೀವು ಮಾಡಿರುವ ಯೋಜನೆಯೇ ಎಂದು ಮಾನ್ಯ ಉಪಮಂತ್ರಿಗಳಾದ ಶ್ರೀಮಾನ್ ಆಲೂರು ಹನುಮಂತಪ್ಪನವರನ್ನು ಇಲ್ಲಿ ಕೇಳುತ್ತಿದ್ದೇನೆ. ಯೋಜನೆಯನ್ನೇನೋ ಮಾಡಿ ಅದಕ್ಕಾಗಿ ಹೆಚ್ಚು ಹಣವನ್ನು ಖರ್ಚು ಮಾಡಬೇಕೆಂದು ಮಾಡಿದರೂ ಅದರಂತೆ ಹೆಚ್ಚು ನೀರಾವರಿ ಪ್ರದೇಶವನ್ನು ಮಾಡಲಿಕ್ಕೆ, ನಿಮಗೆ ಆಗಲಿಲ್ಲ ಮತ್ತು ನಮಗೆ ಮಾಡುವುದಕ್ಕೆ ಸಾಧ್ಯವಾಗಲಿಲ್ಲ ಎಂದು ತಾವೇ ಒಂದು ಕಡೆ ಹೇಳುವಾಗ ನಾವು ನಿರೀಕ್ಷಿಸಿದಷ್ಟು ಜಾಸ್ತಿ ಮಾಡುವುದಕ್ಕೆ ಆಗಲಿಲ್ಲ ಎಂದು ಹೇಳುವಾಗ ನೀವು ಯಾವ ಬಾಯಿಂದ ಇಲ್ಲಿ ಅನ್ನ ಹೆಚ್ಚಾಗಿ ಕೊಡುತ್ತೇವೆ ಎಂದು ಹೇಳುತ್ತೀರಿ ? ಭೂಮಿಗೆ ಸರಿಯಾಗಿ ನೀರು ಕೊಟ್ಟರೆ ತಾನೇ ಅನ್ನ ನಿಮಗೆ ಸಿಕ್ಕುವುದು ? ಇಲ್ಲದೇ ಇದ್ದರೆ ಅನ್ನ ಎನ್ನುವುದು ಎಲ್ಲಿಂದ ನಿಮಗೆ ಬರುತ್ತದೆ ? ಆದುದರಿಂದ ನೀರಾವರಿ ಪ್ರದೇಶಗಳನ್ನು ಹೆಚ್ಚು ಮಾಡುವುದರಲ್ಲಿ ನೂರಕ್ಕೆ ನೂರರಷ್ಟು ನೀವು ವಿಫಲರಾಗಿದ್ದೀರಿ. ಇದರಲ್ಲಿ ನೀವು ಮೂರನೆ ಯೋಜನೆಯಲ್ಲಿ ಸುಮಾರು 160 ಕೋಟಿಯಲ್ಲಿ ವ್ಯವಸಾಯಕ್ಕಾಗಿ ಸುಮಾರು 56 ಕೋಟಿ ಖರ್ಚು ಮಾಡಬೇಕೆಂದು ಇತ್ತು. ಯಾವ ಯಾವ ಯೋಜನೆಗಾಗಿ ಎಷ್ಟೆಷ್ಟು ಹಣ ಖರ್ಚು ಮಾಡಬೇಕೆಂದು ಇತ್ತೊ ಅಷ್ಟು ಹಣವನ್ನೂ ಖರ್ಚುಮಾಡುವುದಕ್ಕೆ ನಿಮಗೆ ಆಗಲಿಲ್ಲ. ಬಾಯಲ್ಲಿ ಮಾತ್ರ ದೇಶದಲ್ಲಿ ದೊಡ್ಡ ದೊಡ್ಡ ಯೋಜನೆಗಳನ್ನು ಮಾಡಬೇಕು ಎಂದು ಹೇಳುತ್ತ ಅದಕ್ಕೆ ತಕ್ಕ ಹಾಗೆ ಹಣವನ್ನು ಖರ್ಚು ಮಾಡದೇಹೋದುದರಿಂದ ನಿಮಗೆ ಯಾವ ಪ್ರಯೋಜನವೂ ಬರಲಿಲ್ಲ. ಬಹಳ ದುಂದುಗಾರಿಕೆಯಿಂದಲೇನೋ ಯೋಜನೆಗಾಗಿ ಹಣವನ್ನು ಖರ್ಚು ಮಾಡಿದುದರಿಂದ ಕೆಲವು ವರ್ಗದವರಿಗೆ ಅನುಕೂಲವಾಗಿದೆ. ಎಂದರೆ ಕಂಟ್ರಾಕ್ಟರುಗಳಿಗೆ ಹಾಗೂ ಅವರನ್ನೇ ನಂಬಿಕೊಂಡಿರತಕ್ಕ ಕೆಲವು ವರ್ಗದ ಜನರಿಗೆ ಅನುಕೂಲವಾಗಿವೆ ಮತ್ತು ಕೆಲವು ಜನ ಶ್ರೀಮಂತರುಗಳಿಗೆ ನೀವು ಮಾಡಿರುವ ಮೂರು ಯೋಜನೆಗಳಿಂದಲೂ ಅನುಕೂಲವಾಗಿದೆ. ದಿನ ಬೆಳಗಾದರೆ ನಾವು ನೋಡುತ್ತೇವೆ ಹಿಂದೆ ಕೇವಲ ಬಡತನದಿಂದ ಇದ್ದ ವ್ಯಕ್ತಿಗಳು ಇಂತಹ ಕಂಟ್ರಾಕ್ಟುಗಳನ್ನು ಪಡೆದು ಶ್ರೀಮಂತರಾಗಿರುವುದನ್ನು ನಾವು ನೋಡಬಹುದು. ಅಲ್ಲದೆ ಈಚೆಗೆ ನಮ್ಮ ಹಣಕಾಸಿನ ಸಚಿವರು ಹೇಳಿದ ಹಾಗೆ ಸುಮಾರು 38 ಜನಕ್ಕೆ ಲೈಸನ್ಸ್ ಹಾಗೂ ಪರ್ಮಿಟ್ಟುಗಳನ್ನು ಕೊಟ್ಟಿದ್ದೇವೆ ಇದರಿಂದ ಕೈಗಾರಿಕೆಗೆ ಬಹಳ ಸಹಾಯ ಮಾಡಿದೆವು ಎಂದು ಹೇಳಬಹುದು. ಆದರೆ ಇಂದು ಬೆಂಗಳೂರು ಪೇಟೆಯಲ್ಲಿ ನಾವು ಹೋಗಿ ಇವರು ಹಾಕಿರುವ ಬೋರ್ಡುಗಳನ್ನು ನೋಡಬಹುದು. ಇವಕ್ಕೆಲ್ಲಾ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಹೆಗಡೆಯವರು ಲೈಸನ್ಸ್ ಕೊಟ್ಟಿರುವಂತಹದು. ಈ ಬೋರ್ಡುಗಳನ್ನು ಏತಕ್ಕಾಗಿ ಹಾಕಿದ್ದಾರೆ ಎಂದರೆ, ಸರಕಾರದಿಂದ ಕೋಟಾಗಳನ್ನು ಪಡೆಯುವುದಕ್ಕೆ ಮಾತ್ರ ಇಲ್ಲಿ ಹಾಕುವ ಬೋರ್ಡುಗಳನ್ನು ನೋಡಿದರೆ ಇವೆಲ್ಲಾ ಕಂಪನಿಗಳಲ್ಲ. ಬರೀ ಬೋಗಸ್ ಕಂಪನಿಗಳಿಗಾಗಿ ಹಾಕಿರುವ ಬೋರ್ಡುಗಳು ಎನ್ನುವುದು ಹೋಗಿ ನೋಡಿದವರಿಗೆಲ್ಲಾ ಗೊತ್ತಾಗುತ್ತದೆ. ಇಂತಹವರುಗಳೆಲ್ಲಾ ಇಲ್ಲಿ ಕಂಪನಿಗಳನ್ನು ಮಾಡಿರುವುದು ಬರೀ ಕೋಟಾಗಳನ್ನು ಪಡೆಯುವುದಕ್ಕಾಗಿ ಮಾಡಿದ್ದಾರೆ. ಸ್ಟೇನ್‌ಲೆಸ್ ಸ್ಟೀಲ್ ಕೋಟಾ ಪಡೆಯುತ್ತಾರೆ. ಯಾರಿಗೋ ಲಾಭಕ್ಕೆ ಮಾರುತ್ತಾರೆ. ಹಾಗೇ ಕಾಪರ್ ಕೋಟಾ ಎಂದು ತೆಗೆದುಕೊಳ್ಳುತ್ತಾರೆ ಮತ್ತು ಅದನ್ನು ಎಲ್ಲಿಗೋ ಮಾರುತ್ತಾರೆ. ಈ ಕಂಪನಿಗಳವರು ಇರುವುದೂ ಎಲ್ಲೋ ಯಾರಿಗೂ ಗೊತ್ತೇ ಆಗುವುದಿಲ್ಲ. ಇಂತಹ ನೂರಾರು ಬೋಗಸ್ ಫರ್ಮುಗಳು ಇಂದು ನಮ್ಮ ಬೆಂಗಳೂರು ಪೇಟೆಯಲ್ಲಿ ಇವೆ. ಇದೇ ರೀತಿ ಮಾಡಿದರೆ ದೇಶದಲ್ಲಿ ಕೈಗಾರಿಕೆಯು ಅಭಿವೃದ್ಧಿಯಾಗುವುದಿಲ್ಲ ಮತ್ತು ಪ್ಲಾನಿನಂತೆ ಖರ್ಚು ಮಾಡುವುದಕ್ಕಾಗದೇ ಇರುವುದರಿಂದ ಯಾವ ಕೆಲಸಗಳನ್ನೂ ಕಾರ್ಯಗತ ಮಾಡುವುದಕ್ಕೆ ಆಗುವುದಿಲ್ಲ. ಸುಮ್ಮನೆ ಹೆಸರಿಗೆ ದೇಶದಲ್ಲಿ ಇಂದು ಹೆಚ್ಚು ಕೈಗಾರಿಕೆಗಳನ್ನು ಮಾಡಬೇಕು ಮತ್ತು ನೀರಾವರೀ ಪ್ರದೇಶಗಳನ್ನು ಹೆಚ್ಚು ಮಾಡಲು ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಕೈಗೊಳ್ಳಬೇಕು ಎಂದು ಹೇಳುತ್ತಿದ್ದಾರೆಯೇ ಹೊರತು ಕಾರ್ಯತಃ ಏನೂ ಆಗಲಿಲ್ಲ. ಇದರಿಂದ ಲಕ್ಷಾಂತರ ರೂಪಾಯಿಗಳಷ್ಟು ದೇಶದ ಹಣ ವ್ಯಯವಾಗಿದೆಯೇ ವಿನಾ ಜನತೆಗೆ ಯಾವ ಪ್ರಯೋಜನವೂ ಆಗಲಿಲ್ಲ. ಏನೋ ಒಬ್ಬೊಬ್ಬ ಕಂಟ್ರಾಕ್ಟರಿಗೆ ಅನುಕೂಲವಾಯಿತು. ಮೂರು

ಯೋಜನೆಗಳನ್ನು ಮಾಡಿರುವುದರಿಂದ ಕೆಲವು ಕಂಟ್ರಾಕ್ಟರುಗಳು ಇಂದು ಬೆಂಗಳೂರು ನಗರದಲ್ಲೇ ಇದ್ದುಕೊಂಡು ದೊಡ್ಡ ಸೌಧಗಳನ್ನು ಕಟ್ಟಿಕೊಂಡು 60–70 ಸಾವಿರ ರೂಪಾಯಿಗಳಷ್ಟು ಬೆಲೆ ಬಾಳುವ ಕಾರುಗಳಲ್ಲಿ ಇಂದು ಓಡಾಡುತ್ತಿರುವುದನ್ನು ನಾವು ನೋಡಬಹುದು. ಇವರು ಸರಕಾರದ ಮೆಚ್ಚುಗೆಗೆ ಪಾತ್ರರಾದವರು ಮತ್ತು ಇವರಿಗೆ ಸಂಪಾದನೆ ಮಾಡುವುದಕ್ಕಾಗಿ ಇಂದು ಯೋಜನೆಗಳು ಆಗುತ್ತಿವೆ. ಇದೇ ನಮ್ಮ ಯೋಜನೆಗಳಿಂದಾಗಿರುವ ಸಾಧನೆ ಎಂದು ಹೇಳಬಹುದು. ಈ ಒಂದು ಸಾಧನೆ ನಿಜವಾಗಿಯೂ ದೇಶದ ಸಂಪತ್ತನ್ನು ಜಾಸ್ತಿ ಮಾಡತಕ್ಕ ಸಾಧನೆ ಅಲ್ಲ ಎಂದು ನೀವು ಕೊಟ್ಟಿರತಕ್ಕ ಅಂಕೆ ಸಂಖ್ಯೆಗಳಿಂದಲೇ ಹೇಳಬಹುದು. ನಮ್ಮನ್ನು ಬರೀ ಸಾಲಗಾರರನ್ನಾಗಿ ಮಾಡಬೇಕು ಎಂದು ಸುಮಾರು ನಾನೂರು ಕೋಟಿಯಷ್ಟು ಸಾಲವನ್ನು ನಮ್ಮ ಮೇಲೆ ಹೊರಿಸಿದ್ದೀರಿ ನೀವು ಮಾಡಿರುವ ಮೂರು ಯೋಜನೆಗಳಿಂದಲೂ ದೇಶಕ್ಕೆ ಅನುಕೂಲವಾಗುವಂತಹ ಕ್ರಮಗಳನ್ನು ಕೈಗೊಂಡಿದ್ದೇವೆ ಎಂದು ನೀವು ಮೂರನೇ ಯೋಜನೆಯ ವೈಶಿಷ್ಟ್ಯ ಎಂದು ಭಾವನೆ ಮಾಡಿಕೊಂಡಿದ್ದೀರಿ. ಇನ್ನೊಂದು ನಮ್ಮ ಮಾನ್ಯ ಅರ್ಥ ಮಂತ್ರಿಗಳು ಪರದೇಶಕ್ಕೆ ಹೋಗಿ ಬಂದ ಮೇಲೆ ಸಿನಿಮಾ ಉದ್ಯಮವನ್ನು ಮಾಡಲು ಇಲ್ಲಿ ಸಬ್‌ಸಿಡಿಗಳನ್ನು ಕೊಡುತ್ತೇವೆ ಎಂದು ಅವರು ಹೇಳಿದ್ದಾರೆ. ನನಗೆ ತಿಳಿದಮಟ್ಟಿಗೆ ಸಿನಿಮಾ ಉದ್ಯಮಕ್ಕಾಗಿ ಒಂದು ಕಾರ್ಪೊರೇಷನ್ ಮಾಡಿ ಅದಕ್ಕೆ ಸರಕಾರದವರು ಹಣ ಕೊಟ್ಟು ಅದರಲ್ಲಿ ತಮಗೆ ಬೇಕಾದ ಏಳೆಂಟು ಜನರನ್ನು ಡೈರೆಕ್ಟರುಗಳನ್ನಾಗಿ ಮಾಡಿ, ಮಾಡುತ್ತೇವೆ ಎಂದು ಹೇಳಿದ್ದಾರೆ. ಸರಕಾರ ಹಣ ಕೊಟ್ಟು ಇದನ್ನು ಮ್ಯಾನೇಜು ಮಾಡುವುದಕ್ಕೆ ಬದಲಾಗಿ ಇದರ ವ್ಯವಹಾರಗಳನ್ನೆಲ್ಲಾ ಅಲ್ಲಿನ ಡೈರೆಕ್ಟರುಗಳೇ ಮಾಡಬೇಕೆಂದು ಮಾಡಿರುವುದನ್ನು ನೋಡಿದರೆ ಸಿನಿಮಾ ಉದ್ಯಮ ಬರೀ ನಾಟಕೀಯವಾಗುತ್ತದೆ ಎಂದು ಇಲ್ಲಿ ಹೇಳಬೇಕಾಗುತ್ತದೆ. ಸಿನಿಮಾ ಇಂಡಸ್ಟ್ರಿಯನ್ನು ಮುಂದೆ ತರಬೇಕೆಂದು ಇಷ್ಟು ಹಣ ಕೊಟ್ಟು ಯಾರೋ ಕೆಲವರ ಅನುಕೂಲಕ್ಕಾಗಿ ಮಾಡುವುದು ಸರಿಯಲ್ಲ. ಇದನ್ನು ಸರಕಾರವೇ ನೇರವಾಗಿ ಮಾಡುವ ಜವಾಬ್ದಾರಿಯನ್ನು ವಹಿಸಿಕೊಳ್ಳುವುದು ಮತ್ತು ಸರಕಾರಕ್ಕೆ ಇಲ್ಲಿರುವ ಡೈರೆಕ್ಟರುಗಳು ಸಲಹೆ ಕೊಡಬೇಕು ಎಂದು ಮಾಡಿದರೆ ಅದು ಸರಿಯಾಗಿರುತ್ತದೆ. ಇಲ್ಲದೆ ಇದ್ದರೆ ಸಿನಿಮಾ ಉದ್ಯಮ ಬರೀ ನಾಟಕೀಯವಾಗುತ್ತದೆ. ಸಿನಿಮಾ ಉದ್ಯಮ ಈ ರೀತಿ ನಿಜವಾಗಿಯೂ ಆಗಬಾರದು. ಸಿನಿಮಾ ಉದ್ಯಮ ಇಂದು ದೇಶದಲ್ಲಿ ಬೆಳೆಯಬೇಕಾದರೆ ಇದನ್ನು ಜನತೆಯ ಕೈಯಲ್ಲಿ ಕೊಡುವುದಕ್ಕೆ ಬದಲಾಗಿ ಸರಕಾರವೇ ನೇರವಾಗಿ ವಹಿಸಿಕೊಂಡು ಮಾಡಬೇಕೆಂದು ಸರಕಾರಕ್ಕೆ ಒತ್ತಾಯಮಾಡುತ್ತೇನೆ. ಇನ್ನು ಇದರಲ್ಲಿ ಸುಮಾರು 184 ಕೋಟಿಯಷ್ಟು ಹಣವನ್ನು ಖರ್ಚು ಮಾಡುತ್ತೇವೆಂದು ಹೇಳಿದ್ದಾರೆ. ಇಷ್ಟು ಹಣವನ್ನು ಏತಕ್ಕಾಗಿ ಖರ್ಚು ಮಾಡಲಾಗಿದೆ ಎನ್ನುವುದನ್ನು ಎಲ್ಲೂ ಹೇಳಿಲ್ಲ. ಯಾವ ಬಾಬಿಗಾಗಿ ಹೆಚ್ಚು ಖರ್ಚು ಮಾಡಲಾಗಿದೆ ಎನ್ನುವ ವಿವರಗಳೊಂದೂ ಇದರಲ್ಲಿ ತಿಳಿಯುತ್ತಿಲ್ಲ ಮತ್ತು ಹಣವನ್ನು ಖರ್ಚು ಮಾಡಿ ಇದರಲ್ಲಿ ಉಳಿತಾಯ ಯಾವ ಯಾವ ಬಾಬುಗಳಲ್ಲಿ ಮಾಡಿದೆ ಎಂದು ಇದರಲ್ಲಿ ನೋಡಿದರೆ ವಿದ್ಯಾಭ್ಯಾಸಕ್ಕೆ ಖರ್ಚು ಮಾಡುವುದರಲ್ಲಿ ಒಂದೂವರೆ ಕೋಟಿಯಷ್ಟನ್ನು ಉಳಿತಾಯ ಮಾಡಿದ್ದಾರೆ ಹಾಗೇ ವ್ಯವಸಾಯಾಭಿವೃದ್ಧಿ ಮಾಡುವ ಬಾಬಿನಲ್ಲಿ ಸುಮಾರು ಒಂದೂವರೆ ಕೋಟಿಯಷ್ಟು ಉಳಿತಾಯ ಮಾಡಿದ್ದಾರೆ. ಹಾಗೆ ಕೈಗಾರಿಕೆಯ ಅಭಿವೃದ್ಧಿ ಮಾಡುವುದರಲ್ಲಿ ಸುಮಾರು ಒಂದೂಮುಕ್ಕಾಲು ಕೋಟಿಯಷ್ಟನ್ನು ಉಳಿತಾಯ ಮಾಡಿದ್ದಾರೆ ಮತ್ತು ಗ್ರಾಮಾಭಿವೃದ್ಧಿಯೋಜನೆಗಳಲ್ಲಿ ಸುಮಾರು ಒಂದೂಕಾಲು ಕೋಟಿಯಷ್ಟು ಹಣವನ್ನು ಉಳಿತಾಯ ಮಾಡಿದ್ದಾರೆ. ಹೀಗೆ ಯಾವ ಯಾವ ದೇಶಾಭಿವೃದ್ಧಿ ಯೋಜನೆಗಳಿಗಾಗಿ ಹಣ ಖರ್ಚು ಮಾಡಬೇಕಾಗಿತ್ತೋ ಅಂತಹ ಬಾಬುಗಳಿಗೆ ಹಣವನ್ನು ಖರ್ಚು ಮಾಡಲಿಕ್ಕಾಗಲಿಲ್ಲ. ಎಲ್ಲಿ ಉಳಿತಾಯ ಮಾಡಿ ಹಣವನ್ನು ಉಳಿಸಬೇಕೋ ಅಲ್ಲಿ ಉಳಿತಾಯ ಮಾಡಲಿಲ್ಲ. ಎಲ್ಲಿಗೆ ಸುಮಾರು ಒಂದೂವರೆ ಕೋಟಿಯಷ್ಟು ಜಾಸ್ತಿ ಖರ್ಚು ಮಾಡಿದ್ದಾರೆ ಎಂದರೆ ತಮ್ಮ ರಕ್ಷಣೆಗಾಗಿ ಇರಬೇಕಾಗಿರುವ ಪೋಲೀಸು ಖಾತೆಗಾಗಿ ಜಾಸ್ತಿ ಖರ್ಚು ಮಾಡಿದ್ದಾರೆ. ಏಕೆಂದರೆ ಇವರಿಗೆಲ್ಲಾ ಪೋಲೀಸರು ಬೇಕು ಎಂದು ಪೋಲೀಸು ಖಾತೆಗಾಗಿ ಇಷ್ಟು ಹೆಚ್ಚು ಹಣವನ್ನು ಖರ್ಚು ಮಾಡಿದ್ದಾರೆ. ಇದರಲ್ಲೇನೂ ಉಳಿತಾಯ ಮಾಡಲಿಲ್ಲ. ಮತ್ತು ಇದಕ್ಕಾಗಿ ಸುಮಾರು ಒಂದೂವರೆ ಕೋಟಿಯಷ್ಟು ಜಾಸ್ತಿ ಕೊಟ್ಟಿದ್ದಾರೆ. ಇದರಲ್ಲಿ ಒಂದು ವೈಶಿಷ್ಟ್ಯವೂ ಇದೆ. ನಮ್ಮ ಪ್ರಜಾಪ್ರಭುತ್ವ ಬೆಳೆಯಬೇಕು, ದೇಶದಲ್ಲಿ ದೊಡ್ಡ ದೊಡ್ಡ ಕೈಗಾರಿಕೆಗಳು ಬೆಳೆಯಬೇಕು ಎಂದು ಹೇಳುತ್ತಾ ಇವೊತ್ತು ಪೋಲೀಸು ಖಾತೆಯನ್ನೂ ಬೆಳೆಸುವ ವ್ಯವಸ್ಥೆ ಮಾಡುತ್ತಿದ್ದಾರೆ. ವಿದ್ಯಾಭ್ಯಾಸವನ್ನು ಅಭಿವೃದ್ಧಿ ಮಾಡಬೇಕೆಂದು ಇದ್ದರೂ ಅದನ್ನು ಕಡೆಗಣಿಸಿದ್ದಾರೆ. ಸರಕಾರದ ಪರಿಸ್ಥಿತಿ ವಿದ್ಯಾಭ್ಯಾಸದ ಬಗ್ಗೆ ಏನಿದೆ ಎನ್ನುವುದರ ಬಗ್ಗೆ ಒಂದೆರಡು ಮಾತುಗಳನ್ನು ಇಲ್ಲಿ ಹೇಳಬೇಕಾಗಿದೆ. ಇಂದು ಇದರಲ್ಲಿ ಹೇಳಿರುವಂತೆ ವಿದ್ಯಾಭ್ಯಾಸಕ್ಕಾಗಿ ಸುಮಾರು 36 ಕೋಟಿಯಷ್ಟು ಖರ್ಚು ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ.

(ಶ್ರೀ ಎಸ್. ಶಿವಪ್ಪ)

3-00 P.M.

33 ಸಾವಿರ ಪ್ರಾಥಮಿಕ ಶಾಲೆಗಳಿವೆ, 90 ಸಾವಿರ ಉಪಾಧ್ಯಾಯರು ಇದ್ದಾರೆ, 34 ಲಕ್ಷ ವಿದ್ಯಾರ್ಥಿಗಳಿದ್ದಾರೆ. ಒಬ್ಬ ಉಪಾಧ್ಯಾಯನಿಗೆ ಇರತಕ್ಕ ವಿದ್ಯಾರ್ಥಿಗಳ ಪ್ರಮಾಣ ನೋಡಿದರೆ ಒಬ್ಬ ಉಪಾಧ್ಯಾಯನು 40 ಜನ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ಮಾಡಿಸುತ್ತಾನೆ. ಒಂದು ಸ್ಕೂಲಿಗೆ ಒಬ್ಬನೇ ಉಪಾಧ್ಯಾಯ ಇರುವ ಸ್ಕೂಲುಗಳಿವೆ. ಒಂದು ಸ್ಕೂಲು ಅಂದರೆ ಒಂದೇ ಕೋಣೆ ಒಬ್ಬ ಉಪಾಧ್ಯಾಯ ನಾಲ್ಕು ತರಗತಿಗಳು ಇರುತ್ತವೆ. ಇಂಥ ಸಾವಿರಾರು ಸ್ಕೂಲುಗಳಿವೆ. ಇದು ಎಂಥ ವಿದ್ಯಾಭ್ಯಾಸ? ಒಬ್ಬ ಉಪಾಧ್ಯಾಯ ಒಂದು ತರಗತಿಗೆ ಪಾಠ ಹೇಳುವುದೇ ಕಷ್ಟ. ಇದಕ್ಕೆ ವಿದ್ಯಾಭ್ಯಾಸ ಎಂದು ಕರೆದು ಪ್ರಾಥಮಿಕ ಶಿಕ್ಷಣ ಕಡ್ಡಾಯವಾಗಿ ಮಾಡಿದ್ದೀರಿ. ಕುರಿಗಳನ್ನು ಮಂದೆಗೆ ಸೇರಿಸುವ ಹಾಗೆ, ದೊಡ್ಡಿಗೆ ಸೇರಿಸುವ ಹಾಗೆ ವಿದ್ಯಾರ್ಥಿಗಳನ್ನು ಸ್ಕೂಲಿಗೆ ಸೇರಿಸುವುದನ್ನು ಮಾಡಿದ್ದೀರಿ. ಇದು ಎಂಥ ವಿದ್ಯಾಭ್ಯಾಸ ? ಇಂದಿನ ಮಕ್ಕಳು ನಮ್ಮ ದೇಶದ ಸಂಪತ್ತು. ಅವರಿಗೆ ಇಂಥ ವಿದ್ಯಾಭ್ಯಾಸ ಕೊಟ್ಟರೆ ದೇಶ ಹೇಗೆ ಮುಂದುವರಿಯುತ್ತದೆ? ಎನ್ನುವುದನ್ನು ವಿಚಾರ ಮಾಡಬೇಕಾಗಿದೆ. ಬೆಂಗಳೂರು ಮೈಸೂರು ನಗರಗಳಲ್ಲಿ ಮಕ್ಕಳಿಗೆ ಎಂಥ ವಿದ್ಯಾಭ್ಯಾಸ ದೊರೆಯುತ್ತದೆ ಎಂದರೆ, ಕಾನ್‌ವೆಂಟ್ ಸ್ಕೂಲುಗಳಲ್ಲಿ ಒಂದೊಂದು ತರಗತಿಗೆ ನಾಲ್ಕು ಜನ ಉಪಾಧ್ಯಾಯರುಗಳು ಇದ್ದಾರೆ. ಇಂಥ ಸ್ಕೂಲುಗಳಲ್ಲಿ ಐದಾರು ವಿದ್ಯಾರ್ಥಿಗಳಿಗೆ ಒಬ್ಬ ಉಪಾಧ್ಯಾಯ ಇರುವ ರೇಷಿಯೋ ಇದೆ. ಆದರೆ ಸರಕಾರ ನಡೆಸತಕ್ಕಂಥ ಶಾಲೆಗಳಲ್ಲಿ 40 ವಿದ್ಯಾರ್ಥಿಗಳಿಗೆ ಒಬ್ಬ ಉಪಾಧ್ಯಾಯ. ಇನ್ನು ಸಹಸ್ರಾರು ಹಳ್ಳಿಗಳಲ್ಲಿ ಶಾಲೆಗಳ ಕಟ್ಟಡವಿಲ್ಲ. ಮಕ್ಕಳು ಮರದ ಕೆಳಗೆ ಕೂಡುತ್ತಾರೆ, ಚಾವಡಿಯಲ್ಲಿ ಇಲ್ಲವೆ ದೇವಸ್ಥಾನದಲ್ಲಿ ಕೂಡುತ್ತಾರೆ. ಸ್ಕೂಲಿಗೆ ಕಟ್ಟಡವೇ ಇಲ್ಲ. ವಿದ್ಯಾಭ್ಯಾಸಕ್ಕೆ ಎಷ್ಟೊಂದು ಸಹಾಯ ಮಾಡಿದ್ದೇವೆ ಎಂದು ಸರಕಾರ ಜಂಭ ಕೊಚ್ಚುವುದನ್ನು ಯೋಚನೆ ಮಾಡಬೇಕಾಗಿದೆ.

ಮಾನ್ಯ ಅಧ್ಯಕ್ಷರೇ, ಸರಕಾರ ದೇಶದ ಪ್ರಗತಿ ಸಾಧನೆ ನಿಲ್ಲಿಸಿಬಿಟ್ಟು ಹಣವನ್ನು ವಿನಾಕಾರಣ ಖರ್ಚು ಮಾಡಿ ಆರ್ಥಿಕ ದುಸ್ಥಿತಿಯಿಂದ ಸರಕಾರ ದೇಶ ಆಳತಕ್ಕಂಥಾದ್ದು ನಮ್ಮ ದುರ್ದೈವ ಎಂದು ಭಾವನೆ ಮಾಡಬೇಕಾಗಿದೆ. ಪ್ರಜಾಪ್ರಭುತ್ವ ಸಮಾಜವಾದ ಬಗ್ಗೆ ಇವರು ಉದ್ದುದ್ದ ಭಾಷಣ ಮಾಡುತ್ತಾರೆ. ಮಾನ್ಯ ಮುಖ್ಯ ಮಂತ್ರಿಗಳು ಬೇರೆ ರಾಜ್ಯಕ್ಕೆ ಹೋಗಿ ಪ್ರಜಾಪ್ರಭುತ್ವದ ಬಗ್ಗೆ ದೊಡ್ಡ ಭಾಷಣ ಮಾಡಿದ್ದಾರೆ ಎನ್ನುವುದನ್ನು ಪತ್ರಿಕೆಯಲ್ಲಿ ಓದಿದ್ದೇನೆ. ಇವರು ದೊಡ್ಡ ಉಪನ್ಯಾಸ ಮಾಡಿದ್ದಾರೆ. ಆದರೆ ಇವರಿಗೆ ಈ ರೀತಿ ಮಾತನಾಡತಕ್ಕ ಹಕ್ಕು ಇದೆಯೇ ಎಂದು ನಮ್ಮ ದೇಶದ ಮುಖ್ಯ ಮಂತ್ರಿಗಳನ್ನು ಕೇಳುತ್ತೇನೆ. ಈ ದೇಶದ ಮುಖ್ಯ ಮಂತ್ರಿಗಳಾಗಿ ಸರಕಾರದ ಖಜಾನೆಯಿಂದ ಹಣ ಖರ್ಚು ಮಾಡಿ ಇಂದೂರಿಗೆ ಹೋಗಿ ಭಾಷಣ ಮಾಡುತ್ತಾರೆ, ಇದು ಸರಕಾರದ ಯಾವ ನೀತಿ ! ಇದರಿಂದ ಏನು ಪ್ರತಿಕ್ರಿಯೆ ಆಗುತ್ತದೆ. ನೆರೆ ರಾಜ್ಯಗಳಿಗೆ ಏನು ಭಾವನೆ ಬರುತ್ತದೆ ಇದನ್ನು ಯೋಚನೆ ಮಾಡಬೇಕಾಗಿದೆ. ಮದ್ರಾಸ್ ರಾಜ್ಯದ ಮುಖ್ಯ ಮಂತ್ರಿಗಳು ಬೆಂಗಳೂರಿಗೆ ಬಂದು ಇಲ್ಲಿಯ ಸರಕಾರ ಕಿತ್ತು ಹಾಕಿ ಎಂದು ಪ್ರಚಾರ ಮಾಡುವುದಾದರೆ ಇದು ಪ್ರಜಾಪ್ರಭುತ್ವವೆ ? ನಿಜವಾಗಿಯೂ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದ್ದ ಪಕ್ಷದಲ್ಲಿ ನಮ್ಮ ಮುಖ್ಯ ಮಂತ್ರಿಗಳು ಇಲ್ಲಿಯೇ ಕುಕ್ಕರ ಬಡಿಯಬೇಕಾಗಿತ್ತು ಇಲ್ಲವೆ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡಬೇಕಾಗಿತ್ತು.

ಚೇರಮನ್ ಅವರು.—ಇದು ಯಾವ ಭಾಷೆ!

ಶ್ರೀ ಎಸ್. ಶಿವಪ್ಪ.—ಇದು ಹಳಗನ್ನಡ ಭಾಷೆ. ಇದು ಒಳ್ಳೇ ಕನ್ನಡ. ಕುಕ್ಕರ ಬಡೆಯಬೇಕು ಎಂದು ಬಾಯಿ ತಪ್ಪಿ ಬಂತು.

ರಾಜ್ಯಗಳ ನಡುವೆ ಮಧುರ ಬಾಂಧವ್ಯ ಬೆಳೆಯಬೇಕು, ಪ್ರಜಾಪ್ರಭುತ್ವ ಬೆಳಗಬೇಕು ಇಂಥ ನಾಜೂಕು ಪರಿಸ್ಥಿತಿಯಲ್ಲಿ ಇಂದು ನಮ್ಮ ರಾಷ್ಟ್ರ ಇದೆ. ಆದರೆ ಕಾಂಗ್ರೆಸ್ಸಿನವರು ಪ್ರಜಾಪ್ರಭುತ್ವದ ಹೆಸರಿನಲ್ಲಿ ನಾನ್ ಕಾಂಗ್ರೆಸ್ ಸರಕಾರಗಳನ್ನು ತಿರುಗು ಮುರುಗು ಮಾಡುವುದಕ್ಕೆ ಪ್ರಯತ್ನಿಸುತ್ತಿದ್ದಾರೆಂದು ವ್ಯಸನದಿಂದ ಹೇಳಬೇಕಾಗಿದೆ. ಈ ರೀತಿ ದೇಶಕ್ಕೆ ದ್ರೋಹ ಮಾಡುವುದರಿಂದ ಕೆಟ್ಟ ಪರಿಣಾಮ ಉಂಟು ಮಾಡುತ್ತದೆ ಎಂದು ಹೇಳುತ್ತೇನೆ.

ಶ್ರೀ ಜಿ ಬಿ. ಶಂಕರರಾವ್ (ಕಂದಾಯ ಶಾಖೆಯ ಉಪಮಂತ್ರಿಗಳು).—ಕೊಯಮತ್ತೂರಿನಲ್ಲಿ ನೀವೇನು ಭಾಷಣ ಮಾಡಿದಿರಿ ?

ಶ್ರೀ ಎಸ್. ಶಿವಪ್ಪ.—ಪ್ರಜಾಪ್ರಭುತ್ವ ಸಮಾಜವಾದ ಇಂದು ದೇಶದಲ್ಲಿ ಬಾಳಬೇಕು, ಅದು ಮುನ್ನಡೆದು ಹೋಗಬೇಕು ಎಂದು ಹೇಳುವುದನ್ನು ನಾನು ಒಪ್ಪುತ್ತೇನೆ. ಇದು ಕಾಂಗ್ರೆಸ್

ಪಕ್ಷದಿಂದ ಸಾಧ್ಯವಾಗುತ್ತದೆಯೆ ? ಮಾನ್ಯ ನಿಜಲಿಂಗಪ್ಪನವರಿಗೆ ಒಂದು ಪ್ರಶ್ನೆ ಹಾಕುತ್ತೇನೆ. ಕಾಂಗ್ರೆಸ್ ಅಧ್ಯಕ್ಷರಾಗಿ ಇವರಿಗೆ ಎರಡೂ ಕೆಲಸ ಮಾಡುವುದು ಸಾಧ್ಯವೇ ? ಇವರು ಕಾಂಗ್ರೆಸ್ ತತ್ವಕ್ಕೆ ತಿಲಾಂಜಲಿ ಕೊಟ್ಟಿದ್ದಾರೆಯೇ ? ಕಲಕತ್ತ ಬೊಂಬಾಯಿಗೆ ಹೋಗಿ ಬಂಡವಾಳ ಶಾಹಿಯವರ ಬಾಗಿಲು ಮುಂದೆ ನಿಂತು ಭಿಕ್ಷೆ ಬೇಡಿ ನಮ್ಮ ರಾಜ್ಯದಲ್ಲಿ ಕೈಗಾರಿಕೆ ಸ್ಥಾಪನೆ ಮಾಡಿ ಎಂದು ಕೇಳುವುದು ಸರಿಯೇ? ಇವರು ಪ್ರಜಾಪ್ರಭುತ್ವ ಮತ್ತು ಸಮಾಜವಾದದ ಬಗ್ಗೆ ಮಾಡುವ ಭಾಷಣಕ್ಕೂ ಇವರು ಕಾರ್ಯಗತ ಮಾಡುವುದಕ್ಕೂ ಅಜಗಜಾಂತರ ಇದೆ. ವಿರೋಧ ಪಕ್ಷದವರು ಬಹಿರಂಗವಾಗಿ ಟೀಕೆ ಮಾಡುತ್ತಾರೆ. ವಿರೋಧ ಪಕ್ಷದಲ್ಲಿ ಅನೇಕ ಶಕ್ತಿಗಳು ಒಟ್ಟುಗೂಡಿ ತತ್ವದ ಬಗ್ಗೆ ಭಿನ್ನಾಭಿಪ್ರಾಯವಿರಬಹುದು. ಆದರೆ ನಿಮ್ಮ ಹಾಗೆ ಮುಚ್ಚಿಟ್ಟು ಅಧಿಕಾರಕ್ಕೋಸ್ಕರ ಏನೇ ಆಗಲಿ ಅಧಿಕಾರ ಮುಂದುವರಿಯುವ ಹಾಗೆ ಅದಕ್ಕೆ ಕಚ್ಚಿಕೊಂಡು ತತ್ವಕ್ಕೆ ತಿಲಾಂಜಲಿ ಕೊಟ್ಟು ನಿಮ್ಮ ಹಾಗೆ ನಾವು ಸುಮ್ಮನೆ ಕೂತಿಲ್ಲ. ತತ್ವಕ್ಕಾಗಿ ತತ್ವಕ್ಕೆ ಧಕ್ಕೆ ಬಂದಾಗ್ಗೆ ಸರಕಾರ ಬಿಟ್ಟು ತ್ಯಾಗಮಾಡಿ ಹೊರಗೆ ಬಂದೇವೆ. ಇಂಥ ತ್ಯಾಗ ಭಾವನೆ ನಿಮ್ಮಲ್ಲಿ ಇದೆಯೇ? ಶ್ರೀಮಾನ್ ನಿಜಲಿಂಗಪ್ಪನವರಿಗೆ ಸವಾರಿ ಮಾಡಲು ಎರಡು ಕುದುರೆ ಬೇಕು. ಪ್ರಜಾಪ್ರಭುತ್ವ ಬೆಳವಣಿಗೆಯಾಗಬೇಕು ಎನ್ನುವ ನಿಮ್ಮ ಮಾತು ಸಾಧನೆ ಮಾಡಲು ನಿಮ್ಮ ಸ್ಥಾನ ಇಲ್ಲಿ ಇದೆ. ನಿಮಗೆ ಅಧಿಕಾರವೂ ಬೇಕು. ಕಳೆದ 20 ವರ್ಷಗಳಲ್ಲಿ ಕಾಂಗ್ರೆಸ್ ಸರಕಾರ ಮಾಡಿದಂಥ ಅನ್ಯಾಯ ಪ್ರಜಾಪ್ರಭುತ್ವದಲ್ಲಿ ಬೇರೆ ಯಾವ ಪಕ್ಷವೂ ಮಾಡಿಲ್ಲ. ಕಾಂಗ್ರೆಸ್ಸು ನೀತಿ ಧೋರಣೆ ತತ್ವ ಕಳೆದುಕೊಂಡಿದೆ ಎಂದು ವ್ಯಸನದಿಂದ ಹೇಳಬೇಕಾಗಿದೆ. ಕಳೆದ ಎಂಟು ವರ್ಷಗಳಿಂದ ತಾಲ್ಲೂಕ್‌ಬೋರ್ಡ್ ಚುನಾವಣೆ ನಡೆಸಿಲ್ಲ. ಇದು ಪ್ರಜಾಪ್ರಭುತ್ವವೇ ಎಂದು ಅವರಿಗೆ ಸವಾಲು ಹಾಕುತ್ತೇನೆ. ಪ್ರಜಾಪ್ರಭುತ್ವದ ಬಗ್ಗೆ ದೊಡ್ಡ ದೊಡ್ಡ ಭಾಷಣ ಮಾಡತಕ್ಕಂಥ ಜನ; ತಾಲ್ಲೂಕು ಅಭಿವೃದ್ಧಿ ಮಂಡಲಿ ಗ್ರಾಮ ಪಂಚಾಯಿತಿ ಪ್ರಜಾಪ್ರಭುತ್ವದ ಅಡಿಗಲ್ಲಾದ ಇವುಗಳಿಗೆ ಚುನಾವಣೆ ನಡೆಸದೆ ಕಳೆದ 8 ವರ್ಷದಿಂದ ಹಿಂದು ಮುಂದು ನೋಡುತ್ತಿರುವುದು ಯಾವ ನೀತಿ ? ಇದನ್ನು ಅರಿತುಕೊಳ್ಳಬೇಕು. ಕಳೆದ 20 ವರ್ಷ ದೇಶಕ್ಕೆ ಮೋಸ ಮಾಡಿದರು. ಆದರೆ ಇಂದಿನ ಯುವಕರು ಎಚ್ಚೆತ್ತಿದ್ದಾರೆ. ನಿಮ್ಮಲ್ಲಿ ಯುವಕರು ನಂಬಿಕೆ ಕಳೆದುಕೊಂಡಿದ್ದಾರೆ. ಅವರಲ್ಲಿ ನವ ಚೈತನ್ಯ ಉಂಟಾಗಿದೆ. ನಿಮ್ಮ ಕಾಲ ಆಗಿ ಹೋಯಿತು. ಯುವಕರು ಎದ್ದು ನಿಂತಿದ್ದಾರೆ. ಸರಕಾರ ಮೋಸ ಮಾಡಿದೆ ಎಂದು ತಿಳಿದುಕೊಂಡಿದ್ದಾರೆ.

ಯಾರು ಗಾಂಧೀಜಿಯವರನ್ನು ನೋಡಿದ್ದರೋ ಅಂಥವರಿಗೆ ಗಾಂಧಿ ಹೆಸರನ್ನು ಹೇಳಿದರೆ ಪರವಾ ಇಲ್ಲ, ಗಾಂಧೀಜಿಯವರ ಭಕ್ತರು ಎಂದು ಮರ್ಯಾದೆ ಕೊಡುತ್ತಾರೆ. 20 ವರ್ಷಗಳಿಂದೀಚೆಗೆ ಜನಿಸಿದ ಯುವಕ ಇವತ್ತು ಮೆಜಾರಿಟಿಗೆ ಬಂದಿದ್ದಾನೆ. ಗಾಂಧೀ ಹೆಸರು ಹೇಳಿದರೆ ಅವನು ಒಪ್ಪುವುದಿಲ್ಲ. ಅವನು ಅವರನ್ನು ನೋಡಿಯೇ ಇಲ್ಲ. ಅವನು ನೋಡಿರುವುದೆಲ್ಲ ಯಾರನ್ನು ಎಂದರೆ, ಗಾಂಧಿ ಟೋಪಿ ಹಾಕಿರುವ ಕಾಂಗ್ರೆಸ್ ಜನರನ್ನು ಅಂಥ ಜನರನ್ನು ನೋಡಿ ಅವನು ಎಚ್ಚೆತ್ತಿದ್ದಾನೆ.

ಶ್ರೀ ಸದಾಶಿವಪ್ಪ ಪಾಟೀಲ್ (ದೇವದುರ್ಗ).—ಯುವಕರು ವಿಶ್ವಾಸವನ್ನು ಕಳೆದುಕೊಂಡಿದ್ದರೂ ಯುವತಿಯರು ವಿಶ್ವಾಸವನ್ನು ಕಳೆದುಕೊಂಡಿಲ್ಲ.

ಶ್ರೀ ಎಸ್. ಶಿವಪ್ಪ.—ಇವೊತ್ತು ಶ್ರೀಮಾನ್ ನಿಜಲಿಂಗಪ್ಪನವರು ಏನೇ ವಾದ ಮಾಡಲಿ, ಅವರ ಮಾತಿನಲ್ಲಿ ನಂಬಿಕೆ ಹೊರಟು ಹೋಗಿದೆ. ಅವರು ಮೈಸೂರು ದೇಶದಲ್ಲಿ ಎಷ್ಟರಮಟ್ಟಿಗೆ ಪ್ರಜಾಪ್ರಭುತ್ವವನ್ನು ಬೆಳೆಸಿಕೊಂಡು ಬಂದಿದ್ದಾರೆ ಎನ್ನುವುದನ್ನು ಅವರು ಕಾಂಗ್ರೆಸ್ ಅಧ್ಯಕ್ಷರಾದ ಮೇಲೆ ಎರಡು ತಿಂಗಳು ಮೈಸೂರು ದೇಶದಲ್ಲಿ ಏನು ಹತ್ಯಾಕಾಂಡ ನಡೆಯಿತು ಎನ್ನುವುದನ್ನು ಈ ದೇಶದ ಜನ ಮತ್ತು ಬೇರೆ ದೇಶದ ಜನ ನೋಡಿದ್ದಾರೆ. ಪ್ರಜಾಪ್ರಭುತ್ವ ಈ ದೇಶದಲ್ಲಿ ಇದೆಯೇ ಎನ್ನುವುದನ್ನೂ ಸ್ವತಃ ನೋಡಿದ್ದೇವೆ. ತಮ್ಮ ಮಿತ್ರರೊಬ್ಬರು ಮೈಸೂರು ರಾಜ್ಯದ ಗೃಹಸಚಿವರಾಗಿದ್ದು, ಮಧುಗಿರಿ ಪ್ರಕರಣವಾದಮೇಲೆ ರಾಜೀನಾಮೆಯನ್ನು ಕೊಟ್ಟರೆ ಅದನ್ನು ಒಪ್ಪಿಕೊಳ್ಳದೆ ಡೆಲ್ಲಿಯಲ್ಲಿ ಕಾಂಗ್ರೆಸ್ ಕಚೇರಿಯಲ್ಲಿ ಕುಳಿತುಕೊಂಡು ಕೆಲಸ ಮಾಡುತ್ತಿದ್ದರೆ, ಹೀಗಾದರೆ ಈ ದೇಶ ಎಷ್ಟುಮಟ್ಟಿಗೆ ಮುಂದುವರಿಯುತ್ತದೆ, ಈ ರಾಜ್ಯವನ್ನು ಎಷ್ಟರ ಮಟ್ಟಿಗೆ ಆಳುತ್ತೀರಿ ಎನ್ನುವುದನ್ನು ಎರಡು ವರ್ಷಗಳಿಂದ ನೋಡಿದ್ದೇವೆ.

ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯಲ್ಲಿ ಮಾತನಾಡುತ್ತ ಅವರು ಹೇಳಿದರು, ವೈಯಾಲಿಕಾವಲ್ ಹತ್ಯಾಕಾಂಡದ ವಿಚಾರವಾಗಿ ಮಾತನಾಡುತ್ತ ಅಲ್ಲಿ ನಡೆದಿರುವುದರ ವಿಚಾರಣೆಗೆ ಒಬ್ಬ ಮ್ಯಾಜಿಸ್ಟ್ರೇಟರನ್ನು ನೇಮಕ ಮಾಡಿದ್ದರೂ ಕೂಡ ಇಲ್ಲಿ ಹೇಳಿದರು, ಪೋಲೀಸಿನವರು ಮಾಡಿದ್ದೆಲ್ಲ ಸರಿ, ಯಾರದೋ ಕೊಲೆಯಾಯಿತು ಎಂದು ಹೇಳುವುದನ್ನೆಲ್ಲ ನಂಬುವುದಿಲ್ಲ ಎಂದು. ಯಾವ ವಿಚಾರ ವಿಚಾರಣೆಗೆ ಒಳಪಟ್ಟಿದೆಯೋ ಅದರ ಬಗ್ಗೆ ತೀರ್ಮಾನವನ್ನು ಈ ಶಾಸನ ಸಭೆಯಲ್ಲಿ ಅವರು ಕೊಟ್ಟಿದ್ದಾರಲ್ಲ, ಅಂಥವರಿಂದ ಈ ದೇಶದಲ್ಲಿ ಏನಾದರೂ ವಿಚಾರಣೆಯಿಂದ ಒಳ್ಳೆಯ ಫಲತಾಂಶ ಬರುತ್ತದೆ ಎಂದು ನಿರೀಕ್ಷಣೆ ಮಾಡಬಹುದೇ ? ಅವರ ಕೈಕೆಳಗಿನ ಒಬ್ಬ ಅಧಿಕಾರಿಯನ್ನು ವಿಚಾರಣೆಗೆ

(ಶ್ರೀ ಎಸ್. ಶಿವಪ್ಪ)

ಕಳುಹಿಸಿರುವಾಗ ಈ ರೀತಿಯಾಗಿ ಶಾಸನ ಸಭೆಯಲ್ಲಿ ಮಾತನಾಡಿದರೆ, ವಿಚಾರಣೆ ಮಾಡುವುದಕ್ಕೆ ಹೋಗಿರುವವರು ಯಾವ ರೀತಿ ರಿಪೋರ್ಟ್ ಬರೆಯುತ್ತಾರೆ ಎನ್ನುವುದನ್ನು ತಿಳಿಯಬಹುದು. ವೈಯಾಲಿಕಾವಲ್ ಹತ್ಯಾಕಾಂಡದ ಸಂಬಂಧವಲ್ಲಿ ವಿಚಾರಣೆ ಮಾಡುವುದಕ್ಕೆ ಒಬ್ಬ ಮ್ಯಾಜಿಸ್ಟ್ರೇಟರನ್ನು, ಒಬ್ಬ ಅಸಿಸ್ಟೆಂಟ್ ಕಮಿಷನರನ್ನು ಹಾಕಿದ್ದಾರೆ. ಅವರು ನಮ್ಮ ರೆವೆನ್ಯೂ ಉಪಮಂತ್ರಿಗಳಿದ್ದಾರಲ್ಲ ಅವರ ಮನೆಯೊಳಗೇ ಇದ್ದಾರೆ. ಅಂಥವರು ಇವೊತ್ತಿನ ದಿವಸ ಎಷ್ಟರಮಟ್ಟಿಗೆ ತೀರ್ಪನ್ನು ಕೊಡುತ್ತಾರೆ? ಯಾರೋ ಹೇಳುತ್ತಿದ್ದರು, ರೆವಿನ್ಯೂ ಮಂತ್ರಿಗಳು ಫೋನ್ ಮಾಡಿದರೆ, ಫೋನ್‌ನಲ್ಲಿ ಮಾತನಾಡು ವಾಗಲೂ ಎದ್ದು ನಿಲ್ಲುತ್ತಿದ್ದರಂತೆ. ಇಷ್ಟು ಭಯಭಕ್ತಿ ಇರುವ ಅಧಿಕಾರಿ ಎಷ್ಟರಮಟ್ಟಿಗೆ ನ್ಯಾಯವಾದ ರಿಪೋರ್ಟನ್ನು ಬರೆಯಬಹುದು ? ಇವೊತ್ತು ಶ್ರೀ ನಿಜಲಿಂಗಪ್ಪನವರ ಸರ್ಕಾರದಲ್ಲಿ ವಿಚಾರಣೆಯಿಂದ ಏನಾದರೂ ಪ್ರಯೋಜನವಾಗುತ್ತದೆ ಎಂದು ನಂಬಿಕೊಂಡಿದ್ದರೆ, ಅವರು ಮಾಡಿದ ಭಾಷಣದಿಂದ ಇದೆಲ್ಲ ಮಾಯವಾಯಿತು. ಅವರು ಈ ದೇಶದಲ್ಲಿ ಪ್ರಜಾಪ್ರಭುತ್ವದ ವಿಚಾರವಾಗಿ ಉಪನ್ಯಾಸ ಮಾಡುವ ಹವ್ಯಾಸವನ್ನು ದಯವಿಟ್ಟು ನಿಲ್ಲಿಸಿದರೆ ಬಹಳ ಕ್ಷೇಮ. ಪ್ರಜಾಪ್ರಭುತ್ವ, ಸಮಾಜವಾದ, ಈ ಒಳ್ಳೆಯ ಹೆಸರುಗಳೇನಿವೆ ಅದರ ಅರ್ಥವನ್ನು ದಯವಿಟ್ಟು ಕೆಡಿಸಬೇಡಿ. 20 ವರ್ಷಗಳಿಂದ ಕೊಲೆ ಮಾಡಿದ್ದೀರಿ. ಇವೊತ್ತಿನ ದಿವಸ ಪ್ರಜಾಪ್ರಭುತ್ವ ಮತ್ತು ಸಮಾಜವಾದ ದೇಶದಲ್ಲಿ ಬಾಳಬೇಕು, ಜಾಜ್ವಲ್ಯಮಾನವಾಗಿ ಬೆಳಗಬೇಕು ಎಂದು ಹೇಳುವವರಲ್ಲಿ ನಾನು ಒಬ್ಬ. ಇವೊತ್ತಿನ ದಿವಸ ಯುವಕ ಎದ್ದು ನಿಂತಿದ್ದಾನೆ, ಹೊಸ ಶಕ್ತಿ ಎದ್ದು ನಿಂತಿದೆ. ಕಾಂಗ್ರೆಸ್ಸಿನ ಶಕ್ತಿ ಅಳಿಯುತ್ತಿದೆ. ಈ ಹೊಸ ಶಕ್ತಿ ಮೇಲಕ್ಕೆ ಬರುತ್ತದೆ ಎಂದು ನಾನು ಹೇಳುತ್ತೇನೆ.

ನಮ್ಮ ಸಮಾಜದಲ್ಲಿ ಹೊಸ ಹುರುಪನ್ನು, ಹೊಸ ಅಂಶಗಳನ್ನು ಒಂದನ್ನೂ ಈ ಆಯವ್ಯಯ ಅಂದಾಜು ಪಟ್ಟಿಯಲ್ಲಿ ತೋರಿಸದೆ, ದೇಶಕ್ಕೆ ಅನ್ನವನ್ನು ಕೊಡುತ್ತಾರೆ ಎಂದು ನಂಬಿಕೊಂಡಿದ್ದ ಜನತೆಗೆ ಏನೂ ಇಲ್ಲವೆಂದು ಎಲ್ಲವನ್ನೂ ನಿರ್ನಾಮ ಮಾಡಿ, ದೇಶದ ಆರ್ಥಿಕ ದಿವಾಳಿತನವನ್ನು ಪ್ರದರ್ಶನ ಮಾಡಿರತಕ್ಕ ಈ ದೇಶದಲ್ಲಿ ಸಮಾಜವಾದವನ್ನು, ಪ್ರಜಾಪ್ರಭುತ್ವವನ್ನು ಬೆಳಗಿಸುವುದಕ್ಕೆ ಅಶಕ್ತವಾಗಿರತಕ್ಕ ಈ ಸರ್ಕಾರ ಮಂಡಿಸಿರುವ ಆಯವ್ಯಯ ಅಂದಾಜನ್ನು ನಾನು ನಿರಾಕರಿಸುತ್ತೇನೆ.

Sri B. P. KADAM (Karwar).—Madam Chairman, I do not wish to go into the figure, because they have already been dealt with in detail by the Leader of the Opposition. I would, at this stage, say that the Hon'ble Finance Minister has done well in not expressing any anger against Government of India which was his feature for some time. He has done well to express in detail about the development of agriculture and the importance of agriculture in the State. He has also dealt with the language issue. Here, I feel that he could have done better. The most important factor in this country is to see that the national integration is encouraged. It is a sadest thing in our life time to see that the national flag has been bunt and some cry has been there in Tamilnad in the name of sovereign independent Tamilnad. Sir, this will have to be dealt with very firmly. It is the duty of all the neighbouring States—Madras, Kerala and Andhra—to see that those who are supporting this move are brought to their knees and I am sure they can do it. Should they continue this activity of burning the national flag or using another flag, they should be sternly warned; this will have to be put down with an iron hand and should be ruthlessy suppressed. If this done, all these people will be brought to their knees within 24 hours. From Cape Camorin to Kashmir we have one nation. That feeling is there from the Vadic days and from the epic days and we must see that this continues till there is life on this earth.

Sir, the Chief Minister who also happens to be the Congress President must call all the leaders from the neighbouring States and see that a firm step is taken and Government of India also must take a firm step to put this down movement of burning national flags.

In regard to agriculture, Government has done well in giving encouragement. Agricultural Products are the main things that make the people of a country happy; otherwise, there will be chaos. If there is shortage of oil our industries will suffer. In this connection I would like to note that there absolutely nothing in the budget to show that the Government has got any progressive move which aims at socialistic pattern of society. The late Prime Minister, Sri Nehru tried his best to create a socialistic pattern of society and unfortunately it has ceased to exist after him.

Sri DIGAMBARA RAO B. KALMANKAR (Aland).—On a point of clarification. I want to know whether the hon'ble member believes that this Government stands for socialism and democracy because he expects too much from the Government ? It has been the policy ; it stands for progress and socialism and try for social justice. What I said is the Government stands for it but in practice it is not carried. For example, the Land Reforms Act. It is a retrograde step. In the North Karnatak there was the Bombay Tenancy Agricultural Lands Act which was progressive and there was provision for Tillers Day, meaning the tenant would have been the owner of the land. In that case, he would have proprietory rights. The quantity which is produced and which is required to be given to the landlord is raised. Actually the notifications issued by the officers go to help the landlords and they want to see that the tenants are exploited. That is why, the land law must be made progressive and the cultivator must be made the master of the land so that he may take more interest and cultivate more not only for himself but for the State. The food problem cannot be solved by having a lot of suspicion and uncertainty. It can be solved only by creating a sense of confidence in the tiller of the land.

Then Sir, about the procurement levy. I do not understand why the Government should have such a cruel policy. Even the most deficit State like Kerala, has given exemption to small cultivators owning less than three acres. Here the Government is not giving that facility. These people having two or three acres and who are growing just for meeting their need and who are unable to purchase, must be exempted. It must be the policy of the Government to see that those who cultivate three acres or less are exempted. I am not personally opposed to procurement of levy. Those who are in the industry must be fed by those who are cultivating the land. Even then, they should be convinced of the policy and those who are cultivating should not be harassed. Procurement should be made by persuasion and co-operation and not by harassing and terrorising. I have discussed with the Chief Minister last year ; I have also discussed with the Food Minister. In Karwar there have been 104 cases and that area has been such

(SRI DIGAMBARA RAO B. KALMANKAR)

that every year the payment of levy has been more than the target. But this year a novel thing has happened and the harassment is against only the Konkani speaking people. I brought it to the notice of the Chief Minister and said that such things should not happen. If such political victimisations take place, I am sure there will be commotion and it is bad for those who are at the helm of affairs. In regard to declaration forms. Even during the British time I do not think people were asked to fill in such big forms or documents. The declaration form required to be filled is so clumsy that it cannot be completed by the agriculturists. Therefore, the form should be simple and Talatis and Shanbhoges and Village Officers must be directed to fill them and subm it to the authorities in time. Otherwise the harassment will continue. The Policy of the Government should not be one of coercion but persuasion.

The Government has mentioned something about rodent control. To my knowledge I know there is a certain legislation in Madras which prohibits killing of non-poisonous snakes. These non-poisonous snakes are friends of the farmers and these snakes kill rodents on a large scale. In our area recently there are a lot of outside people who kill non-poisonous snakes. I brought this to the notice of the district authorties and told them how some people are invading on non-poisonous snakes and are indiscriminately killing them for hides. I am sure if this is not checked, some of the fields will be left barren. I submit there is necessity to have some legislation to see that non-poisonous snakes are protected and those people who kill them should be dealt with severely.

SRI N. HUTCHMASTY GOWDA (Huliyurdurga).—Non-poisonous snakes do ruin crops.

SRI B. P. KADAM.—No. In Madras they have protected them. About the horticulture, I am proud that there is a very energetic Director. The stress must be laid on the growth of vegetables. Unfortunately there has not been so much propaganda for the growth of vegetables in the rural areas. Vegetables should occupy greater percentage in our diet which is healthy and which can change the diet system. Fortunately we are endowed with a climate where we can have vegetables throughout the country. That point requires to be stressed. Throughout the activities of the department, I do not find any importance being given to the growth of spices-cloves and nutmeg. This can be grown where areca and pepper are grown. These must be stepped up as there is a good market in foreign countries for this cloves and nutmeg.

As regards the land revenue, I do not understand the attitude of the Government in not abolishing it and giving relief to poor and uneconomic holdings. I am of the opinion that those who are cultivating less than 5 acres must be exempted. Otherwise it will not be helpful.

The State activity must be to see that the poor agriculturists are helped so that they can spare money for purchasing chemical fertilisers, etc.

Sri RAMAKRISHNA HEGDE (Minister for Finance, Planning and Industries).—If we exempt five acres, supposing you have 10 acres; you will divide it into two so as to bring the holding within the purview of the exemption.

3-30 P.M.

Sri B. P. KADAM.—If that is your view you declare a particular date and let there be no scope for any sub-division.

Sri RAMAKRISHNA HEGDE.—What about genuine partition of lands between brothers?

Sri B. P. KADAM.—may be there.

About prohibition, Government has done well in scrapping it. It is a hypocracy, in my humble opinion, to say that there should be some prohibition in some taluks. I know the activities of those who support prohibition. There should not be prohibition at all, but there should be Temperence Committees. I oppose the drink habit and Government must make it a point to appoint those who do not drink publicly on the Temperence Committees.

About grape wine, Government must lay stress because there are a lot of possibilities of having wine or alcohol from grapes and it can also be exported to adjoining States. We have got certain areas which can grow better grapes than the Kabul and the Tashkent variety. It is an encouraging feature.

About cashew liquor, I was told by certain friends that it is very good and that it has got a very good demand even in the African Continent. It is said to be as good as Vodka which is produced in Russia and is effective. One who drinks it forgets everything including himself. So, Government take steps to see that it is purified still further and create market, if possible in foreign countries.

Now I come to the most crucial point *viz.* the Forest. It has been the demand of the agriculturists in North Kanara District that the forest policy should be liberalised and that more lands should be granted for cultivating food crops and for residential purposes. There have been several hundreds of encroachments because people are helpless. They have no land and they have no site even for dwelling purposes. There have been delays extending from 7 to 8 years. There was a flood in the coastal areas of North Kanara District in 1961. The people who lost lands and to whom the district authorities promised house sites within a week have not been provided even to this day. People who have applied for land and for sites for dwelling purposes have been waiting for years and years for a reply. some people have died; at least their dependents must get them. I request the Government to see that lands fit for cultivation are granted to them and that encroachments for

(Sri B. P. Kadam)

residential purposes are regularised as early as possible. There were committees with the Assistant Commissioner of the Division as the Chairman and they are wound up.

Sri B. RACHAIAH (Minister for Revenue and Forests).—We have reconstituted the committee with the Deputy Commissioner, D. F. Os concerned and the Taluk Board Chairman and it is charged with the task of releasing nearly one lakh of acres in North Kanara District out of the total area of 2,641 square miles. Out of 13,000 acres nearly 5,000 have been cleared and handed over and the balance is in the process of being released.

Sri B. P. KADAM.—The Hon'ble Minister for Forests has got a very genuine desire to help the people who are in need. I would respectfully urge upon him to come to North Kanara in April and spend some time and see that the grievances are discussed and settled. After all, a lot of difficulties and misunderstandings can be removed by understanding public grievances, and that should be the policy under a democratic system.

About minor irrigation, I would like to say that it has been neglected in North Kanara District. The road programme also requires to be attended to' Electrification also needs to be attended to. Unless these matters are attended to, there cannot be much progress. The progress in North Kanara as compared to South Kanara is very little. South Kanara has progressed magnificently because the road system minor irrigation is well attended to and these things have contributed to the well-being of South Kanara.

About Dearness Allowance to Government employees, I am happy that something is given though it may not come up to their expectation. It ought to have been brought into force at least from 1st of January this year. Even what little is given is given partly in cash and partly in savings certificates and so on.

About drinking wells, I am glad that Government has got a magnificent scheme. All the same I would urge upon Government to see that wells are dug up and there is water in them throughout the year or at any rate throughout the major portion of the year. Our misfortune is that wells are dug up on a particular day and when the overseer or Assistant Engineer comes there, water is temporarily traced for the purpose of sanctioning the bill and the water vanishes with the officer never to be traced again. There should not be wells without water; it is a contradiction in terms and defeats the very purpose. Government should take appropriate action against the defaulting officers and the contractors; otherwise there will be no progress. That is all that I wanted to say for the present. With these observations, I thank you, Sir.

†ಶ್ರೀ ಎಸ್. ಎಂ. ಗುರೆಡ್ಡಿ (ಮುದ್ದೆಬಿಹಾಳ್).—ಸಭಾಪತಿಗಳೇ, ಹಣಕಾಸಿನ ಮಾನ್ಯ ಮಂತ್ರಿಗಳು ಮಂಡಿಸಿರತಕ್ಕ ಆಯವ್ಯಯ ಪಟ್ಟಿಯನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

ನಮ್ಮ ಆರ್ಥಿಕ ಸಚಿವರು ಈ ಮನೆಗೆ ಮೋಸಮಾಡಲು ಹೊರಟಿಲ್ಲ ಅವರು ಮಂಡಿಸಿರತಕ್ಕ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಅವರೊಂದು ಸುವ್ಯವಸ್ಥಿತ ಸ್ಥಿತಿಯಲ್ಲಿ ಇಟ್ಟಿದ್ದಾರೆಂದು ನಾನು ಹೇಳುತ್ತೇನೆ. ಈ ದಿವಸ ನಾವು ನಮ್ಮ ರಾಜ್ಯದಲ್ಲಿ ಪ್ರಜಾಸತ್ತಾತ್ಮಕ ಆಡಳಿತವಿದ್ದರೂ ಇಲ್ಲಿ ನಾವು ಸಮತಾವಾದ ಸಮಾಜವನ್ನು ರೂಪಿಸುವುದಕ್ಕೆ ಒಂದು ಅವಕಾಶವನ್ನು ನಮ್ಮ ಆಯವ್ಯಪಟ್ಟಿಯಲ್ಲಿ ಅಳವಡಿಸಿರತಕ್ಕದ್ದು ನಮಗೆ ಕಂಡುಬರುತ್ತಿದೆ. ಆದರೆ ನಾನು ಕೇಳುವಮಟ್ಟಿಗೆ ಅದು ಯಾವ ಸಮಾಜವಾಗಲೀ, ಸಮತಾವಾದ ಸಮಾಜವೇ ಆಗಲಿ, ಅದನ್ನು ರೂಪಿಸತಕ್ಕ ಹಾದಿಯಲ್ಲಿ ಅದರ ರೂಪುರೇಖೆಗಳೇನು ಅದಕ್ಕೆ ಅನುಗುಣವಾದ ಕಾರ್ಯನೀತಿಯೇನು ಎಂಬುದನ್ನು ಮೊದಲು ನಾವು ಸುಸ್ಪಷ್ಟಪಡಿಸಬೇಕು. ಆದರೆ ನಾವು ಈ ದಿವಸ ಅಂಥ ಸಮತಾವಾದ ಸಮಾಜಕ್ಕೆ ಅನುಗುಣವಾದ ರೀತಿನೀತಿಗಳನ್ನು ರೂಪಿಸಿಲ್ಲ ಎಂದು ತಿಳಿದುಕೊಂಡಿದ್ದೇನೆ. ಅಂಥ ನಿರ್ದಿಷ್ಟವಾದ ಕಾರ್ಯಕ್ರಮಗಳಿಲ್ಲದೆ ಅದನ್ನು ನಾವು ಒಪ್ಪಿದ್ದರೂ ಅದನ್ನು ಕಾರ್ಯರೂಪದಲ್ಲಿ ಸಾಧಿಸುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ನಾನು ತಿಳಿಯುತ್ತೇನೆ. ನಾವೀದಿವಸ ನಮ್ಮಲ್ಲಿ ಬಂಡವಾಳಶಾಹಿಯನ್ನು ಕೈ ಬಿಟ್ಟಿಲ್ಲ. ಹಾಗೇ ಆ ಸೋಷಿಯಲಿಸ್ಟಿಕ್ ಪ್ಯಾಟ್ರನ್ ಆಫ್ ಸೊಸೈಟಿಯನ್ನು ಸ್ಥಾಪಿಸಬೇಕೆಂಬ ನೀತಿಯನ್ನೂ ನಾವು ಕೈ ಬಿಟ್ಟಿಲ್ಲ. ಹೀಗಾಗಿ ನಮ್ಮ ಆರ್ಥಿಕ ಪರಿಸ್ಥಿತಿಯಲ್ಲಿ ಇವುಗಳಿಗೆಲ್ಲಾ ಒಂದು ಹೊಂದಾವಣಿಕೆ ಇಲ್ಲವೆಂಬುದಾಗಿ ನನಗೆ ಕಂಡುಬರುತ್ತಿದೆ. ನಮ್ಮ ಆರ್ಥಿಕ ಸಚಿವರು ಈ ದಿವಸ ಒಂದು ಉಳಿತಾಯ ಬಡ್ಜೆಟ್ಟನ್ನೇನೋ ತೋರಿಸಿದ್ದಾರೆ. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಾದರೆ—ನಮ್ಮ ಮುಂಗಡ ಪತ್ರ ಅದು ಉಳಿತಾಯದ್ದೇ ಆಗಿರಲಿ ಅಥವಾ ಖೋತಾದ್ದೇಆಗಿರಲಿ, ನಾವು ಇಲ್ಲಿಯವರೆಗೂ ಕೈಗೊಂಡಿರತಕ್ಕ ನಮ್ಮ ಯೋಜನೆಗಳಿಂದ ಜನತೆಗೇನು ಲಾಭವಾಗಿದೆ, ಅವರ ಜೀವನ ಮಟ್ಟ ಏರಲು ಏನಾದರೂ ಆಶಾಕಿರಣಗಳು ಕಾಣುತ್ತಿವೆಯೇ ಎಂಬುದನ್ನು ನಾವು ನೋಡಬೇಕಾಗಿದೆ. ನಮ್ಮಲ್ಲಿ ಅನೇಕ ಅಭಿವೃದ್ಧಿ ಕೆಲಸಕಾರ್ಯಗಳೇನೋ ನಡೆದಿವೆ. ಆದಾಗ್ಯೂ ಇಲ್ಲಿ ಪರ್ ಕ್ಯಾಪಿಟಾ ಇನ್‌ಕಂ ಮಾತ್ರ ಜಾಸ್ತಿಯಾಗಿಲ್ಲ ಅನ್ನುವುದು ಸುಸ್ಪಷ್ಟವಾಗಿ ಕಾಣುತ್ತಿದೆ. ಈ ದಿವಸ ಎಷ್ಟೋ ಜನರು ದಿನಕ್ಕೆ ಎಂಟು ಆಣೆ ಕೂಲಿ ಸಹ ಕಾಣದೆ ಬೀದಿಗಳಲ್ಲಿ ಅಲೆಯುತ್ತಿದ್ದಾರೆಂಬುದನ್ನು ನಾವು ದಿನಂಪ್ರತಿ ನೋಡುತ್ತಿದ್ದೇವೆ. ಎಷ್ಟು ಜನರು ಬೀದಿಯಲ್ಲಿ ಅನ್ನವಿಲ್ಲದೆ ವಾಸಮಾಡುತ್ತಿದ್ದಾರೆಂಬುದನ್ನು ನಾವು ಕಾಣುತ್ತಿದ್ದೇವೆ. ಮನೆಯಿಲ್ಲದೆ ಎಷ್ಟು ಜನ ಬೀದಿಯಲ್ಲಿ ಬಿದ್ದಿರುತ್ತಾರೆಂಬುದನ್ನು ನಾವು ಕಾಣುತ್ತಿದ್ದೇವೆ. ಹೀಗಿರುವಾಗ ನಾವು ಇಲ್ಲಿ ಒಂದು ಉಳಿತಾಯ ಬಡ್ಜೆಟ್ಟನ್ನು ತೋರಿಸಿದ್ದೇವೆಂದರೆ ಅದು ಎಷ್ಟರಮಟ್ಟಿನ ಉಳಿತಾಯ ಬಡ್ಜೆಟ್ ಎಂಬುದನ್ನು ನಾವು ವಿಚಾರ ಮಾಡಬೇಕಾಗಿದೆ. ಅವರ ಪ್ರಗತಿಗಾಗಿ ನಾವು ಈ ದಿವಸ ಏನಾದರೂ ಪ್ರಯತ್ನ ಮಾಡುತ್ತಿದ್ದೇವೆಯೇ ಎಂಬುದನ್ನು ನೋಡಬೇಕು. ನಮ್ಮಲ್ಲಿ ಸಮತಾವಾದ ಸಮಾಜಕ್ಕೆ ಅನುಗುಣವಾದ ಆರ್ಥಿಕ ನೀತಿ ಇಲ್ಲವಾದರೂ, ನಾವು ನಮ್ಮ ರಾಷ್ಟ್ರದ ಅಭಿವೃದ್ಧಿಯನ್ನು ಆ ರಷ್ಯಾದೊಂದಿಗೆ ಹೋಲಿಸುವುದಕ್ಕೆ ಹೋಗತಕದ್ದು ಸರಿಯೇ ಎಂದು ಕೇಳುತ್ತೇನೆ? ರಷ್ಯಾದಲ್ಲಿ ಇರತಕ್ಕ ಸೋಷಿಯಲಿಸ್ಟಿಕ್ ಪ್ಯಾಟ್ರನ್ ಆಫ್ ಸೊಸೈಟಿಯೇ ಒಂದು. ಅಮೆರಿಕಾ ದೇಶದಲ್ಲಿರತಕ್ಕ ಅವರು ಹಾಕಿಕೊಂಡಿರತಕ್ಕ ನೀತಿಯೇ ಒಂದು. ಆದರೆ ನಮ್ಮಲ್ಲಿ ಇರತಕ್ಕದ್ದು ಮಿಕ್ಸೆಡ್ ಎಕಾನಮಿ. ಆದ್ದರಿಂದ ಇಲ್ಲಿ ಆ ಸಮಾಜ ಸೇವೆಗೆ ಅಷ್ಟು ಅವಕಾಶವಿಲ್ಲ. ನಾವು ನಮ್ಮ ರಾಷ್ಟ್ರವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರಗಳೊಂದಿಗೆ ಹೋಲಿಕೆ ಮಾಡತಕ್ಕ ಕಾಲದಲ್ಲಿ, ಆ ರಾಷ್ಟ್ರಗಳೊಂದಿಗೆ ಇಲ್ಲಿ ನಮ್ಮ ಅಭಿವೃದ್ಧಿಯನ್ನು ತುಲನ ಮಾಡತಕ್ಕ ಕಾಲದಲ್ಲಿ ನಾವು ಇಲ್ಲಿ ನಮ್ಮ ರಾಜ್ಯದಲ್ಲಿ ಡಿಪ್ರೆಸ್ಡ್ ಕ್ಲಾಸಿನವರಿಗೆ ಒಂದು ವಿಶೇಷರೀತಿಯಲ್ಲಿ ಸಹಾಯ ಮಾಡಬೇಕಾಗಿದ್ದರೆ ಅದಕ್ಕೆ ದೇಶವಲ್ಲಿಂತಕ್ಕ ಉಳಿದ ಜನರು ತ್ಯಾಗ ಮಾಡುವುದಕ್ಕೆ ಸಿದ್ಧರಾಗಿರಬೇಕು. ಆದರೆ ನಮ್ಮ, ವಿರೋಧ ಪಕ್ಷದ ನಾಯಕರು ಮಾತನಾಡುತ್ತ ನಮ್ಮ ರಾಜ್ಯದ ಸಾಲದ ಹೊರೆಯ ಭಾರ ಜಾಸ್ತಿ ಆಗಿದೆ, ರಾಜ್ಯದ ಹಣಕಾಸಿನ ಪರಿಸ್ಥಿತಿ ಚೆನ್ನಾಗಿಲ್ಲ, ರಾಜ್ಯ ಆರ್ಥಿಕ ದಿವಾಳಿತನದಲ್ಲಿದೆ ಎಂದು ಹೇಳಿದ್ದಾರೆ. ಆದರೆ ಅವರು ಹಾಗೆ ಹೇಳಿರತಕ್ಕದ್ದನ್ನು ನಾನು ವಿರೋಧ ಮಾಡುತ್ತೇನೆ. ರಾಜ್ಯದ ಆರ್ಥಿಕ ಪರಿಸ್ಥಿತಿಯೇನೋ ನೆಟ್ಟಗೇ ಇದೆ. ಈ ದಿವಸ ನಮ್ಮ ಮಾನ್ಯ ಶಿವಪ್ಪನವರು ಮಾತನಾಡಿರುವ ಹಾಗೆ ಜನಗಳ್ಯಾರೂ ತೆರಿಗೆಯನ್ನು ಕೊಡುವುದು ಬೇಡ, ಆದರೆ ರಾಜ್ಯದಲ್ಲಿ ಕೈಗಾರಿಕೆಗಳು ಮಾತ್ರ ಅಭಿವೃದ್ಧಿಯಾಗಬೇಕು, ಜನರಿಗೆ ಇರಿಗೇಷನ್ ಫೆಸಿಲಿಟೀಸ್ ಜಾಸ್ತಿಯಾಗಬೇಕು, ದೇಶದ ಆರ್ಥಿಕಾಭಿವೃದ್ಧಿ ಹೆಚ್ಚಬೇಕು, ಎಂದರೆ ಇದು ತೀರಾ ವಿರೋಧಾಭಾಸದ ಮಾತಾಯಿತು. ಅವರು ಹೀಗೆ ಒಂದು ವಿರೋಧಾಭಾಸದ ಮಾತನ್ನಾಡಿದ್ದಾರೆ. ರಾಜ್ಯದಲ್ಲಿ ಪ್ರಜೆಗಳ ಮೇಲೆ ತೆರಿಗೆ ಹಾಕಬಾರದು ಅಂದರೆ ಇಲ್ಲಿ ನಡೆಯಬೇಕಾದ ಇಷ್ಟೆಲ್ಲ ಅಭಿವೃದ್ಧಿ ಕಾರ್ಯಗಳಿಗೆ ಹಣ ಎಲ್ಲಿಂದ ಬರಬೇಕು. ರಾಜ್ಯಾದಾಯವನ್ನು ಹೇಗೆ ಹೆಚ್ಚುಮಾಡಿಕೊಳ್ಳಬೇಕೆಂಬ ಬಗ್ಗೆ ಅವರು ಸುಸ್ಪಷ್ಟವಾದ ಯಾ ಸಲಹೆಯನ್ನೂ ಮಾಡಿಲ್ಲ. ನಮ್ಮದು ಅಭಿವೃದ್ಧಿ ಹೊಂದಿದ ರಾಷ್ಟ್ರವಲ್ಲ. ಇದಿನ್ನೂ ಅಭಿವೃದ್ಧಿ ಹೊಂದತಕ್ಕ ಮಾರ್ಗದಲ್ಲಿದೆ. ಅಭಿವೃದ್ಧಿ ಹೊಂದತಕ್ಕ ಮಾರ್ಗದಲ್ಲಿರತಕ್ಕ ರಾಷ್ಟ್ರವನ್ನು ನಾವು

(ಶ್ರೀ ಎಸ್. ಎಂ. ಗುರೆಡ್ಡಿ)

ಅಭಿವೃದ್ಧಿ ಹೊಂದಿದ ರಾಷ್ಟ್ರಗಳೊಡನೆ ತುಲನ ಮಾಡುವುದಕ್ಕೆ ಹೋಗಬಾರದು. ರಾಜ್ಯದ ಆದಾಯವನ್ನು ಸರಿಯಾದ ಮಾರ್ಗದಲ್ಲಿ ಜನರಿಗೆ ಅನುಕೂಲವಾಗತಕ್ಕ ರೀತಿಯಲ್ಲಿ ಉಪಯೋಗ ಮಾಡಬೇಕೆಂಬ ಮಾತನ್ನು ನಾನೂ ಸಹಾ ಒಪ್ಪುತ್ತೇನೆ. ನಮ್ಮ ರಾಷ್ಟ್ರದಲ್ಲಿ ಅನೇಕ ರಾಜ್ಯಗಳು ತಮ್ಮ ಔದ್ಯೋಗಿಕ ಪ್ರಗತಿಯನ್ನು ಸಾಧಿಸುತ್ತಿರುವಾಗ ನಮ್ಮ ರಾಜ್ಯ ಮಾತ್ರ ಅದರಲ್ಲಿ ಹಿಂದೆ ಬೀಳುತ್ತಿದೆ ಎಂಬುದಾಗಿ ಶ್ರೀಮಾನ್ ಶಿವಪ್ಪನವರು ಹೇಳಿದರು. ನಮ್ಮ ರಾಜ್ಯ ಕೆಲವು ಮಟ್ಟಿಗೆ ಕೈಗಾರಿಕೆಗಳಲ್ಲಿ ಹಿಂದೆ ಬಿದ್ದಿದ್ದರೂ ವಿದ್ಯಾಭಿವೃದ್ಧಿಯಲ್ಲಿ, ರಾಜ್ಯದ ಒಕ್ಕಲುತನದ ಅಭಿವೃದ್ಧಿಯಲ್ಲಿ ಇದು ಬಹಳ ಮುಂದೆ ಸಾಗಿದೆ, ಅಭಿವೃದ್ಧಿಗಳಿಸಿದೆ. ಆದರೆ ಅದು ನಮ್ಮ ರಾಜ್ಯದ ಜನಸಂಖ್ಯೆಗನುಗುಣವಾಗಿ ನಡೆಯದೆ ಇರಬಹುದು. ಅದಕ್ಕೆ ನೂರೆಂಟು ಕಾರಣಗಳಿವೆ ಎಂದು ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಹಾಗೆ ಅದಕ್ಕೆ ಕಾರಣಗಳನ್ನು ಕೊಡುತ್ತಾ ದೇಶದಲ್ಲಿ ಹೊರಗಿನವರ ಧಾಳಿ ನಡೆಯಿತೆಂದೂ, ಇಲ್ಲಿ ಭಾಷಾ ಗೊಂದಲವೆದ್ದಿದ್ದು, ಗಡೀವಿವಾದಗಳು ಉಂಟಾದ್ದು, ಬರಗಾಲ ಬಿದ್ದಿದ್ದು—ಈ ಎಲ್ಲ ಕಾರಣಗಳಿಂದ ಇಲ್ಲಿ ಎಷ್ಟರ ಮಟ್ಟಿನ ಪ್ರಗತಿಯನ್ನು ಸಾಧಿಸಬೇಕಾಗಿತ್ತೋ ಅಷ್ಟನ್ನು ಸಾಧಿಸಲಿಕ್ಕಾಗಲಿಲ್ಲ ಎಂಬುದಾಗಿ ಅವರು ತಿಳಿಸಿದ್ದಾರೆ. ಆದರೆ ಅಷ್ಟಕ್ಕೆ ರಾಜ್ಯದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ ಅಂದರೆ ನಾನು ಅದನ್ನು ಒಪ್ಪುವುದಿಲ್ಲ. ರಾಜ್ಯ ಸಾಕಷ್ಟು ಅಭಿವೃದ್ಧಿಯನ್ನು ಸಾಧಿಸಿದೆ. ನಮ್ಮಲ್ಲಿ ಸಾಲದ ಹೊರೆ ಜಾಸ್ತಿಯಾಗಿದ್ದರೆ ಅದಕ್ಕೆ ಸರಿಯಾಗಿ ಆಸ್ತಿಯನ್ನೂ ರೂಢಿಸಿವೆ. ಅವರು ನಮ್ಮ ಪಿ. ಡಬ್ಲ್ಯು. ಡಿ. ಅಸೆಟ್ಟನ್ನು ಅಸೆಟ್ಟಲ್ಲ ಎನ್ನುತ್ತಾರೆ. ಅದು ಸರಿಯಲ್ಲ. ನಮ್ಮ ಶರಾವತಿ, ಭದ್ರಾವತಿ ಕಾರ್ಖಾನೆ, ನೂರೆಂಟು ಸೀಡ್ ಫಾರಂಗಳು, ವ್ಯವಸಾಯಾಭಿವೃದ್ಧಿ ಇವೆಲ್ಲಾ ನಿಜವಾದ ಅಸೆಟ್ಟುಗಳಲ್ಲವೇನು ? ಇವುಗಳೆಲ್ಲಾ ನಿಜವಾದ ಅಸೆಟ್ಟುಗಳೆಂಬುದು ಸುಸ್ಪಷ್ಟವಾಗಿ ಕಾಣುತ್ತಿದೆ. ನಾವು ಈ ದಿವಸ ನಮ್ಮ ವಿದ್ಯಾಭಿವೃದ್ಧಿಗೆ 36 ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದೇವೆ. ಇದು ದೇಶಕ್ಕೆ ಒಂದು ಇಂಡೈರೆಕ್ಟ್ ಬೆನಿಫಿಟ್ ಅಲ್ಲವೇ ನಮ್ಮಲ್ಲಿ ಇತ್ತೀಚೆಗೆ ನೀರಾವರಿ ಕಾರ್‍ಯಗಳು ಅಭಿವೃದ್ಧಿಯಾಗಿವೆ. ಆದುದರಿಂದ ನಮ್ಮಲ್ಲಿ ಪಿ. ಡಬ್ಲ್ಯು. ಡಿ. ಅಸೆಟ್ಟುಗಳೇನೂ ಹಿಂದೆ ಬಿದ್ದಿಲ್ಲ ಎಂಬುದನ್ನು ಮಾನ್ಯ ಸದಸ್ಯರು ಅರಿಯಬೇಕು. ಇನ್ನು ನಮ್ಮ ದೇಶದಲ್ಲಿ ಕೈಗಾರಿಕೆಗಳು ಬೆಳೆಯುವುದಕ್ಕೆ ಸಾಕಷ್ಟು ಟೆಕ್ನಿಕಲ್ ನೋಹೌ ಇದೆ, ಕಚ್ಚಾಮಾಲುಗಳಿವೆ, ಮ್ಯಾನ್ ಪವರ್ ಇದೆ. ಆದರೆ ಆದಕ್ಕೆ ಬೇಕಾದ ಬಂಡವಾಳ ಮಾತ್ರ ಬೇಕಾಗಿದೆ. ಅದನ್ನು ಎಲ್ಲಿಂದ ತರಬೇಕು ಎಂಬುದನ್ನು ನಾವು ಕಂಡುಹಿಡಿಯಬೇಕಾಗಿದೆ. ಅದಕ್ಕೆ ನಮ್ಮಲ್ಲಿ ಸಾಕಷ್ಟು ಬಂಡವಾಳಗಾರರು ಇಲ್ಲದಿರುವಾಗ ಇಲ್ಲಿಗೆ ಎರಡನೇಯವರು ಬರಬೇಕೆಂಬುದು ಸಾಧುವಾದ್ದೇ. ಇಲ್ಲಿಗೆ ಪರರಾಜ್ಯದವರು ಬರಬಾರದು ಅನ್ನುವುದು ಸರಿಯಲ್ಲ. ರಾಜ್ಯದಲ್ಲಿ ಹಣವನ್ನು ದೊರಕಿಸಲು ಯಾವ ಮಾರ್ಗವನ್ನು ಕಂಡುಹಿಡಿಯಬೇಕು ಅನ್ನುವುದನ್ನು ನಮ್ಮ ವಿರೋಧ ಪಕ್ಷದವರು ಹೇಳಲಿಲ್ಲ. ದೇಶದಲ್ಲಿ ವಿದ್ಯಾಭಿವೃದ್ಧಿಯಾಗಬೇಕು, ಜನ ಜೀವನದ ಮಟ್ಟ ಏರಬೇಕು ಅಂದರೆ, ಅದಕ್ಕೆ ದೇಶದಲ್ಲಿರತಕ್ಕ ಕೈಗಾರಿಕೆಗಳು ಬೆಳೆಯಲೇಬೇಕು. ಹಾಗೆ ಅವು ಬೆಳೆಯಬೇಕಾದರೆ ಅದಕ್ಕೆಲ್ಲಾ ಹಣ ಬೇಡವೇ ? ಅದಕ್ಕಾಗಿ ಬಂಡವಾಳಗಾರರು ನಮಗೆ ಎಲ್ಲಿಂದಲಾದರೂ ಸರಿ, ಬರಬೇಕು ಅನ್ನುವುದು ನಮ್ಮ ಸ್ಪಷ್ಟವಾದ ಅಭಿಪ್ರಾಯ. ನಮ್ಮಲ್ಲಿ ನಾನಾ ಯೋಜನೆಗಳ ರೂಪದಿಂದ ದೇಶದಲ್ಲಿ ಅಭಿವೃದ್ಧಿಕಾರ್‍ಯಗಳು ಸಾಕಷ್ಟು ನಡೆದಿವೆ. ಆದರೆ ನಮ್ಮಲ್ಲಿ ಸಣ್ಣಪುಟ್ಟ ನೀರಾವರಿ ಯೋಜನೆಗಳು ಸಾಕಷ್ಟಾಗಿವೆ. ದೊಡ್ಡ ದೊಡ್ಡ ನೀರಾವರಿ ಯೋಜನೆಗಳು ಮಾತ್ರ ತಿರುಪತಿ ಕ್ಷೌರದಂತಾಗಿವೆ. ಅವು ಪೂರ್ಣ ಕೆಲಸವಾಗದೆ ಅರ್ಧಂಬರ್ಧ ಕೆಲಸವಾಗಿ ಹಾಗೇ ಉಳಿದಿವೆ. ಈ ಯೋಜನೆಗಳು ಹೀಗೇ ಉಳಿದರೆ ಅವುಗಳಿಗೆ ಸರಿಯಾದ ಒಂದು ಹಣಕಾಸಿನ ವ್ಯವಸ್ಥೆಯನ್ನು ಮಾಡದಿದ್ದರೆ ಈ ಸರ್ಕಾರಕ್ಕೆ ಜನತೆಯಲ್ಲಿ ಒಂದು ಕಾನ್‌ಫಿಡೆನ್ಸ್ ಇರುವುದಿಲ್ಲ. ಆದುದರಿಂದ ನಾನು ಸರ್ಕಾರಕ್ಕೆ ಈ ಸಂದರ್ಭದಲ್ಲಿ ಸಲಹೆ ಮಾಡುವುದೇನೆಂದರೆ, ಈ ಯೋಜನೆಗಳಿಗೆ ಬೇಕಾಗತಕ್ಕ ಹಣವನ್ನು ಮೊದಲು ಹೊಂದಿಸಿಕೊಂಡು, ಅವುಗಳನ್ನು ಪ್ರಾರಂಭ ಮಾಡಬೇಕು. ಹಾಗೆ ಇವರಲ್ಲಿ ಸಾಕಷ್ಟು ಹಣವಿಲ್ಲ ಅನ್ನುವುದಾದರೆ ಅವುಗಳನ್ನು ಹಾಗೆ ಸ್ವಲ್ಪ ಕಾಲ ಮುಂದೂಡುವುದು ಒಳ್ಳೆಯದೆಂದು ಹೇಳುತ್ತೇನೆ. ಅದನ್ನು ಮಾಡದೆ ಕೇವಲ ಅಲ್ಲಿ ಬೇಕಾದ ಕೆಲವು ಅಧಿಕಾರಿಗಳ ಕಟ್ಟಡ ಇತ್ಯಾದಿಗಳಿಗೆ ಹಣವನ್ನು ವೆಚ್ಚಮಾಡುವುದರಿಂದ ಅದರಿಂದ ದೇಶಕ್ಕೇನೂ ಲಾಭವಾಗುವುದಿಲ್ಲ. ಅದು ಅಂಥಾ ಸರಿಯಾದ ಅರ್ಥನೀತಿಯೂ ಅಲ್ಲ, ಆಡಳಿತದಲ್ಲಿ ಅದು ಅಂಥಾ ಬಿಗಿಯಾದ ಆಡಳಿತವೂ ಅಲ್ಲ, ಇಂಥ ಮಾರ್ಗದಿಂದ ಹಣವ್ಯಯವೇ ವಿನಾ ಅನುಕೂಲವಿಲ್ಲ ಎಂದು ಹೇಳುತ್ತೇನೆ.

ಇವತ್ತು ಒಂದು ಉದಾಹರಣೆಯನ್ನು ಹೇಳಬಹುದು. ಕೃಷ್ಣಾ ಪ್ರಾಜೆಕ್ಟ್ ವಿಷಯ ತೆಗೆದುಕೊಳ್ಳೋಣ. ಇದನ್ನು ದಿವಂಗತ ಲಾಲ್ ಬಹದೂರ್ ಶಾಸ್ತ್ರಿಯವರು ಈ ಯೋಜನೆಯ ಶಂಕುಸ್ಥಾಪನೆಮಾಡಿ ನಾಲ್ಕೈದು ವರ್ಷಗಳಾದುವು. ಪ್ರತಿವರ್ಷವೂ ಈ ಯೋಜನೆಗಾಗಿ ನಾಲ್ಕೈದು

ಲಕ್ಷ ರೂಪಾಯಿಗಳನ್ನು ಇಡುತ್ತಾ ಇದ್ದೇವೆ. ಅದನ್ನು ಕಟ್ಟುವುದಕ್ಕೋಸ್ಕರ ಬೇಕಾದಷ್ಟು ಜನ ಸಿಬ್ಬಂದಿ ಅವಶ್ಯಕವಾಗಿದೆ. ಅಂಥಾದ್ದರಲ್ಲಿ ಈಗ ಬಡ್ಜೆಟ್ ಪ್ರಾವಿಷನ್ನಿನಲ್ಲಿ ಕೇವಲ 50 ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಅದು ಕೇವಲ 50 ಅಧಿಕಾರಗಳ ಪಗಾರಕ್ಕೇ ಆಗುತ್ತದೆ ಅದ ಕಾರಣ ನಮ್ಮಲ್ಲಿ ರೊಕ್ಕವಿಲ್ಲದಿದ್ದರೆ ಯಾವ ಸೋರ್ಸಿನಿಂದ ಮತ್ತು ಯಾವ ಬಾಗಿಲಿನಿಂದ ಹಣ ಬರುತ್ತದೆಯೋ ಅದನ್ನು ಕಂಡುಹಿಡಿಯುವುದಕ್ಕೆ ಆಗದಿದ್ದರೆ ಅವುಗಳನ್ನು ಕೊಂಚ ಕಾಲ ನಿಲ್ಲಿಸಿ. ರೊಕ್ಕ ಸರ್ಕಾರಕ್ಕೆ ಬಂದಮೇಲೆ ಬೇಕಾದರೆ ಅದನ್ನು ತೆಗೆದುಕೊಂಡು ಮಾಡೋಣ. ಅದನ್ನು ಬಿಟ್ಟು ಸುಮ್ಮನೆ ಅನ್ಯಾಯವಾಗಿ ಹಣವನ್ನು ವ್ಯಯ ಮಾಡುವುದನ್ನು ನಿಲ್ಲಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ಗ್ರಾಮದ ಜನಗಳಿಗೆ ಒಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಅದೇನೆಂದರೆ, ಭೂಕಂದಾಯವನ್ನು ತೆಗೆಯುತ್ತೇವೆಂದು ಸರ್ಕಾರದವರು ಹೇಳಿದರು ಎನ್ನುವ ಮಾತನ್ನು ವಿರೋಧ ಪಕ್ಷದವರು ಹೇಳಿದರು. ಇವತ್ತಿನ ದಿವಸ ಅದನ್ನು ತೆಗೆಯುವುದಿಲ್ಲವೆನ್ನುವ ಮಾತನ್ನು ಅರ್ಥ ಮಂತ್ರಿಗಳು ಹೇಳಿದರು. ಇದರಿಂದೇನು ತೋರಿಸುತ್ತದೆಂದು ಅಂದರೆ ಪ್ರಜಾರಾಜ್ಯದಲ್ಲಿ ಸರ್ಕಾರಕ್ಕೆ ಜನತೆಯ ಮನ್ನಣೆ ಇದೆ. ಅದಕ್ಕೆ ಎಷ್ಟು ನಾವು ಬದ್ಧರಾಗಿದ್ದೇವೆಂಬುದು ತೋರಿಸಿಕೊಡುತ್ತದೆ. ಪ್ರಜಾರಾಜ್ಯದಲ್ಲಿ ನಾವು ಏನು ಹೇಳಿದರೂ ಅದಕ್ಕೆ ಸರ್ಕಾರದವರು ವ್ಯತಿರಿಕ್ತವಾಗಿದ್ದರೆ ಎಂದು ಕಂಡರೆ ಅದನ್ನು ವಿಚಾರಮಾಡಿ ಕೇಳಬೇಕು. ಅರ್ಥಮಂತ್ರಿಗಳು ವಚನ ಭ್ರಷ್ಟರಾಗಿದ್ದಾರೆಂದು ನಾನು ತಿಳಿಯುವುದಿಲ್ಲ. ಇವತ್ತಿನ ದಿವಸ ಸಂಪ್ರದಾಯ ಏನಾಗಿದೆಯೆಂದರೆ, ಶ್ರೀಮಂತರು ಹೆಚ್ಚು ಶ್ರೀಮಂತರಾಗುತ್ತಲೇ ಇದ್ದಾರೆ, ಬಡವರು ಹೆಚ್ಚು ಬಡವರಾಗುತ್ತಲೇ ಇದ್ದಾರೆ. ಹಿಂದೆ ಒಂದು ಕ್ವಿಂಟಾಲ್ ಜೋಳಕ್ಕೆ 35-36 ರೂಪಾಯಿಗಳು ಇತ್ತು. ಈಗ 85-90 ರೂಪಾಯಿಗಳಿವೆ. ಆದರೂ ಗ್ರಾಮಾಂತರ ಪ್ರದೇಶದ ಜನಗಳ ಸಂಪತ್ತು ಬಹಳ ಹೆಚ್ಚಾಗಿದೆ ಎಂಬುದಾಗಿ ಕೆಲವರು ತಿಳಿದುಕೊಂಡಿದ್ದಾರೆ. ನಿಮಗೂ ಗೊತ್ತಿದೆ. ಅದು ಎಷ್ಟರಮಟ್ಟಿಗೆ ಇದೆಯೆಂಬುದು. ಕನಿಷ್ಠ ಪಕ್ಷ ಸೇಕಡ ನಾಲ್ಕೈದರಷ್ಟು ಗ್ರಾಮಾಂತರ ಜನರಲ್ಲಿ ಸಂಪತ್ತು ಆ ರೀತಿ ಇರಬಹುದು.

ಶ್ರೀ ಎಂ. ನಾಗಪ್ಪ (ರಾಯಚೂರು).—ಬಡವರು ಹೆಚ್ಚು ಬಡವರಾಗಲು, ಸಾಹುಕಾರರು ಹೆಚ್ಚು ಸಾಹುಕಾರರಾಗಲು ತಮ್ಮ ಒಂದು ಅನೀತಿ ಅಲ್ಲವೇ ಕಾರಣ ?

ಶ್ರೀ ಅಜೀಜ್ ಸೇಟ್ (ನರಸಿಂಹರಾಜ).—ನಾವು ಸುಮಾರು 15 ವರ್ಷಗಳಿಂದಲೂ ಹೇಳುತ್ತಲೇ ಇದ್ದೇವೆ. ನಿಮ್ಮ ಅರ್ಥನೀತಿ ಏನಿದೆಯೋ ಅದನ್ನು ಕೂಡಲೇ ಬದಲಾವಣೆಮಾಡಬೇಕು. ಶ್ರೀಮಂತರಲ್ಲಿ ಹಾಗೂ ಬಡವರಲ್ಲಿ ಇರುವ ಅಂತರವನ್ನು ಕಡಿಮೆ ಮಾಡಬೇಕು. ಇಲ್ಲದೇ ಹೋದರೆ ಸಮಾಜ ದ್ರೋಹಮಾಡಿದಂತಾಗುತ್ತದೆ. ಲ್ಯಾಂಡ್ ರೆವಿನ್ಯೂ ಮೇಲೆ ತೆರಿಗೆಯನ್ನು ಹಾಕಬೇಕು ಅಥವಾ ಹಾಕಬಾರದು ಎಂಬುದನ್ನು ಖಚಿತವಾಗಿ ಹೇಳಬೇಕು. ಏಕೆಂದರೆ, ಈಗ ಆರ್ಥಿಕ ಪರಿಸ್ಥಿತಿ ಮೊದಲಿಗಿಂತಲೂ ಬಹಳ ಉಲ್ಬಣವಾಗಿದೆ. ಅವರಿಗೆ ಹೆಚ್ಚಿಗೆ ಕಂದಾಯ ಕೊಡುವ ಯೋಗ್ಯತೆ ಇದೆಯೋ ಎಂಬುದನ್ನು ನೋಡಬೇಕು. ಹೆಚ್ಚಿನ ಆದಾಯವಿರುವವರಿಗೆ ವ್ಯವಸಾಯ ಆದಾಯ ತೆರಿಗೆ ಹಾಕಿ, ಆದಾಯವಿಲ್ಲದೇ ಹೋದರೆ ಅವರ ಮೇಲೆ ಹಾಕಿದರೆ ಏನಾಗುತ್ತದೆ ? ಅದನ್ನು ಯೋಚಿಸಬೇಕು. ಇದರಲ್ಲಿ ರಾಜಕೀಯ ಬೇಡ.

ಶ್ರೀ ಎಸ್. ಎಂ. ಗುರೆಡ್ಡಿ.—ಇನ್ನು ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬೇಕು, ರಸ್ತೆಗಳನ್ನು ಮಾಡಬೇಕು. ಇಷ್ಟೆಲ್ಲಾ ಸರ್ಕಾರ ಒದಗಿಸುವಾಗ ರೈತರು ಸರ್ಕಾರಕ್ಕೆ ಕಂದಾಯವನ್ನು ವ್ಯವಸಾಯ ವರಮಾನ ತೆರಿಗೆಯನ್ನು ಸಲ್ಲಿಸುವುದರಲ್ಲಿ ಏನು ತಪ್ಪು ? ಆದಕಾರಣ ಸರ್ಕಾರದವರು ಹಿಂದೆ ಏನು ವಾಗ್ದಾನ ಮಾಡಿದ್ದರೋ ಅದರಂತೆಯೇ ನಡೆಯಬೇಕು, ಆಗ ಹೇಳಿದಂತೆ ಈಗ ಅದನ್ನು ತೆಗೆದುಹಾಕಬೇಕೆಂದು ಮಾನ್ಯ ಸದಸ್ಯರು ಹಠಮಾಡಬಾರದು. ಈಗ ಆ ರೀತಿಯಾಗಿ ವ್ಯವಸಾಯ ವರಮಾನ ತೆರಿಗೆಯನ್ನು ಪ್ರೊಪೋಜ್ ಮಾಡಿದರೆ ಹಳ್ಳಿಗಾಡಿನ ಜನರಿಗೆ ತೊಂದರೆಯಾಗುತ್ತದೆಂಬುದು ನಿಜ. ಏಕೆಂದರೆ ಮೊದಲಿನಿಂದಲೂ ರೈತರಲ್ಲಿ ಲೆಕ್ಕವನ್ನು ಇಡುವ ಪದ್ಧತಿ ಇರಲಿಲ್ಲ.

ಶ್ರೀ ಅಜೀಜ್ ಸೇಟ್.—ಲ್ಯಾಂಡ್ ರೆವಿನ್ಯೂ ರದ್ದು ಮಾಡಬೇಕು. ಹಾಗಿಲ್ಲದೆ ಬೇರೆ ರೀತಿ ತೆರಿಗೆ ಹಾಕುವ ವ್ಯವಸ್ಥೆ ಮಾಡಬಾರದು. ಇದನ್ನು ಇಲ್ಲಿ ಸ್ಪಷ್ಟವಾಗಿ ಹೇಳಬೇಕು.

ಶ್ರೀ ಎಸ್. ಎಂ. ಗುರೆಡ್ಡಿ.—ಲ್ಯಾಂಡ್ ರೆವಿನ್ಯೂ ತೆಗೆಯತಕ್ಕದ್ದು ಇಲ್ಲವೆಂಬುದು ಸ್ಪಷ್ಟ. ತೆರಿಗೆಯನ್ನು ಕೇಳಲಿಕ್ಕೆ ಕೊಡಲಿಕ್ಕೆ ಹೆದರಬಾರದು. ಅನುಕೂಲ ಕೇಳುವಂಥ ಸಾಮರ್ಥ್ಯ ಇರುವಾಗ ಕೊಡುವ ಸಾಮರ್ಥ್ಯವನ್ನೂ ಪಡೆಯಬೇಕು. ಸರ್ಕಾರಕ್ಕೆ ಅದನ್ನು ಮಾಡಿ, ಇದನ್ನು ಮಾಡಿ ಎಂದು ಹೇಳುವಾಗ ತೆರಿಗೆಯನ್ನು ಸರ್ಕಾರಕ್ಕೆ ಕೊಡಬೇಡಿ ಎಂದು ಹೇಳುವ ಮಾತು ಸರಿಯಲ್ಲ.

ಶ್ರೀ ಅಜೀಜ್ ಸೇಟ್.—ಇವತ್ತಿನವರೆಗೂ ರೈತರಿಗೆ ಏನೇನು ಅನುಕೂಲಗಳನ್ನು ಮಾಡಿ ಕೊಟ್ಟಿದ್ದೀರಿ ಎಂಬ ಬಗ್ಗೆ ಪಟ್ಟಿ ಹೇಳಿ, ನೋಡೋಣ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರ ವೇಳೆ ಆಗುತ್ತಾ ಬಂತು. ಅವರಿಗೆ ಮಾತನಾಡಲು ಮುಂದೆ ಅವಕಾಶ ಕೊಡುತ್ತೇನೆ.

ಶ್ರೀ ಎಸ್. ಎಂ. ಗುರೆಡ್ಡಿ.—ರೈತರಿಗೆ ಏನೇನು ಅನುಕೂಲಗಳನ್ನು ಮಾಡಿದೆ ಎಂಬುದನ್ನು ಅರ್ಥಮಂತ್ರಿಗಳು ಸ್ಪಷ್ಟವಾಗಿ ಹೇಳಿದ್ದಾರೆ. ಇದೇನು ಮುಚ್ಚಿಟ್ಟುಕೊಳ್ಳುವಂಥ ಮತ್ತು ಯಾರಿಗೂ ಮೋಸ ಮಾಡುವಂಥ ಬಡ್ಜೆಟ್ ಅಲ್ಲ. ಇವತ್ತಿನದಿವಸ ನಾವು ಇಲ್ಲಿರಬಹುದು, ನಾಳೆ ನೀವೂ ಇಲ್ಲಿಗೆ ಬರಬಹುದು. ರಾಜ್ಯಾಡಳಿತವನ್ನು ಚೆನ್ನಾಗಿ ನಡೆಸಿಕೊಂಡು ಹೋಗುವ ಪರಿಸ್ಥಿತಿ ಈಗ ಬೇಕಾಗಿದೆ. ಅದಕ್ಕಾಗಿ ರಾಜ್ಯದ ಆರ್ಥಿಕ ಪರಿಸ್ಥಿತಿ ಕಡೆ ಹೆಚ್ಚಿನ ಗಮನವನ್ನು ಎಲ್ಲರೂ ಕೊಡಬೇಕು. ಯಾವ ವಿಧವಾದಂಥ ಕ್ಷುಲ್ಲಕ ಕಾರಣಗಳಿಗೆ ಯಾರೂ ಗಮನ ಕೊಡಬಾರದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ವಿಟ್ಠಲ್‌ದಾಸ್ ಶೆಟ್ಟಿ (ಪುತ್ತೂರ್).—ಮಾನ್ಯ ಸಭಾಪತಿಗಳೇ, ಈ ರಾಜ್ಯದ ದ್ರವ್ಯಶಾಖಾಸಚಿವರು ಈ ಸಭೆಯಲ್ಲಿ ಮಂಡಿಸಿದ ಆಯವ್ಯಯ ಪಟ್ಟಿಯನ್ನು ನಾನು ಸ್ವಾಗತಿಸಿ ನಾಲ್ಕು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ವಿರೋಧಪಕ್ಷದ ಸದಸ್ಯರ ಪೈಕಿ ಇಬ್ಬರು ಅಥವಾ ಮೂವರು ಸದಸ್ಯರು ಬಹಳ ಹೊತ್ತು ಮಾತನಾಡಿದರು. ನಾನು ಆಲೋಚನೆ ಮಾಡಿದೆ, ಕೆಳದರ್ಜೆ ನೌಕರರಿಗೆ ಹೆಚ್ಚಿನ ತುಟ್ಟಿಭತ್ಯ ಕೊಟ್ಟಿದ್ದಕ್ಕೆ ಅವರ ಪೈಕಿ ಯಾರಾದರೂ ಬಹಳ ಸಂತೋಷದಿಂದ ಸ್ವಾಗತ ಮಾಡುತ್ತಾರೆಯೋ ಏನೋ ಎಂದು, ಆದರೆ ಆ ರೀತಿಯಾಗಿ ಯಾರೂ ಮಾಡಲಿಲ್ಲ. ಅದನ್ನು ನಿಜವಾಗಿ ಸ್ವಾಗತಮಾಡಬೇಕಾಗಿತ್ತು. ವಿರೋಧಪಕ್ಷದ ನಾಯಕರೂ ಸಹ ಅದರ ಬಗ್ಗೆ ಸ್ವಾಗತ ಮಾಡಲಿಲ್ಲ.

ಶ್ರೀ ಬಿ. ಪಿ. ಗಂಗಾಧರ್ (ತುಮಕೂರು).—ಆ ವಿಚಾರವಾಗಿ ಮಾನ್ಯ ಶ್ರೀ ಕದಂ ಅವರು ಮಾತನಾಡಿದ್ದಾರೆ.

ಶ್ರೀ ಬಿ. ವಿಟ್ಠಲ್‌ದಾಸ್ ಶೆಟ್ಟಿ.—ಹಾಗಿದ್ದರೆ ನಮಗೂ ಮತ್ತು ನಿಮಗೂ ಸಂತೋಷ.

ಪ್ರಜಾಪ್ರಭುತ್ವದ ವಿಷಯದಲ್ಲಿ ವಿರೋಧ ಪಕ್ಷದ ನಾಯಕರು ಬಹಳ ಚೆನ್ನಾಗಿ ಉಪನ್ಯಾಸ ಮಾಡುತ್ತಿದ್ದಾರೆ. ಯಾರಾದರೂ ಸದಸ್ಯರಾಗಲಿ ಈ ಮನೆಯಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಡದಿದ್ದರೆ ಅವರು ಇನ್ನು ಎಲ್ಲಿ ಮಾತನಾಡಬೇಕು ? ಬರೀ ಬೊಬ್ಬೆ ಹಾಕುವುದೇ ಇವರ ಕಾರ್ಯಕ್ರಮ ಆಗಿದ್ದರೆ ನಾವೂ ಆ ರೀತಿ ಮಾಡಬಹುದು ನೋಡೋಣ. ನಾವೂ ಒಂದು ಹತ್ತು ಜನ ಕೂಡಿಕೊಂಡು ವಿರೋಧಪಕ್ಷದವರು ಮಾತನಾಡುವುದಕ್ಕೆ ಆಗದ ಹಾಗೆ ಮಾಡಿ ಅವರು ಕುಳಿತುಕೊಳ್ಳುವ ಹಾಗೆ ಮಾಡುತ್ತೇವೆ. ಆದರೆ ನಾವು ಅದಕ್ಕಾಗಿ ಇಲ್ಲಿ ಬಂದಿಲ್ಲ. ವಿರೋಧಪಕ್ಷದವರು ಏನಾದರೂ ಅದಕ್ಕಾಗಿ ಬಂದಿದ್ದಾರೆಯೋ ಏನೋ ಎಂಬ ಸಂಶಯ ನನಗೆ ಬರುತ್ತಿದೆ. ಜನತೆ ನಮ್ಮನ್ನು ಆರಿಸಿ ಇಲ್ಲಿಗೆ ಕಳುಹಿಸಿರುತ್ತಾರೆ. ವಿರೋಧಪಕ್ಷದವರಲ್ಲಿ, ನಮ್ಮಲ್ಲಿ ಯಾರಾದರೂ ಒಬ್ಬರು ಮಾತನಾಡಿದ್ದನ್ನು ಕೇಳುವುದಕ್ಕೆ ಸೌಜನ್ಯ ಇಲ್ಲವಲ್ಲ ಎಂದು ನಾನು ಬಹಳವಾಗಿ ದುಃಖ ಪಡಬೇಕಾಗಿದೆ. ಆಡಳಿತವರ್ಗದವರನ್ನು ನೋಡಿ ದುಃಖಪಡಬೇಡಿ. ಮಾನ್ಯ ಸದಸ್ಯರಲ್ಲಿ ಅನೇಕ ಜನರು ಕೆಳದರ್ಜೆ ನೌಕರರ ವಿಷಯವಾಗಿ ಬಹಳ ದುಃಖಪಟ್ಟು ಮಾತನಾಡಿದ್ದಾರೆ. ಆದರೆ ಅವರಿಗೆ ಹೆಚ್ಚುವರಿ ತುಟ್ಟಿಭತ್ಯ ಕೊಟ್ಟಿರುವ ಬಗ್ಗೆ ವಿರೋಧ ಪಕ್ಷದ ಮುಖಂಡರು ಏನೂ ಹೇಳಲಿಲ್ಲ.

ಶ್ರೀ ಬಿ. ಪಿ. ಗಂಗಾಧರ್.—ಆಹಾರ ಪದಾರ್ಥಗಳ ಬೆಲೆ ಜಾಸ್ತಿಯಾಗುತ್ತಿರುವುದನ್ನು ಗಮನಿಸಿದ್ದೀರಾ ?

ಶ್ರೀ ಬಿ. ವಿಟ್ಠಲ್‌ದಾಸ್ ಶೆಟ್ಟಿ.—ಸರ್ಕಾರ ಯಾವುದಾದರೂ ಒಳ್ಳೆಯದನ್ನು ಮಾಡಿದ್ದರೆ ಒಳ್ಳೆಯದು ಎಂದು ಹೇಳಿ.

ಶ್ರೀ ಎಂ. ನಾಗಪ್ಪ.—ಮಾನ್ಯ ಶ್ರೀ ಕದಂ ಅವರು ಆ ವಿಷಯವಾಗಿ ಮಾತನಾಡಿದ್ದಾರೆಂದು ನನ್ನ ಮಾನ್ಯ ಸ್ನೇಹಿತರು ಹೇಳಿದರೂ ಅದನ್ನು ಅವರು ಗಣನೆಗೆ ಇನ್ನೂ ತೆಗೆದುಕೊಳ್ಳದೇ ಇರುವುದು ಸರಿಯಲ್ಲ. ಸರ್ಕಾರದ ನೌಕರರಿಗೆ ಹೆಚ್ಚಿನ ತುಟ್ಟಿಭತ್ಯವನ್ನು ಜನವರಿಯಿಂದ ಲೆಕ್ಕಕ್ಕೆ ತೆಗೆದುಕೊಳ್ಳಬೇಕೆಂದು ಕೆಲವರು ಹೇಳಿದ್ದಾರೆ. ಅಂದಮೇಲೆ ಯಾರೂ ಈ ವಿಚಾರವಾಗಿ ಪ್ರಸ್ತಾಪ ಮಾಡಲಿಲ್ಲವೆಂದು ಮಾನ್ಯ ಸದಸ್ಯರು ಆರೋಪ ಮಾಡುವುದು ಸರಿಯಲ್ಲ. ಅದನ್ನು ತಮ್ಮ ಮತ್ತು ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ.

(ಮಾನ್ಯ ಶ್ರೀ ಅಜೀಜ್ ಸೇಟ್ ಅವರು ಶ್ರೀ ಬಿ. ವಿಟ್ಠಲ್‌ದಾಸ್ ಶೆಟ್ಟಿ ಅವರ ಹತ್ತಿರ ಬಂದು ಕುಳಿತರು).

ಶ್ರೀ ಬಿ. ವಿಟ್ಠಲ್‌ದಾಸ್ ಶೆಟ್ಟಿ.—ವಿರೋಧಪಕ್ಷದ ಸದಸ್ಯರು ತಾವಾಗಿಯೇ ಬಹಳ ಧೈರ್ಯವಾಗಿ ಬಂದು ನನ್ನ ಹತ್ತಿರ ಕುಳಿತಿದ್ದಾರೆ. ಅವರಿಗೆ ಯಾರೂ ಆ ರೀತಿ ಮಾಡಬೇಕೆಂದು ಹೇಳಲಿಲ್ಲ. ಈ ಪ್ರಜಾಪ್ರಭುತ್ವದಲ್ಲಿ ನನ್ನ ಹತ್ತಿರ ಬಂದು ಕುಳಿತುಕೊಂಡು ಮಾನ್ಯ ಶ್ರೀ ಸೇಟ್ ಅವರು ನಾನು ಮಾತನಾಡುವಾಗ ಅಡಚಣೆ ಮಾಡುತ್ತಿದ್ದಾರೆ.

ಶ್ರೀ ಅಜೀಜ್ ಸೇಟ್.—ಮಾನ್ಯ ಸದಸ್ಯರು ಸೇಟ್ ಅವರು ಎಂದು ಹೇಳಿದರು. ಅಜೀಜ್ ಸೇಟ್ ಎಂಬ ಹೆಸರಿನವನು ಈ ಸಭೆಯಲ್ಲಿ ನಾನೊಬ್ಬನೇ, ಬೇರೆ ಯಾರೂ ಇಲ್ಲ.

ಶ್ರೀ ಬಿ. ವಿಟ್ಠಲದಾಸಶೆಟ್ಟಿ.—ಭೂಕಂದಾಯವನ್ನು ವಜಾಮಾಡಬೇಕೆಂದು ಹೇಳಿದರೆ ಅದರಿಂದ 7—8 ಕೋಟಿ ರೂಪಾಯಿಗಳ ನಷ್ಟವಾಗುತ್ತದೆ. ಈ ನಷ್ಟವನ್ನು ಭರ್ತಿಮಾಡುವುದಕ್ಕೆ ಕೃಷಿಕರಿಗೆ ಯಾವರೀತಿಯ ತೆರಿಗೆಯನ್ನೂ ಹಾಕಬಾರದು ಎಂದು ನಾನು ಹೇಳುತ್ತೇನೆ. ಕೃಷಿಕನಿಗೆ ಬೇರೆ ರೀತಿಯ ತೆರಿಗೆಯನ್ನು ಹಾಕಿದರೆ ಒಂದು ದೊಡ್ಡ ಗಂಡಾಂತರ ಬಂದು ಅವರಿಗೆ ತೊಂದರೆಯನ್ನು ಕೊಟ್ಟಹಾಗಾಗುತ್ತದೆ ಎಂದು ನನ್ನ ಅಭಿಪ್ರಾಯ. ಈಗಾಗಲೇ ಸರ್ಕಾರಿ ಅಧಿಕಾರಿಗಳು, ನೌಕರರು ಗ್ರಾಮಾಂತರ ಪ್ರದೇಶಗಳಲ್ಲಿರುವಂತಹ ಎಲ್ಲಾ ಜನಗಳಿಗೂ ಯಾವ ಯಾವ ರೀತಿಯಲ್ಲಿ ತೊಂದರೆಗಳನ್ನು ಕೊಡುತ್ತಿದ್ದಾರೆ ಎಂಬುದು ನಮಗೆಲ್ಲರಿಗೂ ಗೊತ್ತಿದೆ. ಬೇರೆ ನಮೂನೆಯ ತೆರಿಗೆಯನ್ನು ಹಾಕಿದರೆ ಭೂಕಂದಾಯಕ್ಕಿಂತ ದ್ವಿಗುಣವಾಗುತ್ತದೆ. ಮೂರರಷ್ಟೂ ಆಗುತ್ತದೆ. ಈ ರೀತಿ ಬೇರೆ ನಮೂನೆಯ ತೆರಿಗೆಯನ್ನು ಹಾಕಿದರೆ ನಾನಾ ನಮೂನೆಯ ನೌಕರರು ನಾನಾ ನಮೂನೆಯ ಕ್ರಮವನ್ನು ಕೈಗೊಂಡು ಜನಗಳಿಗೆ ತೊಂದರೆಯಾಗುತ್ತದೆ. ನಮ್ಮೆಲ್ಲರ ಅಭಿಪ್ರಾಯಗಳನ್ನೂ ಮಾನ್ಯ ಹಣಕಾಸಿನ ಮಂತ್ರಿಗಳು ಮನಗಂಡು ಈ ಭೂ ಕಂದಾಯವನ್ನು ರದ್ದುಮಾಡುವ ಪ್ರಕಟಣೆಯನ್ನು ಒಂದು ರೀತಿ ತಡಮಾಡಿ ಮುಂದೆ ಇದನ್ನು ಆಲೋಚನೆ ಮಾಡೋಣ ಎಂದು ಹಿಂದೆ ಇಟ್ಟುಕೊಂಡಿದ್ದಾರೆ.

4-00 P.M.

ಇನ್ನು ಪಾನನಿರೋಧದ ವಿಚಾರದಲ್ಲಿ ಒಂದೆರಡು ಸೂಚನೆಗಳನ್ನು ಸರ್ಕಾರಕ್ಕೆ ಕೊಡಲಿಕ್ಕೆ ನಾನು ಇಚ್ಛಿಸುತ್ತೇನೆ. ಪಾನನಿರೋಧದಲ್ಲಿ ಈಗ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಚ್ಚು ಉತ್ಪತ್ತಿ ಬರುತ್ತದೆ. ಬೆಂಗಳೂರನ್ನು ಬಿಟ್ಟರೆ ಪಾನನಿರೋಧದಲ್ಲಿ ಹೆಚ್ಚು ಉತ್ಪತ್ತಿ ಬರುವುದು ದಕ್ಷಿಣ ಕನ್ನಡ ಜಿಲ್ಲೆ ಒಂದರಲ್ಲಿ ಮಾತ್ರ ಎಂದು ಹೇಳಬಹುದು.

ಶ್ರೀ ಬಿ. ಭಾಸ್ಕರಶೆಟ್ಟಿ (ಕಾಪು).—ಆದಾಯ ಬರುತ್ತಿರುವುದು ಪಾನನಿರೋಧದಿಂದಲ್ಲ, ಪಾನನಿರೋಧವನ್ನು ತೆಗೆಯುವುದರಿಂದ.

ಶ್ರೀ ಬಿ. ವಿಟ್ಠಲದಾಸಶೆಟ್ಟಿ.—ಕ್ಷಮಿಸಿ, ಪಾನನಿರೋಧವನ್ನು ತೆಗೆಯುವುದರಿಂದ ಹೆಚ್ಚು ಉತ್ಪತ್ತಿ ಬರುತ್ತದೆ ಎಂದು ಸರಿಪಡಿಸಿಕೊಳ್ಳುತ್ತೇನೆ. ಕೆಲವು ಸಾರಾಯಿ ಅಂಗಡಿಗಳನ್ನು 18 ತಿಂಗಳತನಕ ಹರಾಜು ಮಾಡಿದ್ದಾರೆ. ಅದನ್ನು 6 ತಿಂಗಳಿಗೆ, ಒಂದು ವರ್ಷಕ್ಕೆ ಒಂದು ಸಾರಿ ಹರಾಜು ಮಾಡಿದರೆ ಅದರಿಂದ ಹೆಚ್ಚು ಹೆಚ್ಚು ಉತ್ಪತ್ತಿ ಬರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾರಾಯಿ ಸರಿಯಾಗಿ ಸಿಕ್ಕುವುದಿಲ್ಲ. ಆದ್ದರಿಂದ ಸರ್ಕಾರದವರು ಅದನ್ನು ದಯವಿಟ್ಟು ಗಮನಿಸಿ ನಿಗಾ ತೆಗೆದುಕೊಂಡು ಹರಾಜು ಮಾಡಿದವರ ಅಂಗಡಿಗಳಿಗೆ ಸಾರಾಯನ್ನು ಸಪ್ಲೈ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ಈಗ ಕೆಲವು ಅಂಗಡಿಗಳವರು ಅಲ್ಲಲ್ಲೇ ಕಳ್ಳಭಟ್ಟಿ ಸಾರಾಯನ್ನು ತಯಾರು ಮಾಡಿ ಮಾರುತ್ತಿದ್ದಾರೆ. ಅದನ್ನು ನಿಲ್ಲಿಸಿ ಆ ಅಂಗಡಿಗಳಿಗೆ ಸರಿಯಾದ ಸಾರಾಯನ್ನು ಸಪ್ಲೈ ಮಾಡಬೇಕು. ಇಲ್ಲದೇ ಇದ್ದರೆ ಆ ಅಂಗಡಿಗಳನ್ನು ಬಂದ್ ಮಾಡುವುದು ಒಳ್ಳೆಯದು.

ಆಮೇಲೆ ಶ್ರೀಮಾನ್ ಭಾಸ್ಕರಶೆಟ್ಟರು ಪುತ್ತೂರು ವಿಷಯವನ್ನು ಹೇಳಿದ್ದಾರೆ. ಅವರು ನಿಜಸ್ಥಿತಿಯನ್ನು ಹೇಳಲಿಲ್ಲ. ಪುತ್ತೂರಿನ ಯಾರೋ ಒಬ್ಬರು ಕಾಂಗ್ರೆಸ್ ಮುಖಂಡರು ಅಲ್ಪಸಂಖ್ಯಾತರಜಾತಿಗೆ ಸೇರಿದವರು ಎಂದರೆ ಮುಸ್ಲಿಮ್ ಜನಾಂಗಕ್ಕೆ ಸೇರಿದವರು ಅವರು ಕಾಂಗ್ರೆಸ್ಸಿನಲ್ಲಿ ಕೆಲಸ ಮಾಡುತ್ತಿದ್ದಾರೆ ಎನ್ನುವ ಉದ್ದೇಶದಿಂದ ವಿರೋಧ ಪಕ್ಷದವರು, ಜನಸಂಘದವರು ಒಂದು ದೊಡ್ಡ ಸಭೆ ಸೇರಿಸಿ ಮಾತನಾಡಿ ಅವರ ಮನೆಗೆ ಕಲ್ಲು ಹೊಡೆದಂತಹ ಒಂದು ಘಟನೆಯನ್ನು ಹೇಳಿದ್ದಾರೆ. ಶ್ರೀಮಾನ್ ಭಾಸ್ಕರ ಶೆಟ್ಟರು ವಿಚಿತ್ರವಾದ ರೀತಿಯಲ್ಲಿ ಒಂದು ಬಣ್ಣ ಹಚ್ಚಿ ಹೇಳಿದ್ದಾರೆ.

ಶ್ರೀ ಎಸ್. ಎಸ್. ಶೆಟ್ಟರ್ (ಹುಬ್ಬಳ್ಳಿ).—ಸ್ವಾಮಿ, ಇದಕ್ಕೆ ಏನಾದರೂ ಆಧಾರ ಇದೆಯೋ, ಇದು ಇನ್‌ವೆಸ್ಟಿಗೇಷನ್ ಆಗಿದೆಯೋ, ಇದರ ಬಗ್ಗೆ ಯಾರು ಕೇಸು ಹಾಕಿದ್ದಾರೆ ?

ಶ್ರೀ ಬಿ. ವಿಟ್ಠಲದಾಸಶೆಟ್ಟಿ.—ಈ ವಿಚಾರ ಮಂಗಳೂರಿನ ನವಭಾರತ ಪತ್ರಿಕೆಯಲ್ಲಿ ಬಂದಿದೆ......

Sri S. S. SHETTAR.—Point of order Sir. He cannot read the paper in the House.

ಶ್ರೀ ಬಿ. ವಿಠ್ಠಲದಾಸಶೆಟ್ಟಿ.—40 ವರ್ಷಗಳಿಗಿಂತ ಮೇಲ್ಪಟ್ಟು ಇದ್ದಂತಹ ಒಂದು ಮನೆಯನ್ನು ಒಬ್ಬರು ಮುಸಲ್ಮಾನರು ಹಿಂದೆಯೇ ತೆಗೆದುಕೊಂಡಿದ್ದಾರೆ......

Sri S. S. SHETTAR.—Have you filed any complaint in that ? Was there any investigation to that effect ? You are accusing a party. Is there any pending case to that effect ?

ಶ್ರೀ ಬಿ. ಭಾಸ್ಕರಶೆಟ್ಟಿ.—ಈಗ ಮಾನ್ಯ ಸದಸ್ಯರು ಮಾತನಾಡುತ್ತಿರುವುದು ಪುತ್ತೂರಿನ ಶಾಲೆಯೊಂದರ ಆವರಣದಲ್ಲಿ ಅಲ್ಲಿನ ಕಾಂಗ್ರೆಸ್ ಪ್ರಮುಖರೊಬ್ಬರು ಒತ್ತುವರಿ ಮಾಡಿರುವುದಕ್ಕೆ ಸಂಬಂಧಪಟ್ಟ ವಿಚಾರ. ಆ ಪ್ರಮುಖರು ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದವರು. ಆದ್ದರಿಂದ ಮಾನ್ಯ ಸದಸ್ಯರು ತಮ್ಮ ಭಾಷಣದಲ್ಲಿ ಜಾತೀಯತೆಯನ್ನು ತಂದಿದ್ದಾರೆ. ಮತ್ತು ಜನಸಂಘದವರನ್ನೂ ಆರೋಪಿಸಿದ್ದಾರೆ. ನಾನು ಅದಕ್ಕೆ ಬಣ್ಣ ಕಟ್ಟಿ ಹೇಳಿದ್ದೇನೆಂದು ಮಾನ್ಯ ಸದಸ್ಯರು ಹೇಳಿದರು. ಈ ರೀತಿ ಅವರು ಹೇಳುತ್ತಿರುವುದು ಇನ್ನೂ ಹೆಚ್ಚಿನ ಗಲಭೆಗೆ ಅವಕಾಶ ನೀಡುವುದು.

Mr. DEPUTY SPEAKER.—Whatever the member has to speak he can speak afterwards. He will get the chance.

Sri B. VITTALDAS SHETTY.—He has made an allegation on the floor of the House.

Mr. DEPUTY SPEAKER.—We are having general discussion on the budget. This matter has nothing to do with the Budget discussion.

Sri B. VITTALDAS SHETTY.—He has no right to say that.

Mr. DEPUTY SPEAKER.—Let him proceed further and drop that point.

Sri S. S. SHETTAR.—This is a private case. How can you allow it to be discussed on the floor of the House. He can refer it to the Civil Court. If the matter is pending before the Civil Court, how can we discuss it here ?

Mr. DEPUTY SPEAKER.—It is in no way concerned with the General discussion on the Budget.

Sri B. VITTALDAS SHETTY.—I am just telling you that he is not allowing me to speak. ಅದು ಪೋಲೀಸ್ ಇಲಾಖೆಗೆ ಸಂಬಂಧಪಟ್ಟ ವಿಚಾರದಲ್ಲಿ ಬರುತ್ತದೆ. ನನಗೆ ಮಾತನಾಡುವುದಕ್ಕೆ ಅವಕಾಶ ಸಿಕ್ಕುವುದಿಲ್ಲ. ಮಾನ್ಯ ಸದಸ್ಯರಾದ ಶ್ರೀ ಭಾಸ್ಕರ ಶೆಟ್ಟರು ಒಂದು ಅಪಾದನೆಯನ್ನು ಮಾಡಿದ್ದಾರೆ. ಅದಕ್ಕೆ ನಾನು ಉತ್ತರವನ್ನು ಕೊಡುತ್ತೇನೆ. ದಯವಿಟ್ಟು ನಾನು ಹೇಳುವುದನ್ನು ಕೇಳಿ ಮಾತನಾಡುವುದಕ್ಕೆ ಅವಕಾಶ ಕೊಡದೆ ಬೊಬ್ಬೆ ಹಾಕಿದರೆ ಹೇಗೆ ?

ಈ ಪಕ್ಷದವರು ಮಾತನಾಡುವಾಗ ಎದುರು ಪಕ್ಷದವರು ಬೊಬ್ಬೆ ಹಾಕಿ ಈ ಮನೆಯ ಗೌರವವನ್ನು ಹಾಳುಮಾಡುವುದು ಸರಿಯೇ ಎಂಬುದನ್ನು ತಾವುಗಳು ಯೋಚನೆ ಮಾಡಬೇಕು. ಸರಿಯೆನ್ನುವುದಾದರೆ ಅದೂ ಸಹ ಆಗಬಹುದು.

ಶ್ರೀ ಎಸ್. ಎಸ್. ಶೆಟ್ಟರ್.—ಬೊಬ್ಬೆ ಹಾಕುವುದು ಎಂದು ಮಾನ್ಯ ಸದಸ್ಯರು ಹೇಳುತ್ತಿರುವುದು ಸರಿಯಲ್ಲ. ಅದು ಅನ್‌ಪಾರ್ಲಿಮೆಂಟರಿಯಾಗುತ್ತದೆ. ಮತ್ತು ನಮ್ಮ ಮನಸ್ಸಿಗೆ ನೋವಾಗುತ್ತದೆ. ಬೊಬ್ಬೆ ಎನ್ನುವ ಪದದ ಅರ್ಥವಾದರೂ ಏನು ?

ಶ್ರೀ ಬಿ. ವಿಠಲ್‌ದಾಸ ಶೆಟ್ಟಿ.—ಈ ಮನೆಯ ಪ್ರತಿಯೊಬ್ಬ ಸದಸ್ಯನಿಗೂ ಮಾತನಾಡುವ ಹಕ್ಕು ಇದೆಯೆಂದು ನಾನು ತಿಳಿದುಕೊಂಡಿದ್ದೇನೆ. ಒಬ್ಬ ಸದಸ್ಯರು ಮಾತನಾಡುವಾಗ ಮತ್ತೊಬ್ಬ ಸದಸ್ಯರು ವಿರೋಧ ಬರುವಂತಹ ಮಾತನಾಡುವುದನ್ನು ದಯವಿಟ್ಟು ನಿಲ್ಲಿಸಬೇಕು. ಈ ರೀತಿಯ ವರ್ತನೆ ಸುಮಾರು ಕಾಲದಿಂದ ನಡೆಯುತ್ತಿದೆ. ವಿರೋಧ ಪಕ್ಷದ ಸದಸ್ಯರುಗಳು ಮಾತನಾಡುವಾಗ ನಾವು ಸಮಾಧಾನದಿಂದ ಇರುತ್ತೇವೆ.

ಶ್ರೀ ಎಸ್. ಎಸ್. ಶೆಟ್ಟರ್.—ಬೊಬ್ಬೆ ಹಾಕುವುದು ಎಂದು ಮಾತ್ರ ಹೇಳಬೇಡಿ.

ಶ್ರೀ ಬಿ. ವಿಠಲ್‌ದಾಸ ಶೆಟ್ಟಿ.—ಇದನ್ನು ಏತಕ್ಕೆ ಹೇಳಿದೆ ಎಂದರೆ, ನಾನು ಮಾತನಾಡುವ ವಿಷಯಕ್ಕೂ ಬಡ್ಜೆಟ್‌ಗೂ ಏನೂ ಸಂಬಂಧವಿಲ್ಲವೆಂದು ತಾವು ಹೇಳಿದಿರಿ. ಅಲ್ಪಸಂಖ್ಯಾತರ ಜೀವನವನ್ನು ಸಂರಕ್ಷಿಸಬೇಕಾದರೆ ನೂರು ಪೋಲೀಸ್ ವ್ಯಾನ್‌ಗಳು ಬಂದು ರಕ್ಷಣೆ ಕೊಡಬೇಕಾಯಿತು. ಮಂಗಳೂರಿಗೆ 12 ಮೈಲಿ ದೂರದಲ್ಲಿರುವ ವಿಠಲದಲ್ಲಿ ಜಾತಿಯ ಗಲಭೆಗೆ ಇದರಿಂದ ಕಾರಣವಾಯಿತು.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಅಲ್ಪಸಂಖ್ಯಾತರೇ ರಕ್ಷಣೆ ಕೇಳಿದ್ದರೆಂದು ಪತ್ರಿಕೆಯಲ್ಲಿ ವರದಿಯಾಗಿದೆ.

ಶ್ರೀ ಬಿ. ವಿಠಲ್‌ದಾಸ ಶೆಟ್ಟಿ.—ನಮ್ಮ ಕಡೆಯ ದೈನಂದಿನ ಪತ್ರಿಕೆಯಾದ ನವಭಾರತದಲ್ಲಿ ಈ ವಿಚಾರವನ್ನು ಪ್ರಕಟ ಮಾಡಿದ್ದಾರೆ. ಮಾನ್ಯ ಸದಸ್ಯರು ಹೇಳುತ್ತಿರುವುದು ಸರಿಯಲ್ಲ.

Sri D. M. SIDDAIAH (Biligere).—May I request our friend in the Opposition kindly to allow our Members to speak? We will hear them with rapt attention.

Mr. DEPUTY SPEAKER.—Afterwards the Hon'ble Member can contradict.

ಶ್ರೀ ಅಜೀಜ್‌ಸೇಠ್.—ಸ್ವಾಮಿ, ಒಂದು ವಿಚಾರ. ಪಾರ್ಲಿಮೆಂಟರಿ ಪದ್ಧತಿಯ ಪ್ರಕಾರ ಒಬ್ಬ ಸದಸ್ಯರು ಮಾತನಾಡುವಾಗ ಮತ್ತೊಬ್ಬರು ಮಧ್ಯೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಉಪಾಧ್ಯಕ್ಷರು.—ಒಬ್ಬ ಸದಸ್ಯರು ಮಾತನಾಡುವಾಗ ಮತ್ತೊಬ್ಬ ಸದಸ್ಯರು ಮಧ್ಯೆ ಮಾತನಾಡುವುದು ಸರಿಯಲ್ಲ.

ಶ್ರೀ ಬಿ. ವಿಠಲ್‌ದಾಸಶೆಟ್ಟಿ.—ಮಾನ್ಯ ಅಧ್ಯಕ್ಷರಲ್ಲಿ ಒಂದು ಅರಿಕೆ ಮಾಡಿಕೊಳ್ಳುತ್ತೇನೆ. ಈ ರೀತಿಯ ವ್ಯವಸ್ಥೆ ಇನ್ನು ಮುಂದೆ ನಡೆಯಬಾರದು. ಯಾರಾದರೂ ಒಬ್ಬ ಸದಸ್ಯರು ಮಾತನಾಡುವಾಗ ಮತ್ತೊಬ್ಬರು ಮಧ್ಯೆ ಮಾತನಾಡುವುದಕ್ಕೆ ಅವಕಾಶ ಕೊಡಬಾರದು.

Sri H. SIDDAVEERAPPA (Harihara).—I believe it does not require any ruling from you for the reason that it is well-known in parliamentary practice that one should not obstruct other members while speaking. We are not doing it. Natural interjections here and there are allowed, but no obstruction.

ಶ್ರೀ ಬಿ. ವಿಠಲ್‌ದಾಸಶೆಟ್ಟಿ.—ತಾಲ್ಲೂಕ್ ಮಂಡಳಿಗಳ ಜೊತೆಗೆ ಸ್ಕೂಲ್ ಬೋರ್ಡುಗಳನ್ನು ಸಹ ಹೊಸದಾಗಿ ರಚನೆ ಮಾಡುತ್ತೇವೆಂದು ವಿದ್ಯಾ ಸಚಿವರು ಮೇಲ್ಮನೆಯಲ್ಲಿ ಒಬ್ಬ ಸದಸ್ಯರಿಗೆ ಉತ್ತರ ಕೊಡುತ್ತಾ ಹೇಳಿದ್ದಾರೆ. ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಸೂಚನೆ ಕೊಡುವುದೇನೆಂದರೆ, ಹೊಸದಾಗಿ ಸ್ಕೂಲ್ ಬೋರ್ಡುಗಳು ಅನಾವಶ್ಯಕ. ಸ್ಕೂಲ್ ಬೋರ್ಡ್ ಅಧ್ಯಕ್ಷರಿಗೆ 500 ರೂಪಾಯಿಗಳ ವರಮಾನ ಕೊಡುತ್ತಾರೆಂದು ತಿಳಿದುಬಂದಿದೆ. ನಮ್ಮ ಆರ್ಥಿಕ ಪರಿಸ್ಥಿತಿ ಚೆನ್ನಾಗಿಲ್ಲವಾದ್ದರಿಂದ ಹೊಸದಾಗಿ ಸ್ಕೂಲ್ ಬೋರ್ಡ್‌ಗಳನ್ನು ರಚನೆ ಮಾಡುವುದು ಅನಾವಶ್ಯಕವೆಂದು ಹೇಳುತ್ತೇನೆ. ತಾಲ್ಲೂಕ್ ಮಂಡಲಗಳಿಗೆ ಮತ್ತು ಜಿಲ್ಲಾ ಕೌನ್ಸಿಲ್‌ಗಳಿಗೆ ಸ್ಕೂಲ್ ಬೋರ್ಡುಗಳಿಗೆ ಕೊಡಬೇಕೆಂದಿರುವ ಅಧಿಕಾರವನ್ನು ಕೊಡುವುದರಿಂದ ಹಣವನ್ನು ಉಳಿಸಬಹುದು. ಆದ್ದರಿಂದ ಸರ್ಕಾರಕ್ಕೆ ಈ ಸಂದರ್ಭದಲ್ಲಿ ಒಂದು ಸೂಚನೆಯನ್ನು ಕೊಡುತ್ತೇನೆ, ಸ್ಕೂಲ್ ಬೋರ್ಡುಗಳ ರಚನೆಗೆ ಪ್ರಕೃತ ಸ್ಥಿತಿಯಲ್ಲಿ ಅವಶ್ಯಕತೆಯಿಲ್ಲ. ತಾಲ್ಲೂಕ್ ಮಂಡಲಗಳಿಗೆ ಪ್ರೈಮರಿ ಸ್ಕೂಲ್‌ಗಳನ್ನು ಹೈಸ್ಕೂಲ್‌ಗಳನ್ನು ವಹಿಸುವುದು ಒಳ್ಳೆಯದೆಂದು ವಿದ್ಯಾ ಮಂತ್ರಿಗಳಿಗೆ ಸೂಚಿಸಲಿಚ್ಛಿಸುತ್ತೇನೆ.

(ಶ್ರೀ ಬಿ. ವಿಠಲ್‌ದಾಸ್ ಶೆಟ್ಟಿ)

ಇನ್ನು ಮತ್ತೊಂದು ವಿಷಯವೆಂದರೆ, ಕೈಗಾರಿಕಾ ಇಲಾಖೆಗೆ ಹೊಸ ಕಮೀಷನರ್ ಒಬ್ಬರನ್ನು ನೇಮಿಸಬೇಕೆಂಬ ಅಭಿಪ್ರಾಯವನ್ನು ಸರ್ಕಾರದವರು ಇಟ್ಟುಕೊಂಡಿದ್ದಾರೆ. ಪ್ರಕೃತದಲ್ಲಿರುವ ಡೈರೆಕ್ಟರ್‌ಗೆ ಒಳ್ಳೆಯ ಅನುಭವವಿದೆ, ಬಹಳ ತಿಳಿದವರು, ಅವರಿಗೆ ಎಲ್ಲಾ ಅಧಿಕಾರವನ್ನು ವಹಿಸುವುದು ಒಳ್ಳೆಯದು. ಹೊಸ ಕಮೀಷನರ್ ಅವರನ್ನು ನೇಮಿಸುವ ಕೆಲಸವನ್ನು ಕೈಬಿಡುವುದು ಒಳ್ಳೆಯದೆಂದು ಕಾಣುತ್ತದೆ. ಏಕೆಂದರೆ ನಮ್ಮ ಆರ್ಥಿಕ ಪರಿಸ್ಥಿತಿ ಚೆನ್ನಾಗಿಲ್ಲ. ಅಗತ್ಯವಾಗಿ ನೇಮಿಸಲೇ ಬೇಕಾದರೆ ಒಂದೆರಡು ವರ್ಷದ ನಂತರ ಆಲೋಚಿಸಬಹುದೆಂದು ಸೂಚಿಸುತ್ತೇನೆ.

ಇನ್ನು ಕೊನೆಯದಾಗಿ ಸರ್ಕಾರಿ ನೌಕರರನ್ನು ಮೂರು ವರ್ಷಕ್ಕೆ ಒಂದು ಸಾರಿ ನಿಯಮಗಳ ಪ್ರಕಾರ ಮತ್ತೊಂದು ಸ್ಥಳಕ್ಕೆ ವರ್ಗ ಮಾಡಬೇಕೆಂದು ಇದೆ. ಈ ನಿಯಮವನ್ನು ಸಡಿಲಿಸುವುದು ಒಳ್ಳೆಯದೆಂದು ಕಾಣುತ್ತದೆ. ಹಳ್ಳಿಯಲ್ಲಿ ಕೆಲಸ ಮಾಡುವ ನೌಕರರೇ ಆಗಲೀ, ಪಟ್ಟಣಗಳಲ್ಲಿ ಕೆಲಸ ಮಾಡುವ ನೌಕರರೇ ಆಗಲೀ, ಅವರ ಮೇಲೆ ಯಾವ ಕಂಪ್ಲೈಂಟುಗಳು ಇಲ್ಲದಿದ್ದರೆ ಅಂತಹವರನ್ನು ಅದೇ ಸ್ಥಳದಲ್ಲಿ ಮುಂದುವರೆಸುವುದು ಒಳ್ಳೆಯದು. ಈ ದೃಷ್ಟಿಯಿಂದ ಸರ್ಕಾರಕ್ಕೆ ಬಹಳ ಹಣ ಉಳಿಯುತ್ತದೆ. ಯಾರಾದರೂ ನೌಕರರು ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ಜವಾಬ್ದಾರಿ ಮನುಷ್ಯರಿಂದ ಕಂಪ್ಲೈಂಟ್ ಬಂದರೆ, ಆ ಊರಿನ ಜನರಿಂದ ದೂರು ಬಂದರೆ ಅಂತಹವರನ್ನು ಬೇಕಾದರೆ ಬೇರೆ ಕಡೆಗೆ ವರ್ಗ ಮಾಡಬಹುದು. ಯಾವ ನೌಕರರಿಂದ ಯಾವ ದೂರುಗಳಿಗೂ ಅವಕಾಶವಿಲ್ಲದೆ ಚೆನ್ನಾಗಿ ಕೆಲಸ ನಡೆದುಕೊಂಡು ಹೋಗುತ್ತಿರುತ್ತದೋ ಅಂತಹವರನ್ನು ವರ್ಗಮಾಡಬಾರದು. ಮೂರು ವರ್ಷಕ್ಕೆ ಒಂದು ಸಾರಿ ವರ್ಗಮಾಡಬೇಕೆಂಬ ನಿಯಮವನ್ನು ಜಾರಿಗೆ ತಂದವರು ಬ್ರಿಟಿಷರು ಎಂದು ಕಾಣುತ್ತದೆ. ಈಗ ಆ ರೂಲ್ಸನ್ನು ಬದಲಾವಣೆ ಮಾಡಬೇಕು. ಈ ರೀತಿ ಬದಲಾವಣೆ ಮಾಡಿದರೆ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿಗಳು ಉಳಿತಾಯವಾಗುತ್ತದೆ. ಆದ್ದರಿಂದ ಈಗಿರುವ ರೂಲ್ಸನ್ನು ಸಡಿಲಿಸಬೇಕೆಂದು ಮತ್ತೊಮ್ಮೆ ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ.

ಇನ್ನು ಪೋಲೀಸ್ ಇಲಾಖೆಯವರ ವಿಚಾರದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ನಮ್ಮ ವಿರೋಧ ಪಕ್ಷದ ಗೆಳೆಯರು ಹೇಳಿದ್ದಾರೇನೆಂದರೆ, ಗೃಹ ಮಂತ್ರಿಯವರು ಇದಕ್ಕೋಸ್ಕರ ರಾಜಿನಾಮೆಯನ್ನು ಕೊಟ್ಟಿದ್ದಾರೆಂದು. ಇನ್ನು ಕೆಲವರಿಗೆ ಪೋಲೀಸು ಇಲಾಖೆ ಸರಿಯಾಗಿ ನಡೆಯುತ್ತಿಲ್ಲವೆಂದು ತೋರುತ್ತದೆ. ಅದು ಎಷ್ಟುಮಟ್ಟಿಗೆ ಸರಿಯೋ ಏನೋ ಎಂದು ಮುಂದೆ ಪರಿಶೀಲಿಸತಕ್ಕ ವಿಚಾರ. ನಾನು ಒಂದು ವಿಚಾರವನ್ನು ಹೇಳುತ್ತೇನೆ. ಇವತ್ತು ಸರ್ಕಾರಕ್ಕೂ ಪೋಲೀಸರಿಗೂ ಯಾವ ರೀತಿಯ ಸಂಬಂಧವಿಲ್ಲದ ಹಾಗೆ ನಡೆಯುತ್ತಿದೆ. ಸಂಬಂಧವಿದ್ದ ಹಾಗೆ ಕಾಣುವುದಿಲ್ಲ. ಯಾವುದು ಆದರೂ ಮಂತ್ರಿಗಳು, ನನಗೆ ಏನೂ ಸಂಬಂಧವಿಲ್ಲವೆಂದು ಹೇಳಿಕೊಂಡು ಹೋಗುವ ಸಂದರ್ಭವಿದೆ. ವಿರೋಧಪಕ್ಷದವರು ನಮ್ಮನ್ನು, ಏನಾದರೂ, ನಾವೆಲ್ಲರೂ ಹೊಣೆಗಾರರು ಎಂದು ಹೇಳುತ್ತಾರೆ. ನಮ್ಮ ಪಕ್ಷ ಆಡಳಿತದಲ್ಲಿರುವಾಗ ಹೊಣೆಗಾರರೇನೋ ಹೌದು. ಇವತ್ತಿನ ದಿವಸ ಪೋಲೀಸರ ಮೇಲೆ ಹತೋಟಿ ಇಟ್ಟುಕೊಳ್ಳುವುದು ಒಳ್ಳೆಯದು ಎಂದು ಹೇಳುತ್ತೇನೆ. ಉದಾಹರಣೆಗೆ, ನಾನು ದಕ್ಷಿಣ ಕನ್ನಡ ಜಿಲ್ಲೆಯ ಗಡಿ ಪ್ರದೇಶದಿಂದ ಬರುವವನಾದ್ದರಿಂದ ಹೇಳುತ್ತೇನೆ. ಅಲ್ಲಿಂದ ಆಚೆಗೆ ಅಕ್ಕಿ ಹೋಗಕೂಡದು ಎಂದು ಕೆಲವು ನಿಯಮಗಳಿವೆ. ಅದಕ್ಕೆ ಬಂದೋಬಸ್ತು ಇದೆ. ಇಲ್ಲಿ ಯಾವ ರೀತಿ ನಡೆಯುತ್ತಿದೆ ಎಂದರೆ, ಪೋಲೀಸರಿಗೂ ಜನರಿಗೂ ಯಾವ ರೀತಿಯ ಸಂಬಂಧ ಇಟ್ಟುಕೊಳ್ಳದೆ, ಪೋಲೀಸರೇ ಒಬ್ಬರೇ ಮಾಡಿಕೊಂಡು, ಲಕ್ಷಾಂತರ ರೂಪಾಯಿಯ ಅಕ್ಕಿಯನ್ನು ಸಾಗಿಸುತ್ತಿದ್ದಾರೆ. ಇದನ್ನು ಯಾವ ರೀತಿಯಲ್ಲಿ ನಿಲ್ಲಿಸಬೇಕು ಎಂದು ಒಂದು ರೀತಿಯ ಕಮಿಟಿ—ವಿಜಿಲೆನ್ಸ್ ಕಮಿಟಿಯನ್ನು ಮಾಡಿದ್ದೂ ಆಯ್ತು. ಈ ಕಮಿಟಿ ಇದ್ದರೆ, ಇದು ಜನರಿಗೆ ಸಂಬಂಧಪಟ್ಟದ್ದು, ಅದರಲ್ಲಿ ಪೋಲೀಸರಿಗೆ ಏನೂ ಸಂಬಂಧವಿಲ್ಲವೆಂದು ಹೇಳುತ್ತಾರೆ. ಪ್ರಜಾಪ್ರಭುತ್ವದಲ್ಲಿ ಪೋಲೀಸರಿಗೂ ಜನರಿಗೂ ಯಾವ ಸಂಬಂಧವೂ ಇಲ್ಲ, ಎನ್ನುವ ಬರೇ ಬ್ರಿಟಿಷ್ ಕಾಲದಲ್ಲಿ ನಡೆಯುವಂತಹ ಮನೋವೃತ್ತಿಯನ್ನು ಬಿಡುವಂತೆ ಮಾಡಬೇಕು. ಈಗಲಾದರೂ ಸಂಬಂಧಪಟ್ಟ ಮಾನ್ಯ ಮಂತ್ರಿಯವರು ಅವರಿಗೆ ತಕ್ಕ ಸೂಚನೆಯನ್ನು ಕೊಡುತ್ತಾರೆಂದು ನಂಬಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಪೋಲೀಸರ ಮನೋವೃತ್ತಿ ಬದಲಾವಣೆಯಾಗಬೇಕೆಂದು ಹೇಳಿದಿರಿ. ಅದು ಸಂತೋಷ.

ಶ್ರೀ ಬಿ. ವಿಠಲ್‌ದಾಸ ಶೆಟ್ಟಿ.—ನಾವು ಸರ್ಕಾರದವರಲ್ಲಿ ತಪ್ಪು ಏನಾದರೂ ಇದ್ದರೆ ತಪ್ಪು ಎಂದು ಹೇಳುತ್ತೇವೆ.

Sri AZEEZ SAIT.—I congratulate him on behalf of the opposition.

ಶ್ರೀ ಬಿ. ವಿಠಲ್‌ದಾಸ್‌ಶೆಟ್ಟಿ.—ಮಾನ್ಯ ಅಜೀಜ್ ಸೇಠರು ಹನಗಲಿನಲ್ಲಿ ಸೋತು ಹೋಗಿ ಬಂದು ಇಲ್ಲಿ ಏನೋ ಮಾತಾಡುತ್ತಿದ್ದಾರೆ ?

ಶ್ರೀ ಅಜೀಜ್ ಸೇಠ್.—ನಮಗೆ ಸೋಲು ಗೆಲುವು ಎಲ್ಲಾ ಒಂದೇ.

ಶ್ರೀ ಎಚ್. ಸಿದ್ದವೀರಪ್ಪ. ಅವರು ಸಂತೋಷಪಡಕ್ಕೆ ವಿಷಯವೇನೂ ಅಲ್ಲ. ಹಿಂದೆ ಕೋಲಾರ ಜಿಲ್ಲೆಯಲ್ಲಿ ಒಂದು ಆನೆ ಕಾಂಗ್ರೆಸ್ ಅಂತ ಇತ್ತು. ಆ ರೀತಿಯಾಗಿದೆ ಅಷ್ಟೆ. ಬೇರೇನೂ ಅಗಿಲ್ಲ.

ಶ್ರೀ ಬಿ. ವಿಠಲ್‌ದಾಸ್ ಶೆಟ್ಟಿ.—ಅದೇ ರೀತಿಯಲ್ಲಿ ಇವತ್ತು ಆಸ್ಪತ್ರೆಗಳಲ್ಲಿ ಬೇಕಾದಷ್ಟು ಸೌಲಭ್ಯಗಳಿಲ್ಲ ಅದನ್ನು ಜಾಸ್ತಿಮಾಡಬೇಕೆಂದು ತಿಳಿಸುತ್ತೇನೆ. ಒಂದು ಆಸ್ಪತ್ರೆಯಲ್ಲಿ ಇರುವಂತಹ ಮದ್ದುಗಳಿಂದ ಅಲ್ಲಿ ಹೆಚ್ಚಿನ ಚಿಕಿತ್ಸೆ ನಡೆಸಿಕೊಳ್ಳಬೇಕಾದರೆ ಅವನಿಗೆ ಅಸಾಧ್ಯ. ಎಷ್ಟೋ ಬಡವರು ಹೋದರೆ, ಅಲ್ಲಿ ಡಾಕ್ಟರುಗಳು ಒಂದು ಚೀಟಿ ಕೊಟ್ಟು ಹೊರಗಿನಿಂದ ತೆಗೆದುಕೊಂಡು ಬಾ ಎಂದು ಹೇಳುತ್ತಿದ್ದಾರೆ. ಅವನು ಇನ್‌ಜೆಕ್ಷನ್ ಆದರೂ ಹೊರಗಡೆಯಿಂದ ತರತಕ್ಕಂತಹ ಪರಿಸ್ಥಿತಿ ಇದೆ. ಆದ್ದರಿಂದ ಈ ರೀತಿಯಲ್ಲಿ ಮಾಡದೆ, ಆಸ್ಪತ್ರೆಗಳಲ್ಲಿ ಮದ್ದು ಹಾಗೂ ಇನ್ನಿತರ ಬೇಕಾಗುವ ಸಲಕರಣೆಗಳನ್ನು ಒದಗಿಸಲು ಹೆಚ್ಚು ಹಣವನ್ನು ಒದಗಿಸಬೇಕೆಂದು ಹೇಳುತ್ತೇನೆ. ಅದೇ ರೀತಿಯಲ್ಲಿ ನಮ್ಮಲ್ಲಿ ವೆಟರಿನರಿ ಆಸ್ಪತ್ರೆ ಎಂದು ಇದೆ. ಸಾಧಾರಣ 20 ಹಳ್ಳಿಗಳಿಗೆ ಸಂಬಂಧಪಟ್ಟ ಆಸ್ಪತ್ರೆ ಅದು. ಅದಕ್ಕೆ 5 ಪೆನ್ಸಿಲಿನ್ ಇಂಜೆಕ್ಷನ್ ಕಳಿಸಿಕೊಟ್ಟಿದ್ದಾರೆ. ಅದಕ್ಕೂ ಎಲ್ಲಾ ಸ್ವಲ್ಪ ಜಾಸ್ತಿ ಹಣವನ್ನು ಒದಗಿಸಬೇಕೆಂದು ಹೇಳಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಸ್. ಶೆಟ್ಟರ್.—ಮಾನ್ಯ ಸಭಾಪತಿಯವರೇ, ಯಾವ ಜಾತಿಯ ಬಗ್ಗೆ ಇಲ್ಲಿ ಮಾತನಾಡಲು ಮನಸ್ಸಿಲ್ಲದಿದ್ದರೂ ಕೂಡ, ಆಡಳಿತ ಪಕ್ಷದ ಒಬ್ಬ ಸದಸ್ಯರು ಪದೇ ಪದೇ ಅದನ್ನು ಆಹ್ವಾನಿಸಿ ಮಾತನಾಡಿದ್ದುದರಿಂದ, ನನಗೆ ಮಾತನಾಡಬೇಕೆಂಬ ಒತ್ತಾಯ ಬರಹತ್ತಿದೆ. ಕಾಂಗ್ರೆಸ್ ಜಾತೀಯತೆಯನ್ನು ತೋರಿಸುವ ಪಕ್ಷವಲ್ಲವೆಂದು ಹೇಳುತ್ತಿದ್ದಾರೆ, ಒಪ್ಪೋಣ. ಆದರೆ ಇವತ್ತಿನ ದಿವಸ ನಮ್ಮ ದೇಶದಲ್ಲಿ ಜಾತಿಯ ಆಧಾರದ ಮೇಲೆ ಎರಡು ರಾಷ್ಟ್ರಗಳನ್ನು ಮಾಡಿದವರು ಯಾರು ? ಕಾಂಗ್ರೆಸ್ ಪಕ್ಷದವರೇ, ಅಥವಾ ವಿರೋಧಪಕ್ಷದವರೇ ? ಅವರು ಸ್ವಲ್ಪ ಅದನ್ನು ವಿಚಾರ ಮಾಡಬೇಕು ಆ ಮೇಲೆ ಒಪ್ಪಿಕೊಳ್ಳೋಣ. ಇವತ್ತು ಜಾತೀಯತೆಯ ಆಧಾರದ ಮೇಲೆ ಪಾಕೀಸ್ತಾನವನ್ನು ಯಾರು ಮಾಡಿದರು ಎಂದು ಯೋಚಿಸಬೇಕು. ಆಮೇಲೆ ಯಾವುದಾದರೂ ಒಂದು ಕೇಸ್, ಯಾವುದಾದರೂ ಒಂದು ನ್ಯಾಯ, ಅದರಲ್ಲಿ ಕೋರ್ಟಿಗೆ ಹೋದರೆ ಅಲ್ಲಿಯೂ ಜಾತೀಯತೆ ನಡೆಯುತ್ತಿದೆ. ಇದು ಕೋತಿ ಮೊಸರು ತಿಂದು ಮೇಕೆ ಬಾಯಿಗೆ ಒರಸಿದ ಹಾಗೆ ಮಾಡುತ್ತಿದ್ದಾರೆ. ಕಾಂಗ್ರೆಸ್ ಪಕ್ಷದಂತಹ ದೊಡ್ಡ ಪಕ್ಷಕ್ಕೆ ನನ್ನ ಸೂಚನೆ ಏನೆಂದರೆ, ಎಲ್ಲಿ ನೋಡಿದರೂ ಜಾತಿಯ ಗೊಂದಲ, ಗಲಭೆ ನಡೆದರೂ ಅದನ್ನು ನಮ್ಮ ಕಡೆಗೆ ತೋರಿಸುತ್ತಿದ್ದೀರಿ, ಅದಕ್ಕೆ ಪ್ರತಿಯೊಬ್ಬ ಸದಸ್ಯನೂ ಯಾವ್ಯಾವ ಕ್ಷೇತ್ರದಿಂದ ಬಂದಿದ್ದಾನೋ, ಅಲ್ಲಿ ಅವನ ಅಧ್ಯಕ್ಷತೆಯಲ್ಲಿ ಒಂದು ಶಾಂತಿ ವ್ಯವಸ್ಥೆಯ ಸಮಿತಿಯನ್ನು ಏಕೆ ಮಾಡಬಾರದು ? ಪೋಲೀಸರು ಎಷ್ಟೋ ಜನರನ್ನು ದುರ್ಲಾಭ ಪಡೆದು ತೊಂದರೆಗೆ ಈಡುಮಾಡುತ್ತಿದ್ದಾರೆ. ಅದನ್ನು ಎಲ್ಲಾ ಈ ಸಮಿತಿ ತಡೆಯಲು ಏಕೆ ಅಧಿಕಾರ ಕೊಡಬಾರದು ? ಚಿಕ್ಕಮಗಳೂರಿನ ಪ್ರಶ್ನೆ ಇದ್ದರೂ, ಅಥವಾ ಬೇರೆ ಯಾವ ಊರಿನ ಪ್ರಶ್ನೆ ಇದ್ದರೂ ಎಲ್ಲಾ ಒಂದೇ ರೀತಿಯಲ್ಲಿ ಅಖೈರು ಆಗಿ ಕಾಣುತ್ತದೆ, ಇವತ್ತು ಅಲ್ಪಸಂಖ್ಯಾತರು ಎಂದು ತಿಳಿದುಕೊಂಡು ಕೇವಲ ಇದು ಮುಂದಕ್ಕೆ ಒಂದು ಅಘಾತಪ್ರವೃತ್ತಿಯನ್ನು ತಂದುಕೊಟ್ಟೀತು ಎಂದು ಹೇಳುತ್ತೇನೆ. ಯಾವ್ಯಾವ ಕೋಮಿನವರನ್ನು ತೆಗೆದುಕೊಂಡು, ಅವರನ್ನು ಅಲ್ಪಸಂಖ್ಯಾತರೆಂದು ಹೇಳುತ್ತಿದ್ದಾರೋ ಅವರೇ ಬಹುಸಂಖ್ಯಾತರಾಗಿದ್ದಾರೆ,

ಈ ವಿಷಯ ಚರ್ಚಿಸಬಾರದು ಎಂದು ಇದ್ದೆ ಅದರೂ ಕಾರಣಾಂತರಗಳಿಂದ ಮಾಡಬೇಕಾಯಿತು. ಒಂದು ಮಾತನ್ನು ಹೇಳುವುದಾದರೆ, ಯಾವುದೇ ಒಂದು ಕೋಮನ್ನು ತೆಗೆದುಕೊಂಡರೂ ಅದು ಮೈನಾರಿಟಿ ಕಮ್ಯುನಿಟಿಯಾಗುತ್ತದೆ. ಪ್ರತಿಯೊಬ್ಬರಿಗೂ ಸಮಾನವಾದ ಹಕ್ಕು, ಇರಬೇಕು ಅಂಥವರಿಗೆ, ಇಂಥವರಿಗೆ ಎಂಬ ಅನುಕಂಪ ತೋರಿಸುವುದು ಸರಿಯಲ್ಲ. ಎಲ್ಲವನ್ನೂ ಕಾನೂನು ಬದ್ಧವಾಗಿಮಾಡಬೇಕು ಮತ್ತು ಅದರೊಳಗೆ ಭ್ರಷ್ಟಾಚಾರ ಪ್ರವೇಶಿಸದಂತೆ ಮಾಡಬೇಕು.

4-30 P.M.

ಇದರ ಸಲುವಾಗಿ ನಾನು ಇಲ್ಲಿ ಹೇಳುತ್ತಿರುವುದು ಇಂದು ನಮ್ಮಲ್ಲಿ ವಕೀಲರಾಗಿರುವವರು ಬಹಳ ಜನ ಇದ್ದಾರೆ. ಅದರಲ್ಲೂ ಪ್ರತಿಯೊಬ್ಬರೂ ಇಂದು ದೇಶದಲ್ಲಿ ಸಮತಾವಾದವನ್ನು ತರ

(ಶ್ರೀ ಎಸ್. ಎಸ. ಶೆಟ್ಟರ್)

ಬೇಕು. ಸಮಾಜವಾದದಂತಹ ಕೆಲಸಗಳನ್ನು ಮಾಡಬೇಕು ಎಂದು ಅನೇಕ ಪ್ರಸಂಗಗಳನ್ನು ಆ ಕಡೆಯ ಸದಸ್ಯರು ಹೇಳುತ್ತಾ ಇಲ್ಲಿ ಚರ್ಚೆ ಮಾಡುತ್ತಿದ್ದಾರೆ. ಇದೊಂದು ಸಂತೋಷದ ವಿಷಯ. ಆದರೆ ಇಂದು ದೇಶದಲ್ಲಿ ಸಮತಾವಾದ ಹಾಗೂ ಸಮಾಜವಾದ ಬರಲಿಕ್ಕೆ ಯಾವ ರೀತಿ ಪ್ರಯತ್ನ ಮಾಡಬೇಕು ಹೇಗೆ ಮಾಡಬೇಕು ಎನ್ನುವುದರ ಬಗ್ಗೆ ಯಾರೂ ಯೋಚಿಸಿದಂತಿಲ್ಲ. ಇದು ಹೇಗೆ ಆಗಿದೆ ಎಂದರೆ 'ಗಣೇಶ ಮಾಡು ಎಂದರೆ ಮಂಗ ಮಾಡುತ್ತೇನೆ' ಎಂದು ಗಾದೆಯಲ್ಲಿ ಹೇಳುವಂತೆ ಪ್ರತಿಯೊಂದು ಕೆಲಸವನ್ನೂ ಇಲ್ಲಿ ಮಾಡುತ್ತಿದ್ದಾರೆ. ಪ್ರತಿಯೊಂದು ವಿಷಯದಲ್ಲಿಯೂ ಇಲ್ಲಿ ಹೇಳುವ ಕಾಲಕ್ಕೆ ಒಂದೇ ಮನಸ್ಸಿನಿಂದ ಎಲ್ಲರೂ ಒಂದು ವಿಷಯವನ್ನು ಇಲ್ಲಿ ಹೇಳುತ್ತಿದ್ದಾರೆ. ಇದಕ್ಕಾಗಿ ನನಗೂ ಸಂತೋಷವಾಗುತ್ತಿದೆ. ಪ್ರತಿಯೊಂದನ್ನೂ ಸರಕಾರ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ ಎಂದರೆ, ಸರಕಾರ ಪ್ರತಿಯೊಂದು ಇಂಡಸ್ಟ್ರಿಯಲ್ಲಾಗಲೀ, ಪ್ರತಿಯೊಂದು ಉದ್ದಿಮೆಯಲ್ಲಾಗಲೀ ಎಲ್ಲವನ್ನೂ ಒಮ್ಮೆಲೇ ಸರಕಾರವೇ ಮಾಡಲಿಕ್ಕೆ ಆಗುವುದಿಲ್ಲ. ಪಬ್ಲಿಕ್ ಸೆಕ್ಟರ್ ಹಾಗೂ ಪ್ರೈವೇಟು ಸೆಕ್ಟರು ಎಂದು ಬೇರೆ ಬೇರೆ ರೀತಿಯಾದ ಉದ್ಯಮಗಳನ್ನು ಮಾಡಲು ಹಣವನ್ನು ಹಾಕಿ ಅದರಂತೆ ಬೇರೆ ಬೇರೆ ಮಾಡುವುದಕ್ಕಾಗುವುದಿಲ್ಲ. ಇದರ ಪ್ರಕಾರ ಆಡಳಿತ ನಡೆಸಬೇಕು ಎಂದು ಹೇಳುವಾಗ ಇದಕ್ಕೆ ಸಾಕಷ್ಟು ಅವಕಾಶಗಳನ್ನು ಕಲ್ಪನೆ ಮಾಡಿಕೊಡಬೇಕು. ಪ್ರೈವೇಟು ಸೆಕ್ಟರಿಗೆ ಒಂದು ಸ್ಥಾನವಿದೆ ಎಂದು ಅದಕ್ಕೆ ಹೆಚ್ಚು ಅವಕಾಶ ಕಲ್ಪಿಸಿಕೊಟ್ಟರೆ ಆದರಿಂದ ದೇಶದ ಹಿತ ಸಾಧನೆಯಾಗುವುದಿಲ್ಲ, ರಾಜ್ಯದ ಹಿತವೂ ಆಗುವುದಿಲ್ಲ. ಇದರಿಂದ ಒಂದು ತರಹದ ಮತ್ಸರಕ್ಕೆ ಕಾರಣವಾಗುತ್ತದೆ. ಔದ್ಯೋಗಿಕ ಪ್ರಗತಿಯಲ್ಲಿ ನೋಡಿದರೆ ಇದರಿಂದ ದೇಶದ ಹಿತ ಸರಿಯಾಗಿ ಕಂಡುಬರುವುದಿಲ್ಲ ಎನ್ನುವುದು ಸ್ಪಷ್ಟವಾಗಿ ಕಾಣಿಸುತ್ತದೆ. ಇದರಲ್ಲಿ ಒಂದು ಮಾತು ಏನು ಕಾಣಿಸುತ್ತದೆ ಎಂದರೆ ಬಂಡವಾಳಶಾಹಿ ಕಡೆಗೆ ಇವರ ಲಕ್ಷ್ಯ ಹೆಚ್ಚಾಗಿರುವುದು ಕಂಡು ಬರುತ್ತದೆ. ನಮ್ಮ ದೇಶದಲ್ಲಿ ಹೊಸ ಹೊಸ ಕೈಗಾರಿಕೆಗಳನ್ನು ಸ್ಥಾಪಿಸಲು ಎಲ್ಲ ಅನುಕೂಲಗಳೂ ಇವೆ ಎಂದು ಈಚೆಗೆ ಮುಂಬಯಿಗೆ ಹಾಗೂ ಇನ್ನಿತರ ಕಡೆಗಳಿಗೆ ಮಾನ್ಯ ಅರ್ಥ ಮಂತ್ರಿಗಳು ಹಾಗೂ ಮುಖ್ಯ ಮಂತ್ರಿಗಳು ಹೋಗಿ ಅಲ್ಲಿನ ಕೈಗಾರಿಕೋದ್ಯಮಿಗಳನ್ನು ಕೇಳಿಕೊಂಡ ಪ್ರಸಂಗಗಳೂ ನಮ್ಮ ಮುಂದಿವೆ ಇದರ ಬಗ್ಗೆ ಹೇಳುವಾಗ ನಮ್ಮ ರಾಜ್ಯದಲ್ಲಿರುವ ಸ್ಟೇಟ್ ಟ್ರಾನ್ಸ್‌ಪೋರ್ಟ್ ಕಾರ್ಪೋರೇಷನ್ ಬಗ್ಗೆ ಹೇಳಬೇಕಾಗಿದೆ. ಈಚೆಗೆ ನಮ್ಮ ಈ ಕಾರ್ಪೋರೇಷನ್‌ನವರು ಸಾರಿಗೆ ದರಗಳನ್ನು ಹೆಚ್ಚು ಮಾಡಿ ಜನರ ಮೇಲೆ ಹೆಚ್ಚು ಹೊರೆ ಬೀಳುವಂತೆ ಮಾಡಿದ್ದಾರೆ. ಹೀಗೆ ದರವನ್ನು ಹೆಚ್ಚು ಮಾಡಬಾರದು ಎಂದು ಮೊದಲಿಂದಲೂ ಜನಸಂಘದವರು ಸಮರ್ಥನೆ ಮಾಡುತ್ತಲೇ ಬಂದಿದ್ದಾರೆ ಮತ್ತು ಇದರಿಂದ ಸಮಾಜವಾದ ಬೆಳೆಯುವಂತೆ ಆಗುವುದಿಲ್ಲ ಮತ್ತು ಈ ಕಾರ್ಪೋರೇಷನ್‌ನನ್ನು ರಾಷ್ಟ್ರೀಕರಣ ಮಾಡಿದಾಗಿನಿಂದಲೂ ನಾವು ಹೇಳುತ್ತಲೇ ಬರುತ್ತಿದ್ದೇವೆ ಮತ್ತು ದರಗಳನ್ನು ಹೆಚ್ಚಿಸುವುದರಿಂದ ಜನರಿಗೆ ಬಹಳ ಕಷ್ಟಗಳಾಗುತ್ತವೆ, ಇದರಿಂದ ಸರಕಾರದವರೇ ಕಾರ್ಪೋರೇಷನ್ ಆಡಳಿತವನ್ನು ಇಟ್ಟುಕೊಂಡು ಆದಷ್ಟು ಜನತೆಗೆ ಹೆಚ್ಚು ಸೌಕರ್ಯಗಳನ್ನು ಒದಗಿಸುವುದರ ಕಡೆಗೆ ಪ್ರಯತ್ನ ಮಾಡಬೇಕು ಎಂದು ಸರಕಾರದ ಮುಂದೆ ಹೇಳುತ್ತಲೇ ಬರುತ್ತಿದ್ದೇವೆ ಮತ್ತು ಹೀಗೆ ಹೆಚ್ಚು ದರಗಳನ್ನು ಜನರ ಮೇಲೆ ಹೊರಿಸಿ ಇದರಿಂದ ಹೆಚ್ಚು ಲಾಭವೇನು ಬರುತ್ತದೆ ಇದರಿಂದ ಜನರಿಗೆ ಹೆಚ್ಚು ಸವಲತ್ತುಗಳನ್ನು ನೀಡಿದಂತಾಗುತ್ತದೆ ಎಂದು ತಿಳಿದಿದ್ದರೆ ಅದು ಶುದ್ಧ ತಪ್ಪಾಗುತ್ತದೆ. ಈ ಕಾರ್ಪೋರೇಷನ್ನಿನ ಆಡಳಿತ ಹೇಗಿದೆ ಎನ್ನುವುದಕ್ಕೆ ಒಂದು ವಿಚಾರವನ್ನು ಇಲ್ಲಿ ಹೇಳಬಯಸುತ್ತೇನೆ. ಈ ಕಾರ್ಪೋರೇಷನ್‌ನವರು ಬಾಡಿ ಬಿಲ್ಡಿಂಗ್ ಆಕ್ಟಿವಿಟೀಸ್‌ಗಳ ಬಗ್ಗೆ ಹೇಳುವಾಗ ಮುಂಬಯಿ ಕಡೆಯಿಂದ ಚಾಸಿಗಳನ್ನು ತರಿಸುತ್ತಾರೆ. ಮೊದಲಿಗೆ ಮುಂಬಯಿನಿಂದ ಬೆಂಗಳೂರಿಗೆ ತರಿಸಿದರು ಆದರೆ ಹುಬ್ಬಳ್ಳಿಯಲ್ಲಿ ವರ್ಕ್‌ಷಾಪು ಇದೆ ಅಲ್ಲಿಗೆ ಕಳುಹಿಸಿದರೆ ಮುಂಬಯಿಗೆ ಹತ್ತಿರವಾಗುತ್ತದೆ ಎಂದು ಬೆಂಗಳೂರಿಗೆ ಬಂದ ಚಾಸಿಗಳನ್ನು ಪುನಃ ಹುಬ್ಬಳ್ಳಿಗೆ ಕಳುಹಿಸಿದರು ಹೀಗೆ ಬೆಂಗಳೂರಿಂದ ಹುಬ್ಬಳ್ಳಿಗೆ ಇಷ್ಟು ಚಾಸಿಗಳನ್ನು ಕಳುಹಿಸುವುದಕ್ಕಾಗಿ ಸುಮಾರು 16 ಸಾವಿರ ರೂಪಾಯಿಗಳಷ್ಟು ಹೆಚ್ಚು ಖರ್ಚು ಈ ರೋಡು ಟ್ರಾನ್ಸ್‌ಪೋರ್ಟು ಕಾರ್ಪೋರೇಷನಿಗೆ ಬಂತು. ಈ ರೀತಿಯಾಗಿ ಅನ್ಯಾಯವಾಗಿ ಸರಕಾರದ ಹಣ ಖರ್ಚು ಮಾಡುವುದು ಸರಿಯೇ ಎಂದು ಇಲ್ಲಿ ಕೇಳಬೇಕಾಗಿದೆ. ಸಾರಿಗೆ ಉದ್ಯಮ ಈ ಕಾರ್ಪೋರೇಷನ್ನಿನಿಂದ ಯಾವ ರೀತಿ ನಡೆಯುತ್ತದೆ ಎಂಬುದನ್ನು ಇಲ್ಲಿ ಹೇಳುತ್ತಿದ್ದೇನೆ. ಆದರೆ ಯಾವುದೇ ಖಾಸಗೀ ಕಾರ್ಪೋರೇಷನ್ನಿನಲ್ಲಿ ಇದರ ಆಡಳಿತ ಇದ್ದಿದ್ದರೆ ಅವರು ಯಾವ ರೀತಿಯಾಗಿ ಪ್ರತಿಯೊಂದು ವಿಚಾರದಲ್ಲೂ ಕೆಲಸ ಮಾಡಬೇಕು ಎನ್ನುವುದಕ್ಕೆ ತಕ್ಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಕೆಲಸ ಮಾಡುತ್ತಿದ್ದರು ಸರಕಾರ ಬೆಂಗಳೂರಿಂದ ಹುಬ್ಬಳ್ಳಿಯ ಕಡೆಗೆ ಇಷ್ಟು ಹಣ ವ್ಯರ್ಥವಾಗಿ ಖರ್ಚು ಮಾಡಿರುವುದರ ಕಡೆಗೆ ಅವರು ಲಕ್ಷ್ಯಕೊಟ್ಟಿಲ್ಲ ಎಂದು ತೋರುತ್ತದೆ. ಸರಕಾರವೇನೋ ಲಕ್ಷಗಟ್ಟಲೆ ಹಣವನ್ನು ಇಂತಹ ಕಾರ್ಪೋರೇಷನ್ನಿಗೆ ಕೊಟ್ಟು ಅದನ್ನು ಅವರು

ಹೇಗೆ ವ್ಯಯ ಮಾಡುತ್ತಾರೆಂಬುದರ ಕಡೆಗೆ ಅವರು ವಿಚಾರವಾಡುತ್ತಿಲ್ಲ. ಇದರಿಂದ ಸರಕಾರದ ಮನೋಭಾವನೆ ಯಾವ ರೀತಿ ಇದೆ ಎನ್ನುವುದು ವ್ಯಕ್ತವಾಗುತ್ತದೆ. ಇದೇ ರೀತಿಯಾಗಿ ಕೆಲವು ಕಡೆಗಳಲ್ಲಿ ಮಿಲ್‌ಗಳನ್ನು ಬಂದ್ ಮಾಡಲಿಕ್ಕೆ ಹೊರಟಿದ್ದಾರೆ. ಇದರಿಂದ ಕಾರ್ಮಿಕರಿಗೆ ಬಹಳ ಕಷ್ಟಗಳಾಗುತ್ತಿದೆ. ಸರಕಾರ ಕಾರ್ಮಿಕರ ಬಗ್ಗೆ ಸಹಕಾರ ಮಾಡುತ್ತಿಲ್ಲ. ಯಾವುದಾದರೂ ಮಿಲ್‌ಗಳು ಸರಿಯಾಗಿ ನಡೆಯದೇ ಇದ್ದರೆ ಅಂತಹ ಕಡೆಗಳಲ್ಲಿ ಸಾಲ ಕೊಟ್ಟು ಅಲ್ಲಿರುವ ಜನರ ಜೀವನ ಸುಧಾರಿಸಲು ತಕ್ಕ ಪ್ರಯತ್ನಗಳನ್ನೇ ಮಾಡುತ್ತಿಲ್ಲ. ಇದರಿಂದಾಗಿ ಕೆಲವು ಕಡೆಗಳಲ್ಲಿ ಮಿಲ್‌ಗಳು ಬಂದಾಗುವ ಪರಿಸ್ಥಿತಿ ಬರುತ್ತಿದೆ. ಎಂ.ಎಸ್.ಕೆ. ಮಿಲ್ಸ್ ಬಂದಾಗುವ ಪರಿಸ್ಥಿತಿ ಇಲ್ಲಿ ಬಂದಾಗ ಇಲ್ಲಿರುವ ಕಾರ್ಮಿಕರ ಪರಿಸ್ಥಿತಿ ಯಾವ ರೀತಿಯಾಗಿತ್ತು ಎನ್ನುವುದು ಎಲ್ಲರಿಗೂ ತಿಳಿದು ಬಂದಿದೆ. ಇಂತಹ ಕೈಗಾರಿಕಾ ಉದ್ಯಮಗಳಲ್ಲಿ ಮೊದಲಿಗೆ ಹೊಡೆತ ಬೀಳುವುದು ಕಾರ್ಮಿಕರಿಗೆ. ಅವರುಗಳು ತಮ್ಮ ಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳಬೇಕು ಎಂದು ಉಪವಾಸ ಹಾಗೂ ಸ್ಟ್ರೈಕ್ ಇತ್ಯಾದಿಗಳನ್ನು ಮಾಡುತ್ತಿದ್ದರೂ ಅವರ ಪರಿಸ್ಥಿತಿಯನ್ನು ಸುಧಾರಿಸಲು ಸರಕಾರ ಯಾವ ಪ್ರಯತ್ನಗಳನ್ನೂ ಮಾಡುತ್ತಿಲ್ಲ. ಇದರಿಂದ ಸಮಾಜವಾದದ ವ್ಯವಸ್ಥೆ ಯಾವ ರೀತಿಯಾಗಿ ಹೋಗುತ್ತಿದೆ ಎನ್ನುವುದು ಚೆನ್ನಾಗಿ ಗೊತ್ತಾಗುತ್ತದೆ. ಮೊದಲೇನೋ ಕೆಲವರು ಹೇಳುತ್ತಿದ್ದರು ದೇಶದ ಕಲ್ಯಾಣದ ಬಗ್ಗೆ ಸರಕಾರ ಲಕ್ಷ್ಯಕೊಡುತ್ತಿಲ್ಲ. ಬಡವರಾಗಿರುವವರು ಬಡವರಾಗಿಯೇ ಇದ್ದಾರೆ. ಶ್ರೀಮಂತರಾದವರು ಶ್ರೀಮಂತರಾಗಿಯೇ ಇದ್ದಾರೆ. ಆದರೆ ಈಗ ಇದು ಬದಲಾವಣೆಯಾಗುತ್ತಿದೆ. ಇಂದು ಶ್ರೀಮಂತರಾದವರು ಶ್ರೀಮಂತರಾಗುತ್ತಿಲ್ಲ. ಇಂದು ಕೇರ್ ಆಫ್ ಫುಟ್ ಪಾತ್ ಎಂದು ಯಾವ ಜನರನ್ನು ಹೇಳುತ್ತೇವೆ ಅಂತಹ ಜನರು ಕೋಟಾಗಳನ್ನು ಪಡೆದು ಅಪಾರ ಹಣ ಸಂಪಾದನೆ ಮಾಡಿಕೊಂಡು ಒಮ್ಮೆಗೇ ಮುಗಿಲನ್ನು ಹಾರುವಂತೆ ದೊಡ್ಡ ಶ್ರೀಮಂತನಾಗುತ್ತಾರೆ. ಇದೇನು ಸಮಾತಾವಾದವೇನು ? ಇದೇನು ಸಮಾಜವಾದದ ಹಾದಿಗೆ ಹೋಗುತ್ತಿರುವ ನೀತಿಯೇನು ! ಹಣಸಂಪಾದನೆಗೆ ಒಂದು ಮಿತಿಯೇ ಇಲ್ಲವೆ ಯದ್ವಾ ತದ್ವಾ ಒಮ್ಮೆಗೇ ಮುಗಿಲೇರಲು ಅನುಕೂಲವಾಗುವಂತೆ ಇಂದಿನ ಕೋಟಾ ಪದ್ಧತಿಗಳು ಹಾವಳಿ ಮಾಡುತ್ತಿರುವುದರಿಂದ ಇದು ಸಮಾಜವಾದವೇ ಎಂದು ನಾನು ಎಲ್ಲಿ ಕೇಳಬೇಕಾಗಿದೆ. ಕೋಟಾ ವ್ಯಾಪಾರ ಇಷ್ಟು ಚೆನ್ನಾಗಿ ಬೆಳೆಯುತ್ತಿದ್ದರೂ ಇದನ್ನು ತಡೆಗಟ್ಟಲು ಸರಕಾರ ಯಾವ ಕ್ರಮವನ್ನೂ ಮಾಡದೇ ಇರುವುದು ತುಂಬಾ ಶೋಚನೀಯ. ಇದನ್ನೆಲ್ಲಾ ನೋಡಿದರೆ ಇಂದು ರಾಜ್ಯದ ಸರಕಾರ ಕಾರ್ಮಿಕರ ಹಿತಸಾಧನೆಯನ್ನು ಮಾಡಿದಂತಾಯಿತೇ ?

ಇನ್ನು ಇಲ್ಲಿ ಸರಕಾರದವರು ರಾಜ್ಯದ ಸರಕಾರಿ ನೌಕರರುಗಳಿಗೆ ತುಟ್ಟಿಭತ್ಯವನ್ನು ಹೆಚ್ಚು ಮಾಡಿದ್ದೇವೆ ಎಂದು ಭುಜವನ್ನು ಚಪ್ಪರಿಸಿಕೊಂಡು ಬಹಳವಾಗಿ ಇಲ್ಲಿ ಹೇಳಿದರು. ಒಟ್ಟಿನಲ್ಲಿ ಸರಕಾರದವರು ತಮ್ಮ ನೌಕರರುಗಳಿಗೆ ಸೌಕರ್ಯ ಮಾಡಲು ಹೊರಟ್ಟಿದ್ದೇನೋ ಸರಿ. ಆದರೆ ಅದೇ ರೀತಿ ಇಂದು ಇತರ ಬಡ ಜನರು ಕೆಲಸ ಮಾಡುವಂತಹ ಸಂಸ್ಥೆಗಳ ಬಗ್ಗೆ ಯಾವ ವಿಚಾರವನ್ನೂ ಇದರಲ್ಲಿ ಹೇಳಲಿಲ್ಲ. ಇವೊತ್ತಿನ ದಿವಸ ಒಬ್ಬ ಸಾಮಾನ್ಯ ಜನ ಒಂದು ಖಾಸಗೀ ಸಂಸ್ಥೆಯಲ್ಲಿದ್ದು ಕೆಲಸ ಮಾಡುವಾಗ ಅವನಿಗೆ ಬರುವ ಪಗಾರದಿಂದ ಇಂದು ಅವನು ಜೀವನ ನಡೆಸಲಿಕ್ಕೆ ಸಾಧ್ಯವೇ ಎನ್ನುವುದನ್ನು ಯಾರೂ ವಿಚಾರ ಮಾಡುತ್ತಿಲ್ಲ. ಸಾಮಾನ್ಯ ಬಡಜನರ ಸ್ಥಿತಿಯನ್ನು ತಿಳಿದುಕೊಂಡು ಕೆಲಸ ಮಾಡುವುದರ ಕಡೆಗೆ ಸರಕಾರ ಗಮನ ಕೊಡುತ್ತಿಲ್ಲ. ಸಾಮಾನ್ಯವಾಗಿ ಒಂದು ಕಿರಾಣಿ ಅಂಗಡಿ ನಮ್ಮ ಹುಬ್ಬಳ್ಳಿಯಲ್ಲಿರುವವನ ಸ್ಥಿತಿ ನೋಡಿದರೆ ಅವನಿಗೆ ಪಗಾರ ತಿಂಗಳಿಗೆ 60 ರೂಪಾಯಿ ಬರುತ್ತದೆ. ಇವನು ಇಂದಿನ ಕಷ್ಟಪರಿಸ್ಥಿತಿಯಲ್ಲಿ ಜೀವನ ಮಾಡಲು ಸಾಧ್ಯವೇ ಇವನ ಕಷ್ಟನಷ್ಟಗಳೇನು ? ಇವನ ರೀತಿ ನೀತಿಗಳೇನು ಎನ್ನುವುದರ ಕಡೆಗೆ ಯಾವ ಸರಕಾರವೂ ಲಕ್ಷ್ಯ ಕೊಡುತ್ತಿಲ್ಲ. ಇದರ ಬಗ್ಗೆ ವಿಚಾರ ಮಾಡುವ ಪರಿಸ್ಥಿತಿ ಇದೀಗ ಬಂದಿದೆ. ಜನಸಾಮಾನ್ಯರ ಕಷ್ಟನಷ್ಟಗಳನ್ನು ಅರಿತುಕೊಂಡು ಕೆಲಸ ಮಾಡಬೇಕು. ಇವೊತ್ತೇನೋ ಪ್ರೊಹಿಬಿಷನ್ ತೆಗೆದುಬಿಟ್ಟೆವು ಇದರಿಂದ ಸರಕಾರಕ್ಕೆ ಬೇಕಾದಷ್ಟು ಉತ್ಪನ್ನ ಬಂತು. ಇದರಿಂದ ದೊಡ್ಡ ದೊಡ್ಡ ಬಂಡವಾಳಷಾಹಿ ಜನರಿಗೆ ಅನುಕೂಲ ಮಾಡಲು ಸರಕಾರಕ್ಕೆ ಅವಕಾಶವಾಯಿತು. ಆದರೆ ಹೆಚ್ಚು ಸೇಂದಿ ಹಾಗೂ ಸಾರಾಯಿ ಕುಡಿಯುವ ಬಡ ಜನರಿಗೆ ಬಹಳ ತೊಂದರೆಗಳಾಗುತ್ತಿವೆ. ಇದನ್ನು ಯಾರೂ ಕಂಡುಹಿಡಿಯುವುದಕ್ಕೆ ಸಾಧ್ಯವಿಲ್ಲ. ಇಂದು ಹರಾಜು ಮಾಡುವಾಗ ಸಣ್ಣ ಸಣ್ಣ ಉದ್ಯಮಿಗಳು ಬರಲು ಅನುಕೂಲವಾಗುವಂತೆ ಮಾಡಲಿಲ್ಲ. ಬರೀ ದೊಡ್ಡ ದೊಡ್ಡ ವರ್ತಕರಿಗೆ ಅನುಕೂಲವಾಗುವಂತೆ 10 ಲಕ್ಷ, 20 ಲಕ್ಷ ಹಾಗೂ 30 ಲಕ್ಷ ಹಣವನ್ನು ಇಟ್ಟುಕೊಂಡು ವ್ಯಾಪಾರ ಮಾಡುವ ದೊಡ್ಡ ಉದ್ಯಮಿಗಳಿಗೆ ಹಾಗೂ ಶ್ರೀಮಂತರಿಗೆ ಅನುಕೂಲವಾಗಲೆಂದು ಇಂತಹ ಹರಾಜುಗಳನ್ನು ಮಾಡಿ ಹೆಚ್ಚು ಹಣ ಸಂಪಾದನೆಯನ್ನು ಸರಕಾರ ಮಾಡಿಕೊಂಡಿತು. ಇದರಿಂದ ಸಾಮಾನ್ಯ ಮನುಷ್ಯನಿಗೇನೂ ಲಾಭವಾಗಲಿಲ್ಲ ಎಂದು ಸ್ಪಷ್ಟವಾಗಿ ಹೇಳಬೇಕಾಗಿದೆ. ಮೊದಲಿಗೆ ಇಲ್ಲಿ ಸೇಂದಿ ಗಿಡಗಳೇ ಇಲ್ಲ. ಎಲ್ಲಿಂದ ಸೇಂದಿ ತರುವುದು ಎನ್ನುವುದರ ಕಡೆಗೆ ಯಾರೂ ಲಕ್ಷ್ಯ

(ಶ್ರೀ ಎಸ್. ಎಸ್. ಶೆಟ್ಟರ್)

ಕೊಡುತ್ತಿಲ್ಲ. ಹುಬ್ಬಳ್ಳಿಯಂತಹ ಒಂದೂರಿಗೇ ಸುಮಾರು ಒಂದು ದಿವಸಕ್ಕೆ 2,000 ಬಾಟಲುಗಳು ಬೇಕು. ಇದನ್ನು ಕಂಟ್ರಾಕ್ಟರು ಹೇಗೆ ತುಂಬಬೇಕು ಎನ್ನುವುದನ್ನು ಯಾರಾದರೂ ನೋಡಿದರೆ ಆಗ ಇದರ ವಿಚಾರಗಳು ಗೊತ್ತಾಗುತ್ತವೆ. ಕಂಟ್ರಾಕ್ಟರುಗಳು ಇದಕ್ಕೆ ಬೇಕಾಗುವ ಸೇಂದಿಯನ್ನು ಎಲ್ಲಿಂದರೋ ತಂದು ಬಾಟಲುಗಳನ್ನು ಮಾಡಿ ಮಾರುತ್ತಾರೆ. ಇದರಿಂದ ಎಷ್ಟೋ ಜನರು ಸಾಯುತ್ತಿದ್ದಾರೆ. ಈಚೆಗೆ ಇಂತಹ ಮಾದಕ ದ್ರವ್ಯಗಳ ಸೇವನೆಯಿಂದಾಗಿ ಬಳ್ಳಾರಿಯಲ್ಲಿ ಸುಮಾರು 12 ಜನ ಸತ್ತರು ಎನ್ನುವುದು ಎಲ್ಲರಿಗೂ ತಿಳಿದಿರುವ ವಿಚಾರ. ಹುಬ್ಬಳ್ಳಿಯಲ್ಲೂ ಕೂಡ ಇಂತಹ ಅಕ್ರಮ ಸೇಂದಿ ಕುಡಿದು ಒಬ್ಬರು ಸತ್ತರು. ಹೀಗೆ ನೀವು ಸಾರಾಯಿ ಎಂದು ಜನಕ್ಕೆ ಕುಡಿಸಿ ಸಾಯಿಸುತ್ತಿದ್ದೀರಿ. ಇವರ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಳ್ಳುತ್ತಿಲ್ಲ. ಇದರಿಂದ ಜನರ ಹಿತವನ್ನು ಸಾಧಿಸಿದಂತಾಯಿತೇ ಎಂದು ನಾನು ಇಲ್ಲಿ ಕೇಳುತ್ತಿದ್ದೇನೆ. ಈಗ ಒಂದಕ್ಕೆ ಒಂದೂವರೆ ಯಷ್ಟು ಸಾರಾಯಿಮಾಡಿ ಕುಡಿಯಲಿಕ್ಕೆ ಜನರಿಗೆ ಕೊಡುತ್ತಿದ್ದಾರೆ. ಇದರ ಬಗ್ಗೆ ಸರಿಯಾದ ಕ್ರಮ ಗಳನ್ನು ಸರಕಾರ ತೆಗೆದುಕೊಂಡು ಪ್ರಯತ್ನ ಮಾಡುತ್ತಿಲ್ಲ. ಇದರ ಬಗ್ಗೆ ಜನರ ವಿರೋಧವಿದೆ ಎಂದು ಹೇಳುತ್ತಿದ್ದರೂ ಬಡ ಜನಕ್ಕೆ ಹೆಚ್ಚು ಸೇಂದಿಯನ್ನು ಈ ರೀತಿಯಾಗಿ ಕುಡಿಸಲಿಕ್ಕೆ ಹತ್ತಿದ್ದಾರೆ. ಇದರಿಂದ ಹೆಚ್ಚು ಹಣ ಸರಕಾರಕ್ಕೆ ಬರುತ್ತದೆ ಎಂದು ಇದ್ದರೂ ಇದರಿಂದ ಜನರ ಹಿತವನ್ನು ಸರಕಾರ ಸಾಧಿಸಿದಂತಾಗಲಿಲ್ಲ. ಇದರಿಂದ ಜನರಿಗೆ ಹೆಚ್ಚು ಅಹಿತ ಮಾಡಲಿಕ್ಕೆ ಹೊರಟಿದ್ದಾರೆ. ಹನ್ನೊಂದು ಕೋಟಿ ರೂಪಾಯಿ ಉತ್ಪತ್ತಿ ಬರುತ್ತದೆ ಎಂದು ನೀವು ಡುಬ್ಬ ಚಪ್ಪರಿಸಿಕೊಳ್ಳುತ್ತೀರಿ. ಒಂದೊಂದೇ ಹೆಂಡದ ಅಂಗಡಿ ಹರಾಜು ಮಾಡಿದ್ದರೆ ಇದರ ಎರಡರಷ್ಟು ಉತ್ಪತ್ತಿ ಬರುತ್ತಿತ್ತು. ಅನೇಕ ಕಡೆ ಶಾಲೆಯ ಪಕ್ಕದಲ್ಲಿಯೇ ಹೆಂಡದ ಅಂಗಡಿಗಳಿವೆ. ಇದರಿಂದ ಶಾಲೆಗೆ ಹೋಗತಕ್ಕಂಥ ಮಕ್ಕಳ ಮನಸ್ಸಿನ ಮೇಲೆ ಏನು ಪರಿಣಾಮವಾಗುತ್ತದೆ ಇದನ್ನು ಯೋಚನೆ ಮಾಡಬೇಕು. ಕುಡಿದು ನಿಶೆಯಲ್ಲಿ ಮಾತನಾಡುವ ಮಾತು ಕೇಳಿ ಹುಡುಗರು ಮಜಾ ಮಾಡುತ್ತಾರೆ. ಇದು ಅನಿಷ್ಟ ಪರಿಣಾಮ ಉಂಟುಮಾಡುತ್ತದೆ. ಆದುದರಿಂದ ಸಾರಾಯಿ ಅಂಗಡಿಗಳನ್ನು ಊರ ಹೊರಗೆ ಅಥವಾ ಊರು ಬಿಟ್ಟು ದೂರ ಇರುವ ಹಾಗೆ ವ್ಯವಸ್ಥೆ ಮಾಡುವುದು ಅಗತ್ಯ, ಇದರಿಂದ ಜನರ ಕಲ್ಯಾಣವಾಗುತ್ತದೆ. ಇದಲ್ಲದೆ ಅಂಗಡಿ ತೆರೆದು ಇಡುವುದಕ್ಕೂ ಒಂದು ನಿರ್ಬಂಧ ಇರಬೇಕು. ಯಾಕೆಂದರೆ ಹೆಂಡದ ಅಂಗಡಿಗಳನ್ನು 24 ಗಂಟೆ ತೆರೆದಿಡುತ್ತಾರೆ. ಆದುದರಿಂದ ಕಾಲ ನಿರ್ಬಂಧ ಹಾಕಬೇಕು. ಕಲಘಟಗಿ ತಾಲ್ಲೂಕಿನಲ್ಲಿ ಒಂದು ಕಡೆ ಒಬ್ಬ ಪೋಲೀಸ್ ಅಧಿಕಾರಿಯು ಕುಡಿದು ನಿಶೆಯಲ್ಲಿ ಏನೇನೋ ಮಾಡಿದನು. ಅದು ಅವನಿಗೇ ಗೊತ್ತಾಗಲಿಲ್ಲ. ನೀರು ತರಲು ಹೋಗುವ ಹೆಣ್ಣುಮಕ್ಕಳ ಮೇಲೆ ಕೈ ಮಾಡಿದನು ಎಂದು ತಿಳಿದುಬಂದಿದೆ. ಈ ರೀತಿಯಾಗುವುದಾದರೆ ದೇಶದಲ್ಲಿ ಲಾ ಅಂಡ್ ಆರ್ಡರ್ ಉಳಿದಿದೆಯೇ ಎಂಬುದಕ್ಕೆ ಎಚ್ಚರಿಕೆ ಕೊಡುತ್ತೇನೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ (ಧಾರವಾಡ-ರೂರಲ್).—ಏನು ಮಾಡಿದೆ ಎಂದು ಎಚ್ಚರ ವಿರದಿದ್ದರೆ ಅದು ಅವನಿಗೆ ಹೇಗೆ ಗೊತ್ತಾಯಿತು ?

ಶ್ರೀ ಎಸ್. ಎಸ್. ಶೆಟ್ಟರ್.—ಎಚ್ಚರಿಕೆ ಬಂದ ಮೇಲೆ ಅವನಿಗೆ ಹೇಳಲು ಅವನು ತನ್ನ ತಪ್ಪು ಒಪ್ಪಿಕೊಂಡನು. ಆದುದರಿಂದ ಹೆಂಡದಿಂದ ಆಗುವ ಅನಾಹುತ ತಪ್ಪಿಸಬೇಕಾಗಿದೆ. ಇಲ್ಲದಿದ್ದರೆ ದೊಡ್ಡ ಅನಾಹುತವಾಗುತ್ತದೆ. ಇನ್ನು ಮುಂದೆ ದೇಶಕ್ಕೆ ಒಳ್ಳೇ ಕಾಲ ಇಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ.

ನನಗೆ ಮಾತನಾಡಲು ಕಾಲಾವಕಾಶ ಹೆಚ್ಚು ಇಲ್ಲದೇ ಇರುವುದರಿಂದ ಒಂದು ಮಾತನ್ನು ಸೂಕ್ಷ್ಮವಾಗಿ ಹೇಳಲು ಪ್ರಯತ್ನ ಮಾಡುತ್ತೇನೆ. ಆರ್ಥಿಕ ಮಂತ್ರಿಗಳು ಬಜೆಟ್ ಭಾಷಣದಲ್ಲಿ ಒಂದು ಮಾತು ಹೇಳಿದ್ದಾರೆ. ಕೇಂದ್ರ ಸರಕಾರ ಕೊಡುವ ಡಿ. ಎ. ಮಟ್ಟಕ್ಕೆ ಇಲ್ಲಿಯ ನೌಕರರಿಗೆ ಕೊಡುವ ಡಿ. ಎ. ಹೆಚ್ಚು ಮಾಡಿರುವುದರಿಂದ ನಮ್ಮ ಆರ್ಥಿಕ ಪರಿಸ್ಥಿತಿ ಬಹಳ ಗಂಭೀರವಾಯಿತು ಎಂದು. ಇಂದಿನ ನೌಕರರ ಆರ್ಥಿಕ ಪರಿಸ್ಥಿತಿ ಗಂಭೀರವಾಗಿರುವುದರಿಂದ ಡಿ. ಎ. ಕಡಿಮೆ ಇರುವುದನ್ನು ಹೆಚ್ಚು ಮಾಡಬೇಕು ಎಂದು ತೀರ್ಮಾನ ತೆಗೆದುಕೊಳ್ಳಲಾಯಿತೇ ಇಲ್ಲವೇ ಡಿ. ಎ. ಹೆಚ್ಚು ಮಾಡುವುದರಿಂದ ಪರಿಸ್ಥಿತಿ ಗಂಭೀರವಾಯಿತೇ? ಇಂದು ಗಗನಕ್ಕೆ ಏರಿದ ಬೆಲೆಯಿಂದ ನೌಕರರಿಗೆ ಪ್ರಪಂಚ ನಡೆಸಲಿಕ್ಕೆ ಸಾಧ್ಯವಿಲ್ಲದಂತಾಗಿದೆ. ಅದಕ್ಕಾಗಿ ಡಿ. ಎ. ಹೆಚ್ಚು ಮಾಡಿ ಎಂದು ಅವರು ಕೇಳಿದ್ದಾರೆ. ಕೆಟ್ಟ ಪರಿಸ್ಥಿತಿ ಮೂಲಕ ಡಿ. ಎ. ಹೆಚ್ಚು ಮಾಡಬೇಕಾಗಿದೆ. ಇಂದಿನ ಪರಿಸ್ಥಿತಿ ಹದಗೆಟ್ಟು ಹೋಗಿದೆ. ಆದರೆ ನಿಜ ಪರಿಸ್ಥಿತಿಯನ್ನು ವಿಪರ್ಯಾಸ್ತವಾಗಿ ಹೇಳಿದ್ದಾರೆ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ.

ಇನ್ನು ಪೋಲೀಸ್ ಖಾತೆಯ ವಿಷಯ. ಪೋಲೀಸರು ತಮ್ಮ ಕರ್ತವ್ಯ ಮಾಡಲಿ ಅಥವಾ ಮಾಡದೇ ಇರಲಿ ಇದರ ಬಗ್ಗೆ ಮೇಲಧಿಕಾರಿಗಳು ಜವಾಬ್ದಾರರಾಗಿದ್ದಾರೆ. ಅನೇಕ ಅಸಮಾಧಾನ

ಕರ ಘಟನೆಗಳು ನಡೆದಿವೆ. ಎಷ್ಟೋ ಘಟನೆಗಳ ಮೂಲಕ ಐ. ಜಿ. ಪಿ. ಅವರು ರಾಜೀನಾಮೆ ಕೊಡತಕ್ಕಂಥ ಪರಿಸ್ಥಿತಿ ಬಂದಿದೆ. ಮೇಲಧಿಕಾರಿಗಳು ಬೇಜವಾಬ್ದಾರಿಯಿಂದ ಏತಕ್ಕೆ ಈ ರೀತಿ ಮಾಡಿದರು ಎನ್ನುವುದಕ್ಕೆ ಸರಕಾರ ಏನಾದರೂ ಕ್ರಮ ತೆಗೆದುಕೊಳ್ಳುತ್ತಾರೆಯೇ? ಪೋಲೀಸರು ಮೇಲಧಿಕಾರಿಗಳಿಗೆ ಹೇಳಿದಂತೆ ಸರಕಾರ ಕೆಲಸ ಮಾಡುತ್ತದೆಯೇ? ಇದರ ಬಗ್ಗೆ ಸರಕಾರದ ನೀತಿ ಏನು? ವಿದ್ಯಾರ್ಥಿಗಳ ಚಳವಳಿಯಲ್ಲಿ ಆಂಟಿ ಸೋಷಿಯಲ್ ಎಲಿಮೆಂಟ್ಸ್ ಸೇರಿ ದುರ್ಲಾಭ ಪಡೆದರು ಎಂದು ಹೇಳುತ್ತಾರೆ. ಹಾಗಾದರೆ ಈ ಚಳುವಳಿಯಲ್ಲಿ ಅಂಟಿ ಸೋಷಿಯಲ್ ಎಲಿಮೆಂಟ್ಸ್ ಎಷ್ಟು ಜನ ಸಿಕ್ಕರು? ಈ ಚಳುವಳಿ ಬಗ್ಗೆ ನೋಡುವಾಗ ಪೋಲೀಸ್ ಇಲಾಖೆಯವರು ಕಪ್ಪು ಗ್ಲಾಸಿನಲ್ಲಿ ನೋಡಿದ್ದಾರೆ. ಅಂಥ ಕರೀ ಗ್ಲಾಸ್‌ನಲ್ಲಿ ನೋಡುವುದನ್ನು ತೆಗೆದು ಹಾಕಿದ್ದರೆ ಒಳ್ಳೆಯದಾಗಿತ್ತು. ಇವರಿಗೆ ಎಲ್ಲರೂ ಆಂಟಿ ಸೋಷಿಯಲ್ ಆಗಿ ಕಾಣುತ್ತಾರೆ. ನೀವಷ್ಟೇ ಸೋಷಿಯಲ್ ಎಲಿಮೆಂಟ್ಸ್ ಎಂದು ಹೇಳುವುದರಿಂದ ಅನ್ಯಾಯವಾಗುತ್ತದೆ. ಯಾವುದು ಸೋಷಿಯಲ್ ಎಲಿಮೆಂಟ್ಸ್ ಎಂದು ಕರೆಯುವುದು? ಮುಖ್ಯವಾಗಿ ನಿಮ್ಮ ದುರ್ನೀತಿಯಿಂದ ಇಂಥ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಆದುದರಿಂದ ಪೋಲೀಸ್ ಎಕ್ಸೆಸಸ್ ಮೊದಲು ನಿಲ್ಲಬೇಕು.

ಇಂದು ದೇಶದಲ್ಲಿ ಪರಕೀಯ ಮನೋಭಾವ ಬೆಳೆಯುತ್ತಿರುವುದು ಕಂಡುಬರುತ್ತದೆ. ಪರಕೀಯ ಮನೋಭಾವ ಜಾತೀಯ ಸ್ವರೂಪ ಇವು ದೇಶಕ್ಕೆ ಒಳ್ಳೆಯದಲ್ಲ. ಇಂದು ದೇಶದಲ್ಲಿರತಕ್ಕ ಸಂಪತ್ತನ್ನು ನ್ಯಾಷನಲೈಜ್ ಮಾಡಬಹುದು. ಆದರೆ ಸಂಕುಚಿತ ಮನೋಭಾವನೆಯಿಂದ ಇದನ್ನು ಮಾಡದೇ ಇದ್ದರೆ ದೇಶ ಬೆಳೆದೀತು ದೇಶ ಉಳಿದೀತು ಎಂದು ಹೇಳಿ ನನ್ನ ಭಾಷಣ ಮುಗಿಸುತ್ತೇನೆ.

ಶ್ರೀ ಆರ್. ಮುನಿಸ್ವಾಮಯ್ಯ (ಆನೇಕಲ್).—ಸ್ವಾಮಿ, ಮಾರ್ಚ್ ಒಂದನೇ ತಾರೀಖಿನ ದಿನ ಈ ಮಾನ್ಯ ಸಭೆಯಲ್ಲಿ ನಮ್ಮ ರಾಜ್ಯದ ಅರ್ಥ ಮಂತ್ರಿಗಳಾದ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮಾಡಿರತಕ್ಕ ಬಜೆಟ್ ಭಾಷಣದ ವಿಷಯದಲ್ಲಿ ನಾನು ಅನುಮೋದನೆ ಮಾಡುವುದ ಕ್ಕೋಸ್ಕರ ಮಾತನಾಡಲು ನಿಂತಿದ್ದೇನೆ. ಮೊದಲನೆಯದಾಗಿ ಅವರಿಗೆ ಸಂಪೂರ್ಣವಾಗಿ ಹೃತ್ಪೂರ್ವಕವಾಗಿ ವಂದಿಸುತ್ತೇನೆ. ಇದಕ್ಕೆ ಕಾರಣವೇನು ಅಂದರೆ ಅನೇಕ ವರ್ಷಗಳಿಂದ ಇದುವರೆಗೆ ನಮ್ಮ ಮೈಸೂರು ರಾಜ್ಯದ ಬಜೆಟ್ಟು ಕೊರತೆ ಬಜೆಟ್ಟು ಆಗುತ್ತಿತ್ತು. ಆದರೆ ಈ ಸಲ ಮಾತ್ರ ಆರ್ಥಿಕ ಶಾಖೆಯವರು ಕೈ ಬಿಗಿ ಹಿಡಿದು ಉಳಿತಾಯದ ಬಜೆಟ್ ಮಂಡಿಸಿದ್ದಾರೆ. ಈ ವರ್ಷ ಅವರು ಉಳಿತಾಯದ ಬಜೆಟ್ಟು ಮಂಡಿಸಿರತಕ್ಕದ್ದು ಸಂತೋಷಕರ ವಿಷಯ ಆದುದರಿಂದ ಅವರನ್ನು ವಂದಿಸುತ್ತೇನೆ.

ಮುಂದಿನ ವರ್ಷದ ನಮ್ಮ ರಾಜ್ಯದ ಆದಾಯ 194.74 ಕೋಟಿ ರೂಪಾಯಿ, 182.76 ಕೋಟಿ ರೂಪಾಯಿ ವೆಚ್ಚ ಹಾಗು 11.98 ಕೋಟಿ ಉಳಿತಾಯ ಹೀಗೆ ಅಂಕಿ ಅಂಶಗಳನ್ನು ತೋರಿಸಿದ್ದಾರೆ. ಸಾಧಾರಣವಾಗಿ ಉಳಿತಾಯದ ಬಜೆಟ್ಟನ್ನು ಹೇಗೆ ತೋರಿಸಿದ್ದಾರೆ ಎಂದು ಜನಗಳಿಗೆ ಆಶ್ಚರ್ಯವಾಗಿದೆ. ಯಾಕೆಂದರೆ ಹಣಕಾಸಿನ ಬಗ್ಗೆ ಕೊರತೆ ಇದೆ. ಜನಗಳು ತಾಪತ್ರಯದಲ್ಲಿ ಇದ್ದಾರೆ ಆದರೂ ಕೂಡ ಕೊರತೆ ಬಜೆಟ್ಟು ತೋರಿಸದೆ ಉಳಿತಾಯದ ಬಜೆಟ್ಟು ಹೇಗೆ ತೋರಿಸಿದ್ದಾರೆ ಎಂದು ಜನ ಆಡುತ್ತಿದ್ದಾರೆ. ಆದರೆ ಆರ್ಥಿಕ ಮಂತ್ರಿಗಳು ವಿಪುಲವಾಗಿ ಯೋಚನೆಮಾಡಿ ಆರ್ಥಿಕ ಪರಿಸ್ಥಿತಿಯನ್ನು ಚೆನ್ನಾಗಿ ತಿಳಿದುಕೊಂಡು ಈ ಬಜೆಟ್ಟನ್ನು ನಮ್ಮ ಮುಂದೆ ಇಟ್ಟಿದ್ದಾರೆ. ನಮ್ಮ ದೇಶದ ಆರ್ಥಿಕ ಪರಿಸ್ಥಿತಿ ಬಹಳ ಸುಧಾರಿಸಿದೆ, ಭದ್ರವಾಗಿದೆ ಎನ್ನುವುದನ್ನು ಈ ಬಜೆಟ್ಟಿನಲ್ಲಿ ಅವರು ತೋರಿಸಿದ್ದಾರೆ.

ಎಲ್ಲಕ್ಕಿಂತ ಹೆಚ್ಚಾಗಿ ಈ ಬಜೆಟ್ಟಿನಲ್ಲಿ ನಾವು ಕಾಣಬೇಕಾದುದು ಹಾಗು ಕಾಣಿಸ ತಕ್ಕಂಥಾದ್ದು ಅಂದರೆ ಸರಕಾರಿ ನೌಕರರಿಗೆ ಕೇಂದ್ರ ಸರಕಾರ ನಿಗದಿಮಾಡಿರುವ ತುಟ್ಟಿ ಭತ್ಯವನ್ನು ಕೊಟ್ಟು, ಅವರನ್ನು ಬಹುಮಟ್ಟಿಗೆ ಸಂತೋಷಪಡಿಸಿದ್ದಾರೆ. ಎಲ್ಲರಿಗೆ ಇರತಕ್ಕ ಕೊರತೆ ಈ ಹೆಚ್ಚಿನ ತುಟ್ಟಿಭತ್ಯದಿಂದ ಸರಿಹೋಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಆದರೆ ಇದರಿಂದ ಎಲ್ಲರಿಗೂ ಸಂತೋಷವಾಗಬೇಕೆಂದು ಹೇಳದೆ ವಿಧಿಯಿಲ್ಲ. ಈ ನಮ್ಮ ಸರಕಾರವು ನಮ್ಮಲ್ಲಿ ಇರತಕ್ಕಂಥ ಆದಾಯವನ್ನು ಪರಿಶೀಲನೆಮಾಡಿ ಕೇಂದ್ರ ಸರಕಾರದ ಮಟ್ಟಕ್ಕೆ ತುಟ್ಟಿ ಭತ್ಯವನ್ನು ಇಲ್ಲಿಯ ನೌಕರರಿಗೆ ಕೊಟ್ಟಿರುವುದು ನಿಜವಾಗಿಯೂ ಅಭಿನಂದನೀಯವಾದುದು ಎಂದು ಹೇಳುತ್ತೇನೆ.

ಭೂಕಂದಾಯವನ್ನು ಹೋದ ವರ್ಷ ತೆಗೆದುಹಾಕುತ್ತೇವೆ ಎಂದು ಹೇಳಿದ್ದರು. ಜನ ಸಾಮಾನ್ಯರು ಭೂಕಂದಾಯವನ್ನು ತೆಗೆದುಹಾಕಬೇಡಿ, ಅದಕ್ಕೆ ಬದಲಾಗಿ ಜಾರಿಗೆ ತರಬೇಕೆಂದಿರುವ ವ್ಯವಸಾಯದ ತೆರಿಗೆಯ ಲೆಕ್ಕವನ್ನು ಸರಿಯಾಗಿ ಇಡುವುದಕ್ಕಾಗುವುದಿಲ್ಲ ಮತ್ತು ಲೆಕ್ಕವನ್ನು ಬರೆಯುವವರೂ ಸಾಕಷ್ಟು ಪ್ರಾಮಾಣಿಕತೆಯಿಂದ ಬರೆಯುತ್ತಾರೆಂದು ಹೇಳುವುದ

ಕ್ಕಾಗುವುದಿಲ್ಲ ಎನ್ನುವ ಭಯವನ್ನು ಸರ್ಕಾರಕ್ಕೆ ನಿವೇದನೆ ಮಾಡಿದ್ದಕ್ಕಾಗಿ ಭೂಕಂದಾಯವನ್ನು ಹಾಗೆಯೇ ಇಟ್ಟುಕೊಂಡಿದ್ದಾರೆ. ಇದು ಅಭಿನಂದನೀಯವಾದ ವಿಚಾರ ಎಂದು ಹೇಳಬಯಸುತ್ತೇನೆ.

ನಮ್ಮ ರಾಜ್ಯ ಸರ್ಕಾರಕ್ಕೆ ಅನೇಕ ಇಲಾಖೆಗಳಿಂದ ಆದಾಯ ಬರುತ್ತದೆ ಎನ್ನುವುದನ್ನು ಸೂಕ್ಷ್ಮವಾಗಿ ಪ್ರಸ್ತಾಪ ಮಾಡಿದ್ದಾರೆ. ಈ ಆದಾಯ ಬರುವುದನ್ನು ಯಾವ ರೀತಿ ವೆಚ್ಚ ಮಾಡುತ್ತೇವೆ ಎನ್ನುವುದನ್ನೂ ಅರ್ಥ ಸಚಿವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಇದುವರೆಗೂ ಮಾತನಾಡಿದ ಕೆಲವು ಸ್ನೇಹಿತರು ಖರ್ಚುಮಾಡತಕ್ಕ ವಿಧಾನವನ್ನು ಬಹಳಮಟ್ಟಿಗೆ ಸಂಶಯದಿಂದ ನೋಡುವ ಹಾಗೆ ಹೇಳಿದರು. ಖರ್ಚುಮಾಡತಕ್ಕ ವಿಧಾನ ಆಯಾ ಇಲಾಖೆ ಅಧಿಕಾರಿಗಳು ಯಾವ ರೀತಿ ಮಾಡುತ್ತಾರೆಂದು ನಾವೂ ಅದನ್ನು ನಿರೀಕ್ಷಣೆ ಮಾಡಿ, ಪರಿಶೀಲನೆ ಮಾಡಿ ಅವುಗಳ ಮೇಲೆ ಒಂದು ವಿಧವಾದ ಕಾವಲನ್ನು ಇಡುವ ರೀತಿಯಲ್ಲಿ ಇಡುತ್ತೇವೆ. ನಾವು ಎಚ್ಚರಿಕೆಯಿಂದ ಇದ್ದ ಪಕ್ಷದಲ್ಲಿ ನಮ್ಮ ಅಧಿಕಾರಿಗಳೂ ಎಚ್ಚರಿಕೆಯನ್ನು ವಹಿಸಿ ಅವರಿಗೆ ವಹಿಸತಕ್ಕ ಹಣವನ್ನು ಆಯಾ ಇಲಾಖೆಗಳಲ್ಲಿ ವಿಚಕ್ಷಣೆಯಿಂದ, ಜನೋಪಯೋಗವಾಗುವ ರೀತಿಯಲ್ಲಿ ವೆಚ್ಚ ಮಾಡಬಲ್ಲರು ಎನ್ನುವುದನ್ನು ಅನುಭವದಿಂದ ನಾವು ಕಂಡಿದ್ದೇವೆ. ಅವರೂ ಸಹ ಮುಂದಿನ ಮಾರ್ಚಿ ತಿಂಗಳವರೆಗೆ ಒದಗಿಸಿರತಕ್ಕ ಹಣವನ್ನು ಉಪಯೋಗಕರವಾಗಿ ಖರ್ಚುಮಾಡುವಂತೆ ಎಚ್ಚರಿಕೆಯನ್ನು ವಹಿಸುವಂತೆ ಈ ಸಭೆಯ ಎಲ್ಲ ಸದಸ್ಯರೂ ಕಾವಲು ಇರಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಕೇಂದ್ರ ಸರ್ಕಾರದವರು ನಮಗೆ ಪುರಸ್ಕೃತವಾದ ಯೋಜನೆಗಳಲ್ಲಿ ರಾಜ್ಯದ ಅಂಶವನ್ನೂ ಸಹ ಸೇರಿಸಿಕೊಂಡು ರಾಜ್ಯದ ಕಾರ್ಯಗಳಿಗೆ, ಆ ಯೋಜನೆಗೆ ತಕ್ಕಂತೆ ಹಣವನ್ನು ಹಂಚಿದ್ದಾರೆ. ಅದನ್ನು ಕೂಡ ನಮ್ಮ ಅರ್ಥ ಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಅದು ಪಟ್ಟಿಯಲ್ಲಿಯೂ ಮತ್ತು ಅವರ ಭಾಷಣದಲ್ಲಿಯೂ ಇದೆ. ಅದನ್ನು ಈಗ ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ.

ನಮ್ಮ ಅರ್ಥ ಸಚಿವರು ಮಾಡಿದ ಭಾಷಣವನ್ನು ಸಾಧಾರಣ ಜನಕ್ಕೆ, ನಮ್ಮ ದೇಶದ ಎಲ್ಲ ವಿದ್ಯಾವಂತರು ಮತ್ತು ಸಾಧಾರಣವಾದ ಅಕ್ಷರಸ್ಥರು ತಿಳಿಯುವ ಹಾಗೆ ಪತ್ರಿಕೆಗಳವರು ಬಹಳ ಶ್ರದ್ಧೆ ವಹಿಸಿ ವಿಂಗಡಿಸಿದ್ದಾರೆ. ಇಂತಿಂಥ ಬಾಬಿಗೆ ಇಷ್ಟು ಹಣ ಒದಗಿಸಿದ್ದಾರೆ, ಇಂತಿಂಥ ಬಾಬಿನಿಂದ ಇಷ್ಟು ಹಣವನ್ನು ಒದಗಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದಾರೆ ಎನ್ನುವುದನ್ನು ಎಲ್ಲ ಕನ್ನಡ ಪತ್ರಿಕೆಗಳವರೂ, ಇಂಗ್ಲಿಷ್ ಪತ್ರಿಕೆಗಳವರೂ ಬಹಳ ವಿಚಕ್ಷಣೆಯಿಂದ ಕೆಲಸ ಮಾಡಿ ನಮ್ಮ ಮುಂದೆ ಇಟ್ಟಿದ್ದಾರೆ. ಅದಕ್ಕಾಗಿ ನಮ್ಮ ಮಂತ್ರಿಗಳ ಪರವಾಗಿ ಮತ್ತು ಈ ಮಾನ್ಯ ಸಭೆಯ ಪರವಾಗಿ ಪತ್ರಿಕೆಗಳವರನ್ನು ಅಭಿನಂದಿಸುತ್ತೇನೆ.

ಇದುವರೆಗೂ ವಯಸ್ಸಾದವರಿಗೆ ವಿಶ್ರಾಂತಿ ವೇತನವನ್ನು ಕೊಡುತ್ತಿದ್ದರು. ಅದನ್ನು ಯಾವ ಕಾರಣದಿಂದಲೋ ನಿಲ್ಲಿಸಿದ್ದಾರೆ. ಅದನ್ನು ಪುನಃ ಕೊಡಬೇಕೆಂದು ಸಲಹೆ ಮಾಡುತ್ತೇನೆ. ಸರ್ಕಾರಿ ನೌಕರಿಯಲ್ಲಿದ್ದು ವಿಶ್ರಾಂತಿ ವೇತನ ಪಡೆಯುವವರಿಗೆ ಅವರು ಈಗ ಪಡೆಯುತ್ತಿರುವ ತುಟ್ಟಿ ಭತ್ಯದಲ್ಲಿ ಅರ್ಧ ಭಾಗದಷ್ಟು ಹೆಚ್ಚು ಮಾಡಿರುವುದು ಶ್ಲಾಘನೀಯವಾದ ವಿಚಾರವಾಗಿದೆ. ಸರ್ಕಾರಿ ಉದ್ಯೋಗದಲ್ಲಿಲ್ಲದ ವಯಸ್ಸಾದವರಿಗೂ ಕೂಡ ವಾರ್ಧಕ್ಯ ವೇತನವನ್ನು ಕೊಡಬೇಕೆಂದು ಹೇಳುತ್ತೇನೆ.

ವ್ಯವಸಾಯಕ್ಕೆ ಬಹಳ ಉತ್ತೇಜನವನ್ನು ಕೊಡುತ್ತಿದ್ದಾರೆ. ಹೋದ ವರ್ಷ ಮತ್ತು ಅದರ ಹಿಂದಿನ ವರ್ಷ ಕ್ರಮ ಕ್ರಮವಾಗಿ ಸರ್ಕಾರದವರು ಮತ್ತು ನಾವು ಬಹಳ ಉತ್ತೇಜನವನ್ನು ಕೊಡುತ್ತಿದ್ದೆವು. ಇಲ್ಲದೆ ಹೋಗಿದ್ದರೆ ಆಹಾರಕ್ಕಾಗಿ ಸಂಪೂರ್ಣವಾಗಿ ನಾವು ಕೇಂದ್ರವನ್ನೂ ಕೇಂದ್ರದವರು ಪರದೇಶಗಳನ್ನೂ ಅವಲಂಬಿಸಬೇಕಾಗಿತ್ತು. ನಾವು ಕೊಟ್ಟಿರತಕ್ಕ ಪ್ರೋತ್ಸಾಹಕ್ಕಾಗಿ, ವಿದ್ಯುಚ್ಛಕ್ತಿಯನ್ನು ಒದಗಿಸಿರತಕ್ಕ ಉತ್ಸಾಹಕ್ಕಾಗಿ, ಬಾವಿಗಳನ್ನು ತೋಡಿಸುವುದಕ್ಕೆ ಒದಗಿಸಿರುವ ಸಾಲುವಾಗಿ ಹಾಗೂ ನೀರಾವರಿ ಬಾವಿಗಳನ್ನು ತೋಡಿಸುವುದಕ್ಕೆ ಪ್ರೋತ್ಸಾಹವನ್ನು ಕೊಟ್ಟಿದ್ದಕ್ಕಾಗಿ ಅನೇಕ ರೈತರು ನೀರಾವರಿ ಬಾವಿಗಳನ್ನು ತೋಡಿಸಿ, ವಿದ್ಯುಚ್ಛಕ್ತಿ ಪಂಪುಗಳನ್ನು ಉಪಯೋಗಿಸಿ ಹೆಚ್ಚು ಬೆಳೆಯನ್ನು ಬೆಳೆದು, ದೇಶ ಎದುರಿಸಬೇಕಾಗಿದ್ದ ದೊಡ್ಡ ಕ್ಷಾಮವನ್ನು ತಡೆದಿದ್ದಾರೆ. ಅದರಿಂದ ಜನಗಳಿಗೆ ಇರತಕ್ಕ ಆಹಾರದ ಕೊರತೆಯನ್ನು ಕಡಿಮೆ ಮಾಡಿದ್ದಾರೆ ಎನ್ನುವುದು ನಮ್ಮ ಸರ್ಕಾರದ ಹೆಮ್ಮೆ ಎಂದು ನಾನು ಹೇಳುತ್ತೇನೆ.

ವಿದ್ಯುಚ್ಛಕ್ತಿ ನಮ್ಮ ದೇಶದಲ್ಲಿ ಸ್ವಾಭಾವಿಕವಾಗಿ, ನೈಜವಾಗಿ ಶಕ್ತಿಯಿಂದ ಒದಗಿರತಕ್ಕುದು. ಇಂಡಿಯಾ ದೇಶದಲ್ಲಿ ಅಥವಾ ಬೇರೆ ದೇಶಗಳಲ್ಲಿ ಸ್ವಾಭಾವಿಕವಾಗಿ ವಿದ್ಯುಚ್ಛಕ್ತಿ ಒದಗುತ್ತಿಲ್ಲ.

ನಮ್ಮ ದೇಶದ ನದಿಗಳು ವಿದ್ಯುಚ್ಛಕ್ತಿಯನ್ನು ಅಗ್ಗವಾಗಿ ಉತ್ಪಾದನೆ ಮಾಡುವುದಕ್ಕೆ ಸಹಾಯಕವಾಗಿವೆ. ವಿದ್ಯುಚ್ಛಕ್ತಿಯನ್ನು ಸಾಕಾದಷ್ಟು ಮಟ್ಟಿಗೆ ಬೆಳೆಸಬೇಕು, ಕೈಗಾರಿಕೆಗಳನ್ನು ಹೆಚ್ಚಿಸಬೇಕು ಎಂದು ನಾನು ಒತ್ತಾಯದಿಂದ ಹೇಳುತ್ತೇನೆ.

ಕೈಗಾರಿಕೆಗಳಿಗೂ ಸಹ ನಮ್ಮ ಸರ್ಕಾರ ಬಹುಮಟ್ಟಿಗೆ ಪ್ರೋತ್ಸಾಹ ಕೊಟ್ಟಿದೆ. ಅನೇಕ ಕೈಗಾರಿಕೆಗಳಿಗೆ ಸಾಲವನ್ನು ಒದಗಿಸಿದೆ, ಕೆಲವು ಕೈಗಾರಿಕೆಗಳಿಗೆ ಕಾರ್ಪೊರೇಷನ್ ಮಾಡಿ ಪ್ರೋತ್ಸಾಹ ಕೊಡುತ್ತಿದೆ. ಆದರೂ ಕೆಲವು ಕಡೆ ಅನುಮಾನ ಬಂದಿರತಕ್ಕದು ಸಹಜ. ಆಡಳಿತದ ಅಧೀನದಲ್ಲಿರತಕ್ಕ ಎಲ್ಲ ಕೈಗಾರಿಕೆಗಳೂ ನಿರೀಕ್ಷೆ ಮಾಡಿದಷ್ಟು ಲಾಭವನ್ನು ಕೊಡುತ್ತಿಲ್ಲ ಎನ್ನತಕ್ಕದು ಒಪ್ಪತಕ್ಕ ಮಾತೇ ಎಂದು ನಮ್ಮ ಅರ್ಥ ಮಂತ್ರಿಗಳೇ ಒಪ್ಪಿಕೊಂಡಿದ್ದಾರೆ. ಇದರ ಅರ್ಥ, ನಾವೆಲ್ಲರೂ ಎಚ್ಚರಗೊಳ್ಳಬೇಕು. ಸರ್ಕಾರ ಎಚ್ಚರಗೊಂಡಿದ್ದು, ಎಲ್ಲ ಸದಸರೂ ಎಚ್ಚರಗೊಂಡು ಎಷ್ಟು ಲಾಭ ನಿರೀಕ್ಷಣೆ ಮಾಡುತ್ತೇವೊ ಅಷ್ಟು ಲಾಭ ಬಂದಿದೆಯೇ ಅಥವಾ ಇಲ್ಲವೇ, ಇಲ್ಲದೆ ಇದ್ದರೆ ಅದಕ್ಕೆ ಕಾರಣವೇನು ಎಂಬುದನ್ನು ನೋಡಬೇಕು ಎಂದು ಸೂಚಿಸುವುದಕ್ಕೋಸ್ಕರವಾಗಿ ಮಂತ್ರಿಗಳು ಹೀಗೆ ಹೇಳಿದ್ದಾರೆ. ಇದಕ್ಕಾಗಿ ಅವರನ್ನು ನಾನು ಅಭಿನಂದಿಸುತ್ತೇನೆ.

ಸಮಾಜ ಕಲ್ಯಾಣ ಇಲಾಖೆಯನ್ನು ನೋಡಿದರೆ ಅದಕ್ಕೆ ಒದಗಿಸಿರುವ ಹಣ ಸ್ವಲ್ಪ ಕಡಮೆ ಎಂದು ಕಾಣುತ್ತದೆ. ಸಾಕಾದಷ್ಟು ಉಳಿತಾಯವನ್ನು ಬಜೆಟ್ಟನಲ್ಲಿ ತೋರಿಸಿದ್ದಾರೆ. ಇದರಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ಇನ್ನೂ ಸ್ವಲ್ಪ ಹಣವನ್ನು ಒದಗಿಸಿ ಉಳಿತಾಯವನ್ನು ಕಡಿಮೆ ಮಾಡಿದ್ದರೆ ಒಳ್ಳೆಯದಾಗಿತ್ತು ಎಂದು ನನಗೆ ಕಾಣಿಸುತ್ತದೆ. ಇದರಲ್ಲಿ ಎಲ್ಲರ ರಕ್ಷಣೆ, ಎಲ್ಲರ ಅಭಿವೃದ್ಧಿಗೆ ಇರತಕ್ಕ ಯೋಜನೆಗಳಿವೆ. ಆ ಯೋಜನೆಗಳಿಗೆ ಹಣವನ್ನು ಕಡಿಮೆಮಾಡಿದರೆ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿ ಸಮಾಜದಲ್ಲಿರುವ ಹಿಂದುಳಿದವರ ರಕ್ಷಣೆ ಸಾಕಾದಷ್ಟುಮಟ್ಟಿಗೆ, ನಿರೀಕ್ಷಿಸಿದಷ್ಟು ಮಟ್ಟಿಗೆ ಆಗುವುದಿಲ್ಲ.

ವಿದ್ಯಾಭ್ಯಾಸಕ್ಕೆ ಹೆಚ್ಚು ಹಣವನ್ನು ಒದಗಿಸಿದ್ದಾರೆ. ಕಡ್ಡಾಯ ವಿದ್ಯಾಭ್ಯಾಸವನ್ನು ಜಾರಿಗೆ ತಂದಿರುವುದರಿಂದ ಇನ್ನೂ ಹೆಚ್ಚು ಹಣವನ್ನು ಒದಗಿಸಬೇಕು, ಉಪಾಧ್ಯಾಯರ ಸಂಖ್ಯೆಯನ್ನು ಹೆಚ್ಚುಮಾಡಿ, ಹೆಚ್ಚು ಪಾಠಶಾಲೆಗಳನ್ನು ಕೊಡಿಸಿಕೊಡಬೇಕು ಎಂದು ಹೇಳಿ ನಮ್ಮ ಸರ್ಕಾರಕ್ಕೆ ಸಲಹೆ ಕೊಡುತ್ತೇನೆ. ಇಷ್ಟು ಮಾತ್ರ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಆರ್ಥಿಕ ಮಂತ್ರಿಗಳು ಈ ಸಭೆಯ ಮುಂದೆ ಆದಾಯ ವೆಚ್ಚದ ಅಂಕಿಅಂಶಗಳನ್ನು ಇಡುವುದರಲ್ಲಿ ಬಹಳ ಹೆಣಗಾಡಿದ್ದಾರೆ. ಆ ಹೆಣಗಾಟಕ್ಕೋಸ್ಕರವಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಆಡಳಿತ ಪಕ್ಷದ ನಿರ್ವೀರ್ಯ ಆಡಳಿತ, ಶವದ ಪೆಟ್ಟಿಗೆಯು ಹಾಗೆ ಇದ್ದು, ಅದರ ಮೇಲಿನ ಹೊದ್ದಿಕೆಯಂತಿದೆ ಅವರ ಭಾಷಣ.

ಅಂಕಿಅಂಶಗಳ ಇಲಾಖೆಯವರು ಮೈಸೂರಿನ ಪ್ರಗತಿಯ ಬಗ್ಗೆ ಒಂದು ರಿಪೋರ್ಟನ್ನು ಕೊಟ್ಟಿದ್ದಾರೆ. ನಮ್ಮ ಆರ್ಥಿಕ ಮಂತ್ರಿಗಳು ಏನು ಪ್ರಗತಿಯನ್ನು ಸಾಧಿಸಿದ್ದೇವೆಂದು ಹೇಳಿದ್ದಾರೆಯೋ ಅದಕ್ಕೆ ವಿರೋಧ ಅಭಿಪ್ರಾಯ ಬರುವಂತೆ 'Mysore is making steady but slow progress' ಎಂದು ಹೇಳಿದ್ದಾರೆ. ನಮ್ಮ ಮೈಸೂರು ರಾಜ್ಯ ಭಾರತದಲ್ಲಿ ಗಾತ್ರದಲ್ಲಿ ಆರನೆಯದು ಮತ್ತು ಜನಸಂಖ್ಯೆಯಲ್ಲಿ ಎಂಟನೆಯದು. 1956ರಿಂದ ಒಂಬತ್ತು ವರ್ಷಗಳ ಅವಧಿಗೆ ಅಂಕಿಅಂಶಗಳನ್ನು ಅಂಕಿಅಂಶಗಳ ಇಲಾಖೆಯವರು ಏನು ಕೊಟ್ಟಿದ್ದಾರೆ ಅದರ ಪ್ರಕಾರ ನಮ್ಮ ಮೈಸೂರಿನ ಜನರಲ್ಲಿ ಸುಮಾರು ನೂರಕ್ಕೆ 77ರಷ್ಟು ಗ್ರಾಮಾಂತರ ಪ್ರದೇಶಗಳಲ್ಲಿ ಮತ್ತು 23ರಷ್ಟು ನಗರ ಪ್ರದೇಶಗಳಲ್ಲಿ ವಾಸ ಮಾಡುತ್ತಿದ್ದಾರೆ; ಮತ್ತು ಪ್ರತಿ ಪ್ರಜೆಯೂ ಕೂಡ ಭಾರತದ ಇತರ ಎಲ್ಲ ಪ್ರಾಂತಗಳಲ್ಲಿಯೂ ಕೊಡುವಂತೆಯೇ ತಲಾ 23 ರೂಪಾಯಿ ಸರ್ಕಾರಕ್ಕೆ ಕೊಡುತ್ತಿದ್ದಾನೆ. ಮಾನ್ಯ ಮಂತ್ರಿಯವರು ನಮ್ಮ ಮೇಲೆ, ಪ್ರತಿ ಮೈಸೂರು ಪ್ರಜೆಯ ಮೇಲೆ 73 ರೂಪಾಯಿ ಸಾಲವನ್ನು ಹೇರಿದ್ದಾರೆ. ನಮ್ಮ ದೇಶದ ಪ್ರಗತಿಯನ್ನು ಅಳೆಯಬೇಕಾದರೆ ಕೇವಲ ಹೋದ ವರ್ಷ ಮಾಡಿದ್ದು ಏನು, ಈ ವರ್ಷ ಮಾಡಿದ್ದು ಏನು ಎನ್ನುವುದನ್ನು ಹೋಲಿಸಿಕೊಂಡರೆ ಪ್ರಗತಿಯನ್ನು ಅಳೆಯುವುದಕ್ಕಾಗುವುದಿಲ್ಲ. ಅದಕ್ಕೆ ನಮ್ಮ ನೆರೆಹೊರೆಯ ಪ್ರಾಂತಗಳಲ್ಲಿ ನಡೆಯುತ್ತಿರುವುದನ್ನೂ ನಾವು ಗಮನಕ್ಕೆ ತೆಗೆದುಕೊಳ್ಳಬೇಕಾಗಿದೆ. ನೆರೆ ಪ್ರಾಂತಗಳಾದ ಮದ್ರಾಸ್, ಆಂಧ್ರ, ಕೇರಳ ಈ ಪ್ರಾಂತಗಳಿಗೆ ಕೇಂದ್ರ ಎಷ್ಟು ದುಡ್ಡನ್ನು ಕೊಟ್ಟಿದೆ, ಅದನ್ನು ಯಾವರೀತಿ ವಿನಿಯೋಗ ಮಾಡುತ್ತಿದ್ದಾರೆ, ಏನೇನು ಕಲಸಗಳನ್ನು ಅವರು ಸಾಧಿಸಿದ್ದಾರೆ ಎನ್ನುವುದನ್ನು ಗಮನಿಸಿ ಅಲ್ಲಿ ಆಗಿರುವ ಪ್ರಗತಿಗೂ ನಮ್ಮಲ್ಲಿ ಆಗಿರುವ ಪ್ರಗತಿಗೂ ಹೋಲಿಸಿ ನೋಡಿದರೆ ನಾವು ಪ್ರಗತಿಯ ಪಥದಲ್ಲಿದ್ದೇವೆಯೋ ಅಥವಾ ಹಿಮ್ಮುಖವಾಗಿ ನಡೆದಿದ್ದೇವೆಯೋ ಎನ್ನುವ ವಿಚಾರ ಅರ್ಥವಾಗುತ್ತದೆ.

(ಶ್ರೀ ಎಚ್. ಬಿ. ಜ್ವಾಲನಯ್ಯ)

5-00 P.M.

ವ್ಯವಸಾಯದ ಬಗ್ಗೆ ಹೇಳುವುದಾದರೆ ಕಳೆದ 9 ವರ್ಷಗಳಿಂದ 36 ಮೇಜರ್ ಮತ್ತು ಮೈನರ್ ಪ್ರಾಜೆಕ್ಟ್‌ಗಳನ್ನು ಮಾಡಿದ್ದಾರೆ, ಅದಕ್ಕೆ ವೆಚ್ಚ 270 ಕೋಟಿ ರೂಪಾಯಿ ಆಗಿದೆ. ಇದರಿಂದ ಹೆಚ್ಚಿಗೆ ನೀರುಣಿಸುವುದು ಸುಮಾರು 27 ಲಕ್ಷ ಎಕರೆಗಳಿಗೆ. ಅದರಲ್ಲಿ 9 ಲಕ್ಷ ಎಕರೆ ಆಗಲೇ ಅಬಾದಿಗೆ ಬಂದಿದೆ, ಅದಕ್ಕೆ ಕೆರೆ ಕಟ್ಟೆ ವಗ್ಯೆರೆಗಳಿಂದ ನೀರು ದೊರೆಯುತ್ತದೆ. ಈ 270 ಕೋಟಿ ರೂಪಾಯಿ ಖರ್ಚು ಮಾಡಿ ಪ್ರಾಜೆಕ್ಟುಗಳನ್ನು ಕಟ್ಟಿರುವುದರಿಂದ ಹೆಚ್ಚುವರಿ ನೀರಾವರಿಯಾಗಿರುವುದು ಕೇವಲ 7 ಲಕ್ಷ ಎಕರೆ ಮಾತ್ರ. ಉಳಿದ ಸುಮಾರು 10 ಲಕ್ಷ ಎಕರೆ ಅಬಾದಾಗದೆ ಬಂಜರಾಗಿಯೇ ಉಳಿದಿವೆ. ತುಂಗಭದ್ರಾ, ಎಡದಂಡೆಯಲ್ಲಿ ಈ 27 ಲಕ್ಷ ಎಕರೆಯಲ್ಲಿ ಇಷ್ಟು ನೀರಾವರಿಗೆ ಬಂದಿವೆ. ಇನ್ನು ಯೋಜನೆಗಳು ಹೇಗಿವೆ, ಅದರ ಫಲಿತಾಂಶವೇನು ಎಂದು ನೋಡಿದರೆ ಅವು ವಿವೇಕಶೂನ್ಯ ಯೋಜನೆಗಳೆಂದರೆ ತಪ್ಪಾಗಲಾರದು. ಅದರಿಂದ ಸಾಕಷ್ಟು ಪ್ರಯೋಜನವಾಗದೆ ವಿಷಫಲ ದೊರತಿದೆ. ಈ ಎಲ್ಲಾ ಯೋಜನೆಗಳೇನು ಕಾಂಗ್ರೆಸ್ ಮಿತ್ರರಿಂದ ಮಾಡಲ್ಪಟ್ಟಿವೆಯೋ ಅವು ರಬ್ಬರ್ ಬೆಲೂನಿನಂತಿವೆ, ಅವು ಯಾವಾಗ ಬೇಕಾದರೂ ಬರ್ಸ್ಟ್ ಆಗಬಹುದು. ಈ ಯೋಜನೆಗಳಿಂದ ಒಳ್ಳೆಯದಾಗಿರುವುದೇನೆಂದರೆ ಲಕ್ಷಾಂತರ ವಿದ್ಯಾವಂತ ನಿರುದ್ಯೋಗಿಗಳಿಗೆ ಉದ್ಯೋಗಕ್ಕೆ ಅವಕಾಶವಾಗಿದೆ, ಇಂಜಿನಿಯರಿಂಗ್ ಕಾಲೇಜುಗಳು ಮತ್ತು ಪಾಲಿಟೆಕ್ನಿಕ್‌ಗಳಿಂದ ಪ್ರತಿ ವರ್ಷ 4,700 ಜನರು ಪಾಸಾಗಿ ಹೊರಕ್ಕೆ ಬರುತ್ತಿದ್ದಾರೆ, ಕೆಲವು ವರ್ಷಗಳಲ್ಲಿ ಈ ವಿದ್ಯಾವಂತರುಗಳೆಲ್ಲಾ ನಿರುದ್ಯೋಗಿಗಳಾಗುತ್ತಾರೆಂದರೆ ಅದೇನೂ ಹೆಚ್ಚಿನ ವಿಷಯವಲ್ಲ. ಇದರ ಜೊತೆಗೆ ಪದವೀಧರರು ಮತ್ತು ಇತರ ವಿದ್ಯಾವಂತರು ಬೇರೆ ಇರುತ್ತಾರೆ. ಅವರು ಒಳ್ಳೆಯ ರೀತಿಯಿಂದ ಜೀವನ ನಡೆಸಬೇಕೆಂದು, ಚೆನ್ನಾಗಿ ಸಂಪಾದನೆ ಮಾಡಬೇಕೆಂದು ಇರುವಾಗ ಅವರಿಗೆ ಸಂಪಾದನೆಗೆ ಮಾರ್ಗವಿಲ್ಲದಂತಾಗಿ ಜೀವನ ನಡೆಸುವುದು ಕಷ್ಟವಾಗುತ್ತದೆ. ಇದನ್ನು ತಿಳಿಯಬೇಕಾದರೆ ಮುಖ್ಯಮಂತ್ರಿಗಳು ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಮುಂದೆ ನಿಂತಿರುವ ಉದ್ಯೋಗಾಕಾಂಕ್ಷಿಗಳನ್ನು ಬಿಸಿಲಿನಲ್ಲಿ ಒಣಗುತ್ತಿರುವವರನ್ನು ನೋಡಬೇಕು.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯ ಮಂತ್ರಿಗಳು).—ಅದನ್ನು ಹೇಗೆ ಸರಿಮಾಡಬೇಕೆಂಬುದನ್ನು ಹೇಳಿ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಹೇಳುತ್ತೇನೆ. ನಿಮ್ಮ ಪ್ಲಾನ್ ಪವರ್ ಮತ್ತು ಮ್ಯಾನ್ ಪವರನ್ನು ಹೇಗೆ ಬ್ಯಾಲೆನ್ಸ್ ಮಾಡಬೇಕೆಂಬುದು ನಿಮಗೆ ಗೊತ್ತಾಗಿಲ್ಲ. ಇನ್ನು ಆಹಾರದ ವಿಚಾರ ಹೇಳುವುದಾದರೆ ಅದೊಂದು ದೊಡ್ಡ ಮಹಾಭಾರತವಾಗುತ್ತದೆ. ಕೇಂದ್ರ ಸರಕಾರದಲ್ಲಿ ಹೆಚ್ಚು ಪ್ರಭಾವ ಬೀರುವ ರಾಜ್ಯಗಳಿಗೆ ಹೆಚ್ಚು ಆಹಾರ ದೊರೆಯುತ್ತಿದೆ, ಇತರರಿಗೆ ಇಲ್ಲ. ಪ್ರತಿ ಸಾರಿ ಜಿಲ್ಲೆಗಳಿಗೆ ಕೊಡುವ ಆಹಾರದ ಕೋಟ ಕಡಮೆ ಮಾಡುತ್ತಿದ್ದಾರೆ. ಹೀಗೆ ಮಾಡಿ ಶೇಕಡ 70 ರಷ್ಟು ಕಡಮೆ ಮಾಡಿದ್ದಾರೆ. ನಮ್ಮ ಜಿಲ್ಲೆಗೆ ಶಿವಪ್ಪನವರು ಹೇಳಿದಂತೆ ಒಂದು ಸಾವಿರ ಟನ್ ದೊರೆಯುತ್ತಿದ್ದುದು 120 ಟನ್ನಿಗೆ ಇಳಿದಿದೆ. ಇದರ ಜೊತೆಗೆ ಭಾರಿ ಕೈಗಾರಿಕಾ ಪ್ರದೇಶದಲ್ಲಿರುವವರಿಗೆ, ಬುದ್ಧಿಜೀವಿಗಳಿಗೆ ಮಾತ್ರ ರೇಷನ್ ಕೊಡುತ್ತಿದ್ದಾರೆಯೇ ವಿನಾ ಗ್ರಾಮಾಂತರ ಪ್ರದೇಶಗಳಲ್ಲಿರುವ ಬಡವರಿಗೆ ಕೊಡುತ್ತಿಲ್ಲ, ಅವರ ಕೂಗು ಸರಕಾರಕ್ಕೆ ಮುಟ್ಟುತ್ತಿಲ್ಲ. ಇದನ್ನು ಸ್ವಲ್ಪ ಯೋಚನೆ ಮಾಡಬೇಕಾಗಿದೆ. ಹೆಚ್ಚು ಬೆಳೆಯಬೇಕೆಂದು ಹೇಳುವಾಗ ಬೆಳೆಯುವವರಿಗೆ ಗೊಬ್ಬರ, ನೀರಿನ ಸೌಕರ್ಯ ಮುಂತಾದುವನ್ನು ಸಾಕಷ್ಟು ಸಕಾಲದಲ್ಲಿ ಒದಗಿಸುತ್ತಿಲ್ಲ. ಅದನ್ನು ಬಿಟ್ಟು ಪ್ರತಿ ಸಾರಿಯೂ ಕೂಡ ಪ್ರಕೃತಿಯು ಮೋಸ ಮಾಡಿದೆ ಎಂದು ಹೇಳಿ ಜಾರಿಕೊಳ್ಳುತ್ತಿದ್ದಾರೆ. ಈ ಧೋರಣೆ ಬೇಡ.

ವಿದ್ಯುಚ್ಛಕ್ತಿ ವಿಷಯದಲ್ಲಿ ಫೋರ್ಡ್ ಫೌಂಡೇಷನ್ ಪವರ್ ಕಮಿಟಿಯವರು ಇಂಡಿಯಾದಲ್ಲಿರುವ ಪೊಟೆನ್‌ಷಿಯಾಲಿಟಿಯ ಸರ್ವೆ ಮಾಡಿದಾಗ ಹೀಗೆ ಹೇಳಿದ್ದಾರೆ:

> "Mysore has got highest power Potential and it will be the Cheapest"

ದೇಶದಲ್ಲಿ ಬೇಕಾದಷ್ಟು ವಿದ್ಯುಚ್ಛಕ್ತಿಯು ಉತ್ಪತ್ತಿಯಾದರೂ ಕೂಡ ಅದನ್ನು ಸರಿಯಾಗಿ ಉಪಯೋಗಿಸಲು ಅವಕಾಶ ಮಾಡಿಲ್ಲ. ಶರಾವತಿಯ 8 ಜನರೇಟರುಗಳಲ್ಲಿ 2 ಉತ್ಪತ್ತಿಮಾಡುತ್ತಿವೆ. ಅದನ್ನು ಎಷ್ಟು ದೂರಕ್ಕೆ ಹಂಚಬಹುದು, ದೇಶದಲ್ಲಿ ಹೇಗೆ ಉಪಯೋಗ ಮಾಡಬಹುದು ಎಂಬ ವಿಷಯದಲ್ಲಿ ಸರಿ

ಯಾದ ಪ್ಲಾನ್ ಮಾಡದೆ ಮನಬಂದಂತೆ ಮಾಡುತ್ತಿದ್ದಾರೆ. ಅದನ್ನು ಸರಿಯಾಗಿ ಉಪಯೋಗ ಮಾಡಿಕೊಂಡಿದ್ದರೆ ಅದರಿಂದ ಬರುವ ಆದಾಯ ಇದುವರೆಗಾಗಿರುವ ಖರ್ಚಿಗೆಲ್ಲಾ ಸಾಕಾಗುತ್ತಿತ್ತು. ಅದನ್ನು ಬಿಟ್ಟು ಪವರನ್ನು ಕೇಳಿದವರಿಗೆಲ್ಲಾ ಕೊಡುತ್ತಿದ್ದಾರೆ, ಅದಕ್ಕೆ ಸರಿಯಾದ ಬೆಲೆ ಬರುತ್ತಿಲ್ಲ. ಮದ್ರಾಸಿಗೆ ಮೊದಲನೆಯ ನೂರು ಕಿಲೋವಾಟುಗಳಿಗೆ ಯುನಿಟ್‌ಗೆ 5 ಪೈಸೆ ಯಂತೆ ಯೂ, ಎರಡನೆಯ ನೂರು ಕಿಲೋವಾಟುಗಳಿಂದ 300 ಕಿಲೋವಾಟುಗಳವರೆಗೆ 4.5 ಪೈಸೆಯಂತೆಯೂ ವ್ಯಾಪಾರ ಮಾಡುತ್ತಿದ್ದಾರೆ. ಇಲ್ಲಿಂದ ಕಡಿಮೆ ದರದಲ್ಲಿ ಮದ್ರಾಸಿನವರು ಕೊಂಡು ಹೆಚ್ಚು ದರದಲ್ಲಿ ಅಂದರೆ 20 ಪೈಸೆಗಳಂತೆ ಅವರು ಕೊಡುತ್ತಿದ್ದಾರೆ. ಒಂದು ಕಾಸೂ ಉತ್ಪತ್ತಿ ಮಾಡಲು ಬಂಡವಾಳ ಹಾಕದೆ ಮದ್ರಾಸಿನವರು ನಮ್ಮಿಂದ ವಿದ್ಯುಚ್ಛಕ್ತಿಯನ್ನು ಕೊಂಡು ವ್ಯಾಪಾರಮಾಡಿ ಅದರಿಂದ ಅವರ ಖಜಾನೆಯನ್ನು ತುಂಬಿಕೊಳ್ಳುತ್ತಿದ್ದಾರೆ. ಹಾಗಿರುವಾಗ ನಮ್ಮ ದೇಶದಲ್ಲಿ ಉತ್ಪತ್ತಿಯಾಗುವುದನ್ನು ಯೂನಿಟ್ಟಿಗೆ 26 ಪೈಸೆ ಪ್ರಕಾರ ಮನೆ ಬಳಕೆಗೆ, ಇತರ ಕೆಲಸಗಳಿಗೆ 10 ಪೈಸೆಯಂತೆ ಹೆಚ್ಚಿಗೆ ದರದಲ್ಲಿ ಮೈಸೂರಿನವರಿಗೆ ಸರಬರಾಯಿಮಾಡುತ್ತಿದ್ದಾರೆ. ನಮಗೆ ಸರಕಾರ ಮಾಡಿರುವ ಉಪಕಾರ ಇದು.

ಕೈಗಾರಿಕೆಗಳು ಬಹಳ ಮುಂದುವರಿದಿವೆ ಎಂದು ಹೇಳುತ್ತಾರೆ. ಕೈಗಾರಿಕೆಯಲ್ಲಿ ಮೈಸೂರಿಗೆ ಭಾರತದಲ್ಲಿ ಒಳ್ಳೆಯ ಸ್ಥಾನವಿತ್ತು. ಈಗ ಅದು ಅಳಿಸಿಹೋಗಿದೆ. ಮುಖ್ಯ ಮಂತ್ರಿಗಳು ಮತ್ತು ಆರ್ಥಿಕ ಸಚಿವರು ಎಲ್ಲಾ ಕಡೆಗಳಿಗೂ ಹೋಗಿ ನಮ್ಮ ದೇಶದಲ್ಲಿ ಬಂದು ಕೈಗಾರಿಕೆಗಳನ್ನು ಸ್ಥಾಪಿಸುವಂತೆ ಹೊರ ದೇಶಗಳವರಿಗೆ ಆಹ್ವಾನ ನೀಡುತ್ತಿದ್ದಾರೆ. ಆದರೆ ಯಾರೂ ಬರುತ್ತಿಲ್ಲ, ಇದಕ್ಕೆ ಕಾರಣ ಬೇಕಾದಷ್ಟಿದೆ. ನಮ್ಮ ದೇಶದಲ್ಲಿ ಯಾರೂ ಕೈಗಾರಿಕೋದ್ಯಮಿಗಳಿಲ್ಲ, ಹೊರಗಡೆಯಿಂದ ಬೇಕಾದಷ್ಟು ಜನರನ್ನು ಕರೆತರುತ್ತೇವೆ ಎಂದು ಆರ್ಥಿಕ ಮಂತ್ರಿಗಳು ಪಾಶ್ಚಾತ್ಯ ದೇಶಗಳಲ್ಲಿ ಪ್ರವಾಸಮಾಡಿ ಬಂದರು, ಅಲ್ಲಿಂದ ಎಷ್ಟು ಜನರನ್ನು ಕರೆತಂದರೋ ಗೊತ್ತಿಲ್ಲ. ಅವರು ಹೋಗಿಬಂದುದಕ್ಕೆ ಎಷ್ಟು ವೆಚ್ಚವಾಯಿತೆಂಬುದನ್ನು ತಿಳಿಸಿದರೆ ಬಹಳ ಉಪಕಾರವಾಗುತ್ತದೆ. ಇನ್ನು ಸರಕಾರ ನಡೆಸುತ್ತಿರುವ ಕೈಗಾರಿಕೆಗಳೆಲ್ಲಾ ನಷ್ಟದಲ್ಲಿ ಕೆಲಸ ಮಾಡುತ್ತಿವೆ. ನಮ್ಮ ಅಧಿಕಾರಿಗಳೇ ನಮ್ಮ ಕೈಗಾರಿಕೆಗಳನ್ನು ನಡೆಸುವಾಗ ನಮ್ಮವರೇ ಛೇರ್ಮನ್ ಆಗಿರುವಾಗ ನಮ್ಮ ನೇರ ಆಡಳಿತದಲ್ಲೇ ಇರುವಾಗ ಏಕೆ ಅವುಗಳಿಂದ ನಫೆ ಬರುತ್ತಿಲ್ಲ ಎಂಬುದನ್ನು ಕೂಲಂಕಷವಾಗಿ ವಿಮರ್ಶೆಮಾಡಬೇಕು. ಕೈಗಾರಿಕೆಗಳಲ್ಲಿ ನಷ್ಟವಾಗುತ್ತಿರುವುದರಿಂದ ಆ ಜವಾಬ್ದಾರಿಯಿಂದ ಜಾರಿಕೊಳ್ಳಲು ಈಗ ಸರಕಾರದವರು ಕೈಗಾರಿಕಾ ಕಾರ್ಪೊರೇಷನ್ನುಗಳನ್ನು ಮಾಡುತ್ತಿದ್ದಾರೆ. ಪಬ್ಲಿಕ್ ಕಾರ್ಪೊರೇಷನ್ ಮಾಡುವುದಾದರೂ ಏಕೆ? ರೆಂಕೋ, ನ್ಯೂ ಎಲೆಕ್ಟ್ರಿಕ್ ಫ್ಯಾಕ್ಟರಿ, ಪೋರ್ಸಿಲೈನ್ ಫ್ಯಾಕ್ಟರಿ ಮುಂತಾದುವನ್ನು ನಡೆಸಲು ಪಬ್ಲಿಕ್ ಕಾರ್ಪೊರೇಷನ್ನುಗಳನ್ನು ರಚಿಸುತ್ತಿದ್ದಾರೆ. ಹಾಗೆ ಮಾಡುವುದಕ್ಕೆ ಕಾರಣ ಅವುಗಳಲ್ಲಿ ನಷ್ಟವಾದರೆ ಅದರ ಅಂಕಿಅಂಶಗಳು ಈ ಸಭೆಯಮುಂದೆ ಬರುವುದಿಲ್ಲ. ಸರಕಾರ ನಷ್ಟಕ್ಕೆ ತನ್ನ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳುವುದಕ್ಕೆ ಕಾರ್ಪೊರೇಷನ್ನುಗಳನ್ನು ಮಾಡುತ್ತಿದೆ. ರೆಂಕೋ ಕಾರ್ಖಾನೆಯಲ್ಲಿ ಒಂದು ಸಾವಿರ ರೇಡಿಯೋಗಳು ಖರ್ಚಾಗದೆ ಹಾಗೆಯೇ ಉಳಿದಿವೆ. ಆದುದರಿಂದ ಇವನ್ನೇ ಕೊಳ್ಳಬೇಕೆಂದು ವಿದ್ಯಾ ಇಲಾಖೆಯವರು ಸಂಬಂಧಪಟ್ಟವರಿಗೆ ತಿಳಿಸಿದ್ದಾರೆ, ಹೊರಗೆ ಉತ್ತಮ ದರ್ಜೆಯವು ದೊರೆಯುತ್ತಿದ್ದರೂ ಕೂಡ ಇವನ್ನೇ ಹಂಚುತ್ತಿದ್ದಾರೆ. ಎಲೆಕ್ಟ್ರಿಸಿಟಿ ಬೋರ್ಡ್, ಎಂ. ಎಸ್. ಆರ್. ಟಿ. ಸಿ. ಸ್ಟೇಟ್ ಫೈನಾನ್ಸ್ ಕಾರ್ಪೊರೇಷನ್, ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಕಾರ್ಪೊರೇಷನ್, ಖಾದಿ ಅಂಡ್ ವಿಲೇಜ್ ಇಂಡಸ್ಟ್ರೀಸ್ ಬೋರ್ಡ್ ಮುಂತಾದುವು ಬೇಕಾದಷ್ಟಿವೆ. ಎಂ.ಎಸ್.ಆರ್.ಟಿ.ಸಿ.ಗೆ 196'–63ರಲ್ಲಿ ಸರಕಾರ 8 ಕೋಟಿ 61 ಲಕ್ಷ ರೂಪಾಯಿಗಳ ಬಂಡವಾಳ ಹಾಕಿದಾಗ ನಫೆ 32·7 ಲಕ್ಷ ರೂಪಾಯಿ ಬಂತು, 1963–64 ರಲ್ಲಿ 12 ಕೋಟಿ 74 ಲಕ್ಷ ಬಂಡವಾಳ ಹಾಕಿದಾಗ ನಫೆ 10·09 ಲಕ್ಷ ಬಂತು. 1964–65ರಲ್ಲಿ 9 ಕೋಟಿ 13 ಲಕ್ಷ ಬಂಡವಾಳ ಹಾಕಿದಾಗ 20.03 ಲಕ್ಷ ನಫೆ ಬಂತು. ಇದರಲ್ಲಿ ಇನ್‌ಕಂಟ್ಯಾಕ್ಸ್ ಕೊಡಬೇಕೆಂದು ಕಾಣುತ್ತದೆ. ಅದನ್ನು ಕೊಟ್ಟರೆ ಸೊನ್ನೆ ಲಾಭವೆಂದು ತೋರುತ್ತದೆ. ಸರಕಾರ ಕೈಗಾರಿಕೆಗಳಲ್ಲಿ ಇಷ್ಟು ಹಣ ಹಾಕಿ ಸಂಪಾದನೆ ಮಾಡುವುದಾಗಿ ಹೇಳಿ ಜನರಿಗೆ ತೆರಿಗೆ ಕಡಮೆ ಮಾಡುತ್ತೇವೆಂದು ಹೇಳಿ ಲಾಭ ಪಡೆಯದೆ ತೆರಿಗೆಯನ್ನು ಏರಿಸುತ್ತಿರುವುದನ್ನು ಕೈಗಾರಿಕೆಗಳಲ್ಲಿ ನಷ್ಟವಾಗುತ್ತಿರುವುದನ್ನು ನೋಡಿದರೆ ಏನು ಹೇಳಬೇಕೋ ತಿಳಿಯದು. ಸ್ಟೇಟ್ ಫೈನಾನ್ಸಿಂಗ್ ಕಾರ್ಪೊರೇಷನ್ ಗ್ಯಾರಂಟಿ ಇದೆ, ಸೇಕಡ 4ರಷ್ಟು ಡಿವಿಡೆಂಡ್ ಕೊಡಬೇಕು, ಆದರೆ ಅದರಂತೆ ಮಾಡಲು ಆಗುತ್ತಿಲ್ಲ. ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಕಾರ್ಪೊರೇಷನ್ ನೋಡಿದರೆ ಅಲ್ಲಿನ ಪರಿಸ್ಥಿತಿ ವಿಚಿತ್ರವಾಗಿದೆ. ಅಲ್ಲಿ ಒಬ್ಬರು ಖಾಸಗಿ ಡೈರೆಕ್ಟರ್ ಇದ್ದಾರೆ. ಇತರ ರಾಜ್ಯಗಳಲ್ಲಿ ಶೇಕಡ 50ರ ಖಾಸಗಿ ಡೈರೆಕ್ಟರ್‌ಗಳಿರುವ ಕಾರ್ಪೊರೇಷನ್ ಅತ್ಯುತ್ತಮವಾಗಿ ಕೆಲಸಮಾಡು

(ಶ್ರೀ ಎಚ್. ಬಿ. ಜ್ವಾಲನಯ್ಯ)

ತ್ತಿದ್ದರೂ ಇಲ್ಲಿ ಸರಿಯಾಗಿ ಕೆಲಸ ನಡೆಯುತ್ತಿಲ್ಲ, ಸರ್ವಿಸ್ ಛಾರ್ಜಸ್ ಎಂದು ಕೊಡುತ್ತಿದ್ದಾರೆ. ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಸ್ಥಿತಿ ವಿಚಿತ್ರವಾಗಿದೆ, ಸರಕಾರಿ ಕಾರ್ಖಾನೆಗಳ ಉತ್ಪತ್ತಿಯನ್ನು ಮಾರಾಟಮಾಡುವ ಏಜೆನ್ಸಿ ಇದೆ. ಇದರ ಶಾಖೆಗಳು ದೆಹಲಿ, ಕಲ್ಕತ್ತಾ, ಹೈದರಾಬಾದು, ಬೊಂಬಾಯಿ ಮುಂತಾದ ಕಡೆಗಳಲ್ಲಿದೆ. ಅಲ್ಲಿಗೆ ಹೋಗಿ ಬರುವುದಕ್ಕೆ ಎಷ್ಟು ಟಿ. ಎ. ಕೊಡಲಾಗುತ್ತಿದೆ ಎಂಬ ಬಗ್ಗೆ ಲೆಕ್ಕ ಕೊಟ್ಟರೆ ಒಳ್ಳೆಯದು. ಇದನ್ನು ಪ್ರಾರಂಭಿಸಿದಮೇಲೆ ಕೈಗಾರಿಕಾ ಪ್ರಗತಿಯು ಇಳಿದಿದೆ. ಹಾಸನದಲ್ಲಿ ಮೈಸೂರು ಇಂಪ್ಲಿಮೆಂಟ್ಸ್ ಫ್ಯಾಕ್ಟರಿ ಇದೆ. ಅಲ್ಲಿ ತಯಾರಾದ ಸಾಮಾನುಗಳು ಭಾರತದ ಎಲ್ಲಾ ಭಾಗದಲ್ಲೂ ಹಂಚಿ ಹೋಗುತ್ತಾ ಇತ್ತು. ಆ ಕಾರ್ಖಾನೆಗೆ ಪ್ರತಿದಿವಸ ಬರುತ್ತಾ ಇದ್ದ ಬೇಡಿಕೆಯನ್ನು ಪೂರೈಸುವುದಕ್ಕೆ ಅಗದೆ ಎರಡು ಷಿಫ್ಟ್‌ನಲ್ಲಿ 300 ಜನರು ಕೆಲಸ ಮಾಡುತ್ತಾ ಇದ್ದರು. ಕೆಲಸಗಾರರಿಗೆ ಪ್ರತಿವರ್ಷವೂ ಕೊಡುತ್ತಾ ಇದ್ದ ಬೋನಸ್ ಜೊತೆಗೆ ಇನ್‌ಸೆನ್‌ಟೀವ್ ಬೋನಸ್ ಕೂಡ ಕೊಡುತ್ತಾ ಇದ್ದರು. ಅಂತಹ ಸಂಸ್ಥೆ ಈ ಸೇಲ್ಸ್ ಇಂಟರ್‌ನ್ಯಾಷನಲ್ ಏಜೆನ್ಸಿ ಬಂದಮೇಲೆ ಎರಡು ಷಿಫ್ಟ್ ನಡೆಯುತ್ತಾ ಇದ್ದದ್ದು ಒಂದು ಷಿಫ್ಟ್ ಆಯಿತು, 9-10 ಲಕ್ಷ ರೂಪಾಯಿಗಳ ಸಾಮಾನು ಆ ಕಾರ್ಖಾನೆಯಲ್ಲಿ ಕೊಳೆಯುತ್ತಾ ಬಿದ್ದಿದೆ. ಏಕೆಂದರೆ ಯಾವಯಾವ ವ್ಯಾಪಾರಸ್ಥರು ಅಲ್ಲಿಂದ ಕೊಂಡುಕೊಂಡು ವ್ಯಾಪಾರ ಮಾಡುತ್ತಾ ಇದ್ದರೋ ಅವರು ಹೇಳುತ್ತಾರೆ, ಡ್ರೈಪ್‌ರೈಟರ್ ಮಾತ್ರ ಇಟ್ಟುಕೊಂಡು 4-5 ಪರ್ಸೆಂಟ್ ಕಮಿಷನ್ ನೀವು ತೆಗೆದುಕೊಳ್ಳುತ್ತೀರಿ, ನಿಮಗೇಕೆ ನಾವು ಕಮಿಷನ್ ಕೊಡಬೇಕು ನಿಮ್ಮ ಸಾಮಾನು ನಮಗೆ ಬೇಡವೇ ಬೇಡ ಎಂದು ಹೇಳಿ ಅವರಿಂದ ಸಾಮಾನುಗಳನ್ನು ಕೊಂಡುಕೊಳ್ಳುವುದನ್ನು ನಿಲ್ಲಿಸಿ ಬಿಟ್ಟಿದ್ದಾರೆ. ಇದರಿಂದಾಗಿ 8-10 ಲಕ್ಷ ರೂಪಾಯಿಗಳ ಸಾಮಾನು ಮಾರಾಟವಾಗದೇ ನಿಂತು ಹೋಗಿ ನಷ್ಟವಾಗಿದೆ. ಇನ್‌ಸೆಂಟೀವ್ ಬೋನಸ್ ಕೊಡುವುದೂ ನಿಂತು ಹೋಯಿತು, ಎರಡು ಷಿಫ್ಟಿನಲ್ಲಿ ಕೆಲಸ ಮಾಡುತ್ತಾ ಇದ್ದುದು ಒಂದು ಷಿಫ್ಟಿಗೆ ಬಂದಿದೆ ಮತ್ತು ಅಲ್ಲಿ ಕೆಲಸ ಮಾಡುತ್ತಾ ಇರತಕ್ಕ ಕೆಲಸಗಾರರನ್ನೂ ಕೂಡ ಕೆಲಸದಿಂದ ತೆಗೆಯತಕ್ಕ ಪರಿಸ್ಥಿತಿಗೆ ಬಂದಿದೆ, ಕೆಲಸದಿಂದ ತೆಗೆಯುವುದಕ್ಕೆ ಶುರು ಮಾಡಿದ್ದಾರೆ.

ಮಿನರಲ್ ಡೆವಲಪ್‌ಮೆಂಟ್ ಬೋರ್ಡ್ ಅಂತ ಇತ್ತು ಅದನ್ನು ತೆಗೆದು ಒಂದು ಕಾರ್ಪೊರೇಷನ್ ಮಾಡುತ್ತೇವೆ ಎಂದು ಹೇಳಿದಿರಿ. ಅಲ್ಲಿ 300-400 ಜನ 8-10 ವರ್ಷದಿಂದ ಕೆಲಸ ಮಾಡಿದವರು ಇದ್ದಾರೆ ಅವರನ್ನು ಕೇಳುವವರೇ ಇಲ್ಲ.

ಖಾದಿ ಬೋರ್ಡಿನದಂತೂ ಒಂದು ವಿಚಿತ್ರವಾದ ವಿಷಯ, ಅದರ ವಿಷಯವಾಗಿ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ.

ಬೆಂಗಳೂರು ಡೈರಿ ವಿಷಯದಲ್ಲಿ ಹೇಳುವುದಾದರೆ, 1965—66ರಲ್ಲಿ ಹನ್ನೆರಡೂವರೆ ಲಕ್ಷ ರೂಪಾಯಿ ನಷ್ಟವಾಯಿತು. 67ರಲ್ಲಿ ಒಂಭತ್ತೂವರೆ ಲಕ್ಷ ರೂಪಾಯಿ ನಷ್ಟವಾಗಿದೆ. 68ರಲ್ಲಿ ಒಂದು ತಿಂಗಳಿನಲ್ಲಿ 75 ಸಾವಿರ ರೂಪಾಯಿ ನಷ್ಟವಾಗಿದೆ. 262 ಕೋ-ಆಪರೇಟೀವ್ ಸಂಸ್ಥೆಗಳು ಹಾಲನ್ನು ಸರಬರಾಯಿ ಮಾಡುತ್ತವೆ. ಅದಕ್ಕೆ ಎಂಟೂವರೆ ಲಕ್ಷ ರೂಪಾಯಿಗಳ ಷೇರು ಬಂಡವಾಳವನ್ನು ಕೊಟ್ಟಿದ್ದೀರಿ. ಪ್ರತಿ ವರ್ಷವೂ ಕೂಡ ದನಗಳನ್ನು ಕೊಂಡುಕೊಳ್ಳುವುದಕ್ಕೆ 4 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. 262 ಸೊಸೈಟಿಗಳಲ್ಲಿ ಕೇವಲ 80 ಸೊಸೈಟಿಗಳು ಮಾತ್ರ ಹಾಲನ್ನು ಸರಬರಾಯಿ ಮಾಡುತ್ತಾ ಇವೆ. ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು

> " The committee are constrained to observe that in the organisation of milk societies both officials and non-officials have taken advantage of and misused Government funds "

ಎಂದು ಹೇಳಿದ್ದಾರೆ. ಇದೇ ರೀತಿ ಮಂಗಳೂರಿನಲ್ಲಿ, ಭದ್ರಾವತಿಯಲ್ಲಿ ಹದಿನೈದೂವರೆ ಲಕ್ಷ ರೂಪಾಯಿಗಳ ಬಂಡವಾಳ ಹಾಕಿ 65—66ರವರೆಗೂ 5.2 ಲಕ್ಷ ರೂಪಾಯಿಗಳಷ್ಟು ಖರ್ಚು ಮಾಡಿದ್ದೀರಿ. ಸರ್ಕಾರದವರು ಆ ಸ್ಕೀಂಗೆ ಹಣಕಾಸಿನ ಸಹಾಯ ಕೊಡುವುದಕ್ಕೆ ಮೂರು ವರ್ಷವಾಯಿತು. ಟೆಕ್ನಿಕಲ್ ಸ್ಯಾಂಕ್ಷನ್ 66ರಲ್ಲಿ ಕೊಟ್ಟಿದ್ದಾರೆ. ಅಡ್ಮಿನ್‌ಸ್ಟ್ರೇಟೀವ್ ಸ್ಯಾಂಕ್ಷನ್ ಕೊಡುವುದಕ್ಕೆ ಎರಡು ವರ್ಷ ತೆಗೆದುಕೊಂಡಿದ್ದಾರೆ. ಮಂಗಳೂರಿನ ಮಿಲ್ಕ್ ಸ್ಕೀಂಗೆ ಲಕ್ಷಾಂತರ ರೂಪಾಯಿನ ಯಂತ್ರೋಪಕರಣಗಳನ್ನು ತರಿಸಿದ್ದಾರೆ, ಅವು ಗುಡ್ಡದ ಮೇಲೆ ಬಿದ್ದಿವೆ. ಅಲ್ಲಿರತಕ್ಕ ಸೂಪರಿಂಟೆಂಡೆಂಟ್ ಕುಡಿಯುವ ನೀರಿಗೆ ಎರಡು ಮೈಲಿ ದೂರ ಹೋಗಬೇಕು, ಅಂತಹ ಕಡೆ ಒಂದು ಮಿಲ್ಕ್ ಸ್ಕೀಮನ್ನು ಪ್ರಾರಂಭ ಮಾಡಿದ್ದೀರಿ.

ಸಹಕಾರ ಸಂಸ್ಥೆಗಳಿಗೆ 15 ಕೋಟಿ ರೂಪಾಯಿನ ಶೇರು ಬಂಡವಾಳ ಹಾಕಿ ಶ್ರೀಮಾನ್ ಶಿವಪ್ಪನವರು ಹೇಳಿದಂತೆ, .25 ಪರ್ಸೆಂಟ್ ಲಾಭ ತೆಗೆದುಕೊಳ್ಳುತ್ತಾ ಇದ್ದೀರಿ, ಇದರ ಜೊತೆಗೆ ಓವರ್‌ಡ್ಯೂಸ್ 9—10 ಕೋಟಿ ರೂಪಾಯಿ ಇದೆ ಎಂದರೆ ಹೇಗೆ ನಡೆಯುತ್ತಾ ಇದೆ ಎಂಬುದನ್ನು ನಾವು ನೋಡಬಹುದಾಗಿದೆ.

ಮಂಗಳೂರಿನ ಬಂದರಿನ ಬಗ್ಗೆ ಹೇಳುವುದಾದರೆ ಮೇಜರ್ ಪೋರ್ಟ್ ಕಮಿಟಿಯವರು ಒಂದು ಮೈಲಿವರೆಗೂ ಒಳಗೆ ಸ್ಟೀಮರ್ ಬರಬೇಕೆಂದು ಹೇಳಿ 37 ಅಡಿಗಿಂತ ಅಲ್ಲಿ ಕಡಿಮೆ ಆಳ ಇರಬಾರದು ಅಂತಹ ಒಂದು ಬಂದರನ್ನು ಮಾಡಬೇಕೆಂದು ಅಭಿಪ್ರಾಯ ಪಟ್ಟಿರುವಾಗ ಅದು 30 ಅಡಿ ಇರಬೇಕೆಂದು ಈಗ ಹೇಳುತ್ತಿದ್ದಾರೆ. 24 ಕೋಟಿ ರೂಪಾಯಿಗಳಷ್ಟು ಮಂಜೂರು ಮಾಡಿದ್ದೇವೆ ಎಂದು ಕೇಂದ್ರ ಸರ್ಕಾರದವರು ಹೇಳುತ್ತಾರೆ, ಒಂದು ಕೋಟಿ ರೂಪಾಯಿ ಮಾತ್ರ ಈಗ ಮಂಜೂರು ಮಾಡಿದ್ದಾರೆ, ಈ ರೀತಿ ಎಷ್ಟು ವರ್ಷ ಕೊಡುತ್ತೀರೋ ಗೊತ್ತಿಲ್ಲ.

ನಮ್ಮ ಸರ್ಕಾರದವರು ಕೈಗಾರಿಕೆಗಳು ಆಗಬೇಕು ಎಂದು ಹೇಳುತ್ತಾರೆ, ಅದಗೆ ಮುಂದೆ ಬರುವಂತಹ ಕಾರ್ಖಾನೆಗಳವರಿಗೆ ಸರಿಯಾಗಿ ಪ್ರೋತ್ಸಾಹ ಕೊಡುತ್ತಾ ಇಲ್ಲ. ಉದಾಹರಣೆಗೆ ರೆನಾಲ್ಡ್ ಕಂಪೆನಿ ಎಂಬ ಒಂದು ಸಂಸ್ಥೆಯವರು ಒಂದು ಕಾರ್ಖಾನೆಯನ್ನು ಮೈಸೂರಿನಲ್ಲಿ ಸ್ಥಾಪನೆ ಮಾಡುವುದಕ್ಕೆ ಬಂದರು; ಅವರಿಗೆ ಸರಿಯಾಗಿ ಪ್ರೋತ್ಸಾಹ ಇಲ್ಲ. ಅಗ್ಫ ಫೋಟೋಫಿಲಂ ಕಂಪೆನಿಯವರಿಗೆ ಸರಿಯಾದ ಪ್ರೋತ್ಸಾಹ ಸಿಕ್ಕದೆ ಅವರು ಊಟಿಗೆ ಹೊರಟುಹೋದರು. ಅದೇ ರೀತಿ ಜರ್ಮನಿಯ ಕ್ರೂಪ್ ಕಂಪೆನಿಯವರು—ಪ್ರಪಂಚದಲ್ಲೇ ಹೆಸರುವಾಸಿಯಾದ ಕಂಪೆನಿಯವರು ಬಂದರು ಅವರಿಗೆ ಸರಿಯಾದ ಪ್ರೋತ್ಸಾಹ ಸಿಕ್ಕಲಿಲ್ಲ. ಅದೇ ರೀತಿ ಆಯಿಲ್ ರಿಫೈನರಿ ಮಂಗಳೂರಿನಲ್ಲಿ ಬರಬೇಕಾಗಿತ್ತು. ಅದು ಹೋಯಿತು. ಪ್ರೊಹಿಬಿಷನ್ ಇಂಟ್ರೊಡ್ಯೂಸ್ ಮಾಡುವ ಸಂದರ್ಭದಲ್ಲಿ ಅದರಿಂದಾಗುವಂತಹ ನಷ್ಟವನ್ನು ಸೇಲ್ಸ್‌ಟ್ಯಾಕ್ಸ್‌ನಿಂದ ತುಂಬಿಕೊಳ್ಳುತ್ತೇವೆ ಎಂದು ಹೇಳಿದರು. ಈಗ ಪಾನನಿರೋಧವನ್ನು ಕೈಬಿಟ್ಟರೂ ಕೂಡ ಸೇಲ್ಸ್‌ಟ್ಯಾಕ್ಸ್‌ನ್ನು ತೆಗೆಯುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಅದರ ಜೊತೆಗೆ ಪ್ಲಾನ್ ಪ್ರಾಜೆಕ್ಟ್‌ನಲ್ಲಿ ನಷ್ಟವಾಗುತ್ತಾ ಇದೆಯೋ ಎಲ್ಲಿದ್ದೇವೆ ಎಂಬುದನ್ನು ಅರ್ಥಮಾಡಿಕೊಳ್ಳುವುದಕ್ಕೆ ಆಗುತ್ತಾ ಇಲ್ಲ. ನಾನು ಸರ್ಕಾರದವರಿಗೆ ಒಂದು ಸಲಹೆ ಕೊಡಲು ಬಯಸುತ್ತೇನೆ. ಈ ಫೈನಾನ್‌ಷಿಯಲ್ ರಿಸಲ್ಟ್ಸನ್ನು ಅಸೆಸ್ ಮಾಡುವುದಕ್ಕೆ ದಯವಿಟ್ಟು ಒಂದು ಕಮಿಟಿಯನ್ನು ಮಾಡಿ—ಪಕ್ಷದ ದೃಷ್ಟಿಯಿಂದ ಮಾಡಬೇಡಿ—ಇಡೀ ದೇಶದ ದೃಷ್ಟಿಯಿಂದ ಮಾಡಿ ತಪ್ಪಾಗಿದ್ದರೆ ತಿದ್ದಿಕೊಳ್ಳುವುದಕ್ಕೆ ಅವಕಾಶವಿದೆಯೇ ಅಂತ ನೋಡೋಣ.

ಹೆಲ್ತ್ ಡಿಪಾರ್ಟ್‌ಮೆಂಟಿನ ವಿಷಯದಲ್ಲಿ ಒಂದು ಮಾತು ಹೇಳಬೇಕಾಗಿದೆ. ಖೆಡ್ಡಾದಲ್ಲಿ ಈ ಮಾನ್ಯ ಸಭೆಯ ಸದಸ್ಯರಾದ ರತ್ನಕುಮಾರ್ ಕಟ್ಟೆಮಾರ್‌ರವರಿಗೆ ಗುಂಡು ತಗುಲಿತು, ಮೈಸೂರಿಗೆ ಕರೆದುಕೊಂಡು ಬಂದರು, ಮೈಸೂರಿನ ಆಸ್ಪತ್ರೆಗೆ ಬಂದಾಗ ಮಧ್ಯಾಹ್ನ 4 ಗಂಟೆಯಾಗಿತ್ತು. ಆಸ್ಪತ್ರೆಯಲ್ಲಿ ಕೈ ತೊಳೆಯುವುದಕ್ಕೆ ನೀರು ಇರಲಿಲ್ಲ. ರಕ್ತಮಯವಾಗಿದ್ದ ಕೈಯನ್ನು ಡಿಸ್ಟಿಲ್ಡ್ ವಾಟರ್‌ನಿಂದ ನಾನು ಕೈ ತೊಳೆದುಕೊಂಡೆ. 300-400 ಜನ ಇನ್‌ಪೇಷಂಟ್ಸ್ ಅಲ್ಲಿ ಇರುತ್ತಾರೆ ಅಂತಹ ಕಡೆ ನಾಲ್ಕು ಗಂಟೆಯ ಹೊತ್ತಿನಲ್ಲಿ ಕೈ ತೊಳೆಯುವುದಕ್ಕೆ ನೀರು ಇಲ್ಲ ಅಂದರೆ ಇನ್ನು ಹೆಚ್ಚು ಹೇಳಬೇಕಾದ್ದೇನೂ ಇಲ್ಲ. ಅದೇ ರೀತಿ ನನ್ನ ಜಿಲ್ಲೆಯಾದ ಹಾಸನದಲ್ಲಿ ಅಂಕಪುರ ಅಂತ ಒಂದು ಗ್ರಾಮ ಇದೆ. ಆ ಗ್ರಾಮಕ್ಕೆ ಮೇನ್‌ರೋಡ್‌ನಿಂದ ಬರಬೇಕಾದರೆ ಮೂರು ಮೈಲಿ ಆಗುತ್ತದೆ. ಆ ರಸ್ತೆಯನ್ನು ಮೇನ್‌ಟೇನ್ ಮಾಡುವುದಕ್ಕೆ ಪ್ರತಿವರ್ಷವೂ ಹತ್ತು ಸಾವಿರ ರೂಪಾಯಿ ಆಗುತ್ತದೆ ಎಂದು ಹೇಳುತ್ತಾರೆ. ಆಸ್ಪತ್ರೆಗೆ ಹೋಗಬೇಕೆಂದರೆ ಒಂದು ಸರಿಯಾದ ರಸ್ತೆ ಇಲ್ಲ. ಅಲ್ಲಿ ಸರಿಯಾದ ರಸ್ತೆಯಾದರೂ ಏರ್ಪಾಡು ಮಾಡಿಕೊಡಿ ಎಂದು ಕೇಳಿಕೊಳ್ಳುತ್ತೇನೆ.

ರೆವಿನ್ಯೂ ಡೆಪ್ಯೂಟಿ ಮಿನಿಸ್ಟರ್ ಹಾಸನ ಜಿಲ್ಲೆಯಲ್ಲಿ ಕಂದಾಯವನ್ನು ಮನ್ನಾ ಮಾಡುವುದಕ್ಕೆ ಡೆಪ್ಯೂಟಿ ಕಮಿಷನರು ನಮಗೆ ಯಾವ ಒಂದು ಶಿಫಾರಸನ್ನೂ ಮಾಡಿಲ್ಲ, ಆದ್ದರಿಂದ 65-66ನೇ ವರ್ಷದ ಅವಧಿಯಲ್ಲಿ 500 ಚಿಲ್ಲರೆ ರೂಪಾಯಿ ಮಾತ್ರ ಮನ್ನಾ ಮಾಡಿದ್ದೇವೆ ಎಂದು ಹೇಳಿದರು. ಮೊನ್ನೆ ದಿವಸ ಹಾಸನದಲ್ಲಿ ಕೇಳಿದಾಗ 6-7 ಲಕ್ಷ ರೂಪಾಯಿಗಳಿಗೂ ಹೆಚ್ಚಾಗಿ ಶಿಫಾರಸು ಮಾಡಿದ್ದೇನೆ ಎಂದು ಅವರು ಹೇಳಿದರು. ಇದನ್ನು ತಾವು ಸ್ವಲ್ಪ ವಿಚಾರ ಮಾಡಬೇಕು.

ಮೈಸೂರು ಸಂಸ್ಥಾನದ ಅಡಲ್ಟ್ ಎಜ್ಯುಕೇಷನ್ ಕೌನ್ಸಿಲ್ ಪ್ರಪಂಚದಲ್ಲೇ ಶ್ರೇಷ್ಠವಾದದ್ದು. 1942ರಲ್ಲಿ ಅನೇಕ ಜನ ದೇಶಾಭಿಮಾನಿಗಳು ಮುಂದೆ ಬಂದು ಇಂತಹ ಒಂದು ಸಂಸ್ಥೆಯನ್ನು ಕಟ್ಟಿದರು, ಇದು ಅಂತರರಾಷ್ಟ್ರೀಯ ಖ್ಯಾತಿಯನ್ನು ಪಡೆದಿದೆ. ಈ ಸಂಸ್ಥೆಯಲ್ಲಿ 300 ಜನ ಕೆಲಸ ಮಾಡುತ್ತಾ ಇದ್ದಾರೆ, ಇದಕ್ಕೆ 7 ಲಕ್ಷ ರೂಪಾಯಿಗಳನ್ನು ಕೊಡುತ್ತಾ ಇದ್ದೀರಿ. ಲೈಬ್ರರಿ, ಲಿಟೆರರಿ ಆಕ್ಟಿವಿಟೀಸ್‌ಗೆ ಕೊಟ್ಟಂಥ ಈ ದುಡ್ಡು ಯಾವುದಕ್ಕೂ ಸಾಲದೆ ಹೋಗಿ ಫೆಬ್ರವರಿ-ಮಾರ್ಚಿ ತಿಂಗಳಿನ

(ಶ್ರೀ ಎಚ್. ಬಿ. ಜ್ವಾಲನಯ್ಯ)

ಅಲ್ಲಿ ಕೆಲಸ ಮಾಡುವವರಿಗೆ ಸಂಬಳ ಕೊಡುವುದಕ್ಕೆ ದುಡ್ಡಿಲ್ಲದೆ 300 ಸಂಸಾರಗಳು ಇವತ್ತಿನ ದಿವಸ ಊಟಕ್ಕೆ ಗತಿ ಇಲ್ಲದೆ ಎರಡು ತಿಂಗಳಿನಿಂದ ಕಷ್ಟಪಡುತ್ತಾ ಇದ್ದಾರೆ. ಹೋದ ಸಾಲಿನಲ್ಲಿ ತುಮಕೂರಿನಲ್ಲಿ ಒಬ್ಬ ತಾಲ್ಲೂಕು ಎಕ್ಸಿಕ್ಯೂಟೀವ್ ಆಫೀಸರು ತನ್ನ ಸಾಲ ಸೋಲಗಳನ್ನು ತೀರಿಸುವುದಕ್ಕೆ ಅವರಿಗೆ ಸರಿಯಾಗಿ ಸಂಬಳ ಕೊಡದೇ ಇದ್ದುದರಿಂದ ಸೂಯಿಸೈಡ್ ಮಾಡಿಕೊಂಡಿದ್ದಾರೆ. ಆತ ಒಂದು ಚೀಟಿಯನ್ನು ಬರೆದಿದ್ದ, ಆ ಚೀಟಿಯಲ್ಲಿ ಹೀಗೆ ಇದೆ: "ಸಂಬಳ ಸಾರಿಗೆ ಪಾವತಿಯಾಗದೆ ಸಾಲ ಸೋಲ ಕೊಡಲು ತೊಂದರೆಯಾಗಿ ಪ್ರಾಣಬಿಟ್ಟಿದ್ದೇನೆ" ಅಂತ ಚೀಟಿ ಬರೆದಿಟ್ಟು ಸತ್ತು ಹೋಗಿದ್ದ. ಪೋಲೀಸ್‌ನವರ ಹತ್ತಿರ ಆ ಕಾಗದ ಇದೆ. ವಿದ್ಯಾಮಂತ್ರಿಗಳಿಗೆ ಕಾಗದ ಬರೆದಿದ್ದೇನೆ. ಸ್ಟ್ಯಾಚ್ಯುಟರಿ ಬೋರ್ಡ್ ಮಾಡುತ್ತೇವೆ ಎಂದು ಹೇಳಿದರು, ಫೋರ್ಡ್‌ಫೌಂಡೇಷನ್‌ನವರು ಸಹಾಯ ಮಾಡಿದ್ದಾರೆ, ಕೇಂದ್ರದವರು ಕೋಟ್ಯಾಂತರ ರೂಪಾಯಿ ಕೊಡುವುದಕ್ಕೆ ಸಿದ್ಧವಾಗಿದ್ದಾರೆ, ಹಾಗಿರುವಾಗ ಈ ಸಂಸ್ಥೆಯ ಬಗ್ಗೆ ಎಷ್ಟು ಗಮನ ಕೊಡಬೇಕೋ ಅಷ್ಟು ಕೊಡದೆ ಈ ದಿನ ಅದು ಅಂತರರಾಷ್ಟ್ರೀಯ ಖ್ಯಾತಿಯನ್ನು ಕಳೆದುಕೊಂಡು ಮುಚ್ಚುವಂತಹ ಸ್ಥಿತಿಗೆ ಬಂದಿದೆ. ನೀವು ಕೊಡತಕ್ಕ 7 ಲಕ್ಷ ರೂಪಾಯಿನಲ್ಲಿ ಯಾವ ಕೆಲಸವನ್ನೂ ಕೂಡ ಮಾಡುವುದಕ್ಕೆ ಸಾಧ್ಯವಾಗದೇ ಅಲ್ಲಿ ಯಾವ ಕೆಲಸಕಾರ್ಯಗಳೂ ಕೂಡ ಆಗುತ್ತಿಲ್ಲ, ರಾತ್ರಿ ತರಗತಿ ನಡೆಸುವುದು, ಲೈಬ್ರರಿ ನಡೆಸುವುದು, ವಿದ್ಯಾಪೀಠಗಳನ್ನು ಸರಿಯಾದ ರೀತಿಯಲ್ಲಿ ನಡೆಸುವುದಕ್ಕೆ ಆಗುತ್ತಾ ಇಲ್ಲ. ಇದರ ಬಗ್ಗೆ ಹೆಚ್ಚಿನ ಗಮನವನ್ನು ಕೊಡಬೇಕೆಂದು ಹೇಳಿ ಮತ್ತೊಮ್ಮೆ ಮಾನ್ಯ ಆರ್ಥಿಕ ಮಂತ್ರಿಗಳು ಬಹಳ ಕಷ್ಟಪಟ್ಟು ತಯಾರು ಮಾಡಿದಂತಹ ಈ ಒಂದು ಭಾಷಣದ ಬಗ್ಗೆ ಅವರನ್ನು ಅಭಿನಂದಿಸುತ್ತೇನೆ. ರಾಮಕೃಷ್ಣ ಹೆಗಡೆಯವರು ಏನಾದರೂ ಮಾಡಿ ಸರಿತೂಗಿಸಲು ಪ್ರಯತ್ನ ಮಾಡುತ್ತಾ ಇದ್ದಾರೆ. ಅದು ಸರಿಯಾದಂತಹ ಮಾರ್ಗವಲ್ಲ, ನಮಗೆ ಗೊತ್ತು ಇದು ಸರ್ಪ್ಲಸ್ ಬಡ್ಜೆಟ್ ಅಲ್ಲ, ಸಾಲ ತೆಗೆದು ಕೊಂಡ ಮೇಲೆ ಸರ್‌ಪ್ಲಸ್ ಬಡ್ಜೆಟ್ ಹೇಗೆ ಆಗುತ್ತದೆ? ಆದ್ದರಿಂದ ಇದು ಉಳಿತಾಯದ ಬಡ್ಜೆಟ್ಟು ಅಂತ ಖಂಡಿತ ಒಪ್ಪುವುದಕ್ಕಾಗುವುದಿಲ್ಲ.

ಎನ್.ಜಿ.ಓ.ಗಳಿಗೆ ಕೊಟ್ಟಿರತಕ್ಕ ದುಡ್ಡು ಬಾಲಕ್ಕೆ ಒಂದು ಗಂಟೆ ಕಟ್ಟಿದ ಹಾಗೆ ಕಟ್ಟಿದ್ದೀರಿ, ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟ್ ಅಂತ. ಅಂಥಾದ್ದು ಯಾವುದೂ ಬೇಡ, ಕೊಡುವುದೆಲ್ಲವನ್ನೂ ಪೂರ್ತಿ ಹಣದ ರೂಪದಲ್ಲಿ ಮನಃಪೂರ್ವಕವಾಗಿ ಕೊಡಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸೋಲೂರು ಸಿದ್ದಪ್ಪ (ಕುದೂರು).—ಸನ್ಮಾನ್ಯ ಸಭಾಪತಿಗಳೇ, ಈ ದಿವಸ ನಮ್ಮ ಹಣಕಾಸಿನ ಸಚಿವರು ಬಹಳ ಸಾಹಸ ಮಾಡಿ ಉಳಿತಾಯ ಬಡ್ಜೆಟ್ಟನ್ನು ಮಂಡಿಸಿದ್ದಾರೆ. ಅದು ದೇಶಕ್ಕೂ ಮತ್ತು ನಮ್ಮೆಲ್ಲರಿಗೂ ಬಹಳ ಸಂತೋಷವನ್ನುಂಟುಮಾಡಿದೆ. ಅವರು 190 ಕೋಟಿ ರೂಪಾಯಿಗಳ ಬಡ್ಜೆಟ್ಟನ್ನು ಬಹಳ ಚಾಕಚಕ್ಯತೆಯಿಂದ ತಯಾರಿಸಿ ನಮ್ಮ ಮುಂದಿಟ್ಟಿದ್ದಾರೆ. ಅಷ್ಟೇ ಅಲ್ಲ, ಅವರು ಈ ವರ್ಷದ ಬಡ್ಜೆಟ್ಟಿನಲ್ಲಿ ಹಿಂದಿನ ಸಾಲಿಗಿಂತ ಹೆಚ್ಚು ಹಣವನ್ನು ಎಲ್ಲ ಇಲಾಖೆಗಳಿಗೂ ಒದಗಿಸಿದ್ದಾರೆ. ಆದರೆ ಈ ಪೈಕಿ ಕೆಲವು ಬಾಬುಗಳಿಗೆ ಇನ್ನೂ ಹೆಚ್ಚಿನ ಹಣವನ್ನು ಒದಗಿಸಬೇಕಾಗಿತ್ತು ಎಂಬುದು ನನ್ನ ಅಭಿಪ್ರಾಯ.

ಈಗ ವಿದ್ಯಾ ಇಲಾಖೆಗೆ ಒದಗಿಸಿರತಕ್ಕ ಹಣ ಸಾಲದು. ಅದಕ್ಕೆ ಕಾರಣವಿಷ್ಟೇ— ಸಂಸ್ಥಾನಾಮಳೆ ಪ್ರೌಢಶಾಲೆಗಳು ಹೆಚ್ಚಿನ ಮಟ್ಟದಲ್ಲಿ ಸ್ಥಾಪನೆಯಾದರೆ ರಾಜ್ಯದಲ್ಲಿ ಹೆಚ್ಚಿನ ಮಟ್ಟದಲ್ಲಿ ವಿದ್ಯಾರ್ಜನೆಯಾಗಿ ದೇಶದಲ್ಲಿ ಪ್ರಜಾಪ್ರಭುತ್ವಾಡಳಿತ ಬಂದಿರುವುದಕ್ಕೆ ನಾವು ಮಾನ್ಯತೆಯನ್ನು ಕೊಟ್ಟಹಾಗೆ ಆಗುತ್ತದೆ ಅನ್ನುವುದು ಒಂದು. ಇನ್ನು ರಾಜ್ಯದಲ್ಲಿರತಕ್ಕ ರೈತಾಪಿ ಜನರ ಮಕ್ಕಳಿಗೂ ಮತ್ತು ಬಡವರ ಮಕ್ಕಳಿಗೂ ವಿದ್ಯಾರ್ಜನೆಯ ಸೌಲಭ್ಯ ಹೆಚ್ಚುವುದರಿಂದ ಅವರಿಗೂ ಹೆಚ್ಚಿನ ಅನುಕೂಲವಾಗುತ್ತದೆ. ಮತ್ತು ಇನ್ನು ಮುಂದಕ್ಕೆ ಈ ಎಲ್ಲ ಪ್ರೌಢಶಾಲೆಗಳ ಆಡಳಿತವನ್ನೂ ಸರ್ಕಾರದವರೇ ತಮ್ಮ ಸುಫರ್ದಿಗೆ ತೆಗೆದುಕೊಂಡರೆ ಈ ವಿದ್ಯಾರ್ಜನೆ ಒಂದು ಸುರಕ್ಷಿತ ರೀತಿಯಲ್ಲಿ ನಡೆದು ಹಾಗೂ ಆ ನೌಕರವರ್ಗದ ಹತೋಟಿ ಬಿಗಿಯಾದ ರೀತಿಯಲ್ಲಿದ್ದು ಇದರಿಂದ ಎಲ್ಲರಿಗೂ ಒಳ್ಳೆಯದಾಗುತ್ತದೆಂದು ನಾನು ತಿಳಿದಿದ್ದೇನೆ.

ಇನ್ನು ರೆವಿನ್ಯೂ ಇಲಾಖೆಯ ವಿಚಾರಕ್ಕೆ ಬಂದರೆ—ಕಂದಾಯವನ್ನು ರೆಮಿಷನ್ ಮಾಡುವ ವಿಚಾರದಲ್ಲಿ ನಾವು ಹಿಂದಿನಿಂದಲೂ ಇದನ್ನು ಮಾಡಬೇಕೆಂದು ಒತ್ತಾಯ ಮಾಡುತ್ತಲೇ ಬಂದಿದ್ದೇವೆ. ಆದರೆ ಈ ದಿವಸ ಈ ಬಡ್ಜೆಟ್ಟನ್ನು ಮಂಡಿಸುವ ಪ್ರಥಮದಲ್ಲೇ ನಮ್ಮ ಸಚಿವರು ಕಂದಾಯವನ್ನು ತೆಗೆದುಹಾಕಲು ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ಅದನ್ನು ತೆಗೆದುಹಾಕಲು ಸಾಧ್ಯವಿಲ್ಲ ಅನ್ನು

ವಂಥ ಒಂದು ಪ್ರಶ್ನೆ ಉದ್ಭವವಾಗಿದೆ. ಆದರೆ ಇದರ ಬಗ್ಗೆ ನಾನು ಈ ಸಂದರ್ಭದಲ್ಲಿ ಸಲಹೆ ಮಾಡಬೇಕೆಂದಿರುವುದಾದರೂ ಇಷ್ಟೇ: ದೇಶದಲ್ಲಿ ಎಲ್ಲೆಲ್ಲಿ ನಾಲ್ಕಾಣಿ ಬೆಳೆ ಇದೆಯೋ ಅಥವಾ ಅದಕ್ಕೂ ಕಡಮೆ ಬೆಳೆ ಇದೆಯೋ ಅಂಥ ಜಮೀನುಗಳ ಬಗ್ಗೆ ಎಲ್ಲ ಲೆಕ್ಕಪತ್ರಗಳನ್ನೂ ಜಿಲ್ಲಾಧಿಕಾರಿಗಳ ಮೂಲಕ ಕೂಡಲೆ ತರಿಸಿಕೊಂಡು ಕೂಡಲೆ ಇಂಥ ಜಮೀನುಗಳಿಗೆಲ್ಲಾ ರೆಮಿಷನ್ ಕೊಟ್ಟು ಇನ್ನು ಉಳಿಯತಕ್ಕ ಭೂಮಾಲಿಕರಿಂದ ಸರ್ಕಾರಕ್ಕೆ ಬರಬೇಕಾದ ಕಂದಾಯ ಎಷ್ಟು ಉಳಿದಿದೆಯೋ ಅದನ್ನು ವಸೂಲ್ಮಾಡುವುದಕ್ಕೆ ಕೂಡಲೆ ಕ್ರಮ ಕೈಗೊಳ್ಳಬೇಕೆಂದು ಸಲಹೆ ಮಾಡುತ್ತೇನೆ. ಇನ್ನು ದೇಶದಲ್ಲಿ ಇಲ್ಲಿಯವರೆಗೂ ಕೆಲಸ ಮಾಡುತ್ತಿದ್ದ ಪಟೇಲ್ ಶ್ಯಾನುಭೋಗರನ್ನು ಕೆಲಸದಿಂದ ವಜಾ ಮಾಡಿ ಅಲ್ಲೆಲ್ಲಾ ಸೆಕ್ರೆಟರಿಗಳನ್ನು ನೇಮಕ ಮಾಡಲಾಗಿದೆ. ಆದರೆ ಈ ವಿಚಾರದಲ್ಲಿ ಸರ್ಕಾರದವರು ಸಾಕಷ್ಟು ಮುನ್ನೆಚ್ಚರಿಕೆ ತೆಗೆದುಕೊಂಡಿಲ್ಲ. ಕೆಲವು ಕಡೆ ಆ ಕಾರ್ಯದರ್ಶಿಗಳನ್ನಿನ್ನೂ ನೇಮಕ ಮಾಡದಿರುವುದರಿಂದ ಅಲ್ಲಿ ವಸೂಲಿಯ ಕೆಲಸ ಹಾಗೇ ನಿಂತುಹೋಗಿದೆ. ಯಾವಾಗ ಸರ್ಕಾರದವರು ಇಂಥ ವಿಚಾರದಲ್ಲಿ ಒಂದು ನಿರೂಪಣೆಯನ್ನು ಹೊರಡಿಸಿದರೋ ಆಗ ಅದರ ಬಗ್ಗೆ ಮುನ್ನೆಚ್ಚರಿಕೆಯನ್ನು ಮುಂಜಾಗ್ರತೆಯನ್ನು ಅವರು ಕೈಗೊಳ್ಳಲೇಬೇಕು. ಅದು ಅಗತ್ಯ. ಆದುದರಿಂದ ದೇಶಾದ್ಯಂತವೂ ಈ ಸೆಕ್ರೆಟರಿಗಳನ್ನು ನೇಮಿಸಿಕೊಳ್ಳಲು ಸಂಬಂಧಪಟ್ಟವರು ಕೂಡಲೇ ಪೂರ್ಣ ಮನಸ್ಸುಮಾಡಬೇಕು ಎಂಬುದಾಗಿ ನಾನಾದರೂ ಈ ಸಂದರ್ಭದಲ್ಲಿ ಸಲಹೆ ಮಾಡುವುದಕ್ಕೆ ಇಷ್ಟ ಪಡುತ್ತೇನೆ.

ಇನ್ನು ಮುಜ್ರಾಯಿ ಇಲಾಖೆಗೆ ಸಂಬಂಧಪಟ್ಟ ಜಮೀನುಗಳ ಮತ್ತು ದೇವಾಲಯಗಳ ವಿಚಾರಕ್ಕೆ ಬಂದರೆ—ದೇಶಾದ್ಯಂತ ಲಕ್ಷಾಂತರ ಎಕರೆ ಮುಜ್ರಾಯಿಗೆ ಸಂಬಂಧಪಟ್ಟ ಜಮೀನಿದೆ. ಇದನ್ನು ಹಿಂದಿನ ರಾಜ ಮಹಾರಾಜರುಗಳು ಆ ಸಂಸ್ಥೆಗಳಿಗೆ ಕೊಟ್ಟಿದ್ದಾರೆ. ಅಲ್ಲಿನ ಖರ್ಚುವೆಚ್ಚಗಳಿಗೆ ಈ ದಿವಸ ಸಾಕಷ್ಟು ಹಣವಿಲ್ಲ. ಅದಕ್ಕಾಗಿ ನಾನು ಈ ಸಂದರ್ಭದಲ್ಲಿ ಸಲಹೆ ಮಾಡುವುದೇನೆಂದರೆ—ಈ ದಿವಸ ಜಮೀನಿಗೆ ಬಹಳ ಬೆಲೆಯಿದೆ; ಆದುದರಿಂದ ಆ ಜಮೀನುಗಳನ್ನೆಲ್ಲಾ ಮಾರಾಟ ಮಾಡಿದರೆ ಹೆಚ್ಚು ಹಣ ಬರುತ್ತದೆ. ಆ ಹಣದಿಂದ ಗುಡಿಗೋಪುರಗಳನ್ನು ಅಭಿವೃದ್ಧಿಪಡಿಸಿ ಅವುಗಳನ್ನು ಉತ್ತಮ ಸ್ಥಿತಿಗೆ ತರಲು ಸಾಧ್ಯವಾಗುತ್ತದೆ ಎಂದು ಹೇಳುತ್ತೇನೆ. ಅಷ್ಟೇ ಅಲ್ಲದೆ ಆ ಜಮೀನುಗಳನ್ನು ಜಮೀನಿಲ್ಲದ ಬಡಬಗ್ಗರಿಗೆ ಮಾರಾಟ ಮಾಡುವುದರಿಂದ ಇತ್ತಲಾಗಿ ಮುಜ್ರಾಯಿ ಇಲಾಖೆಗೆ ಸಂಬಂಧಪಟ್ಟ ಸಣ್ಣ ದೊಡ್ಡ ದೇವಾಲಯಗಳು ಶಾಶ್ವತವಾಗಿ ಅಭಿವೃದ್ಧಿಯಾಗುವುದೇ ಅಲ್ಲದೆ ಅತ್ತ ದೇಶದಲ್ಲಿ ಆ ಮಾರಾಟವಾದ ಭೂಮಿಯಿಂದ ಹೆಚ್ಚು ಬೆಳೆ ಬೆಳೆಯುವುದಕ್ಕೂ ಸಹಾಯವಾಗುತ್ತದೆ. ಆದುದರಿಂದ ಆ ಭೂಮಿಗಳನ್ನು ಮಾರಾಟ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಫಾರೆಸ್ಟ್ ಇಲಾಖೆಯ ವಿಚಾರಕ್ಕೆ ಬಂದರೆ—ಫಾರೆಸ್ಟ್ ಪ್ರದೇಶದಲ್ಲಿ ಎಲ್ಲೆಲ್ಲಿ ನಾದುರಸ್ತಾದ ಜಮೀನಿದೆಯೋ ಅದನ್ನೂ ಮತ್ತು ಫಾರೆಸ್ಟ್ ಇಲಾಖೆಗೆ ಪ್ರಯೋಜನಕ್ಕೆ ಬಾರದ ಜಮೀನನ್ನು ಮತ್ತು ಗೋಮಾಳ ಭೂಮಿಗಳನ್ನೂ ಆಯಾ ಗ್ರಾಮಗಳಲ್ಲಿ ಜಮೀನಿಲ್ಲದ ಜನರಿಗೆ ಹಂಚಿಕೆ ಮಾಡುವುದರ ಮೂಲಕ ದೇಶದಲ್ಲಿ ಕೃಷಿ ಉತ್ಪನ್ನವನ್ನು ಹೆಚ್ಚಿಸಿ ಹಾಗೂ ದೇಶದಲ್ಲಿರತಕ್ಕ ಬಡ ಜನತೆ ಅವರೂ ಸಹಾ ನಮ್ಮ ಸರಿಸಮಾನರಾಗಿ ದೇಶದ ಸತ್ಪ್ರಜೆಗಳಾಗಿ ಆಗುವುದಕ್ಕೆ ಇದರಿಂದ ಅನುಕೂಲವಾಗುತ್ತದೆಂದು ನಾನು ಈ ವಿಚಾರವನ್ನು ಹೋದ ಬಡ್ಜೆಟ್ ಅಧಿವೇಶನದ ಕಾಲದಲ್ಲೇ ಸಲಹೆ ಮಾಡಿದ್ದೆ. ಆದರೆ ಅದನ್ನಿನ್ನೂ ಕಾರ್ಯರೂಪಕ್ಕೆ ತಂದಿಲ್ಲ. ನಾವು ಇಲ್ಲಿ ಹೀಗೆ ಬಡ್ಜೆಟ್ ಅಧಿವೇಶನದ ಕಾಲದಲ್ಲಿ ಮಾಡತಕ್ಕ ಸಲಹೆಗಳಲ್ಲಿ ಸಾಧ್ಯವಾದಷ್ಟನ್ನು ಸರ್ಕಾರದವರು ಕಾರ್ಯರೂಪಕ್ಕೆ ತರಬೇಕು. ಇದರಿಂದ ದೇಶದಲ್ಲಿರತಕ್ಕ ಪ್ರಜೆಗಳಿಗೂ ಅನುಕೂಲವಾಗಿ ಸರ್ಕಾರಕ್ಕೂ ಹೆಚ್ಚಿನ ಆದಾಯ ಬರುತ್ತದೆ ಎಂಬುದಾಗಿ ನಾನಾದರೋ ಭಾವಿಸಿದ್ದೇನೆ.

ಇನ್ನು ಎಕ್ಸೈಜ್ ಇಲಾಖೆಯ ವಿಚಾರಕ್ಕೆ ಬಂದರೆ—ಕೆಲವು ವರ್ಷಗಳ ಕಾಲ ನಾವು ಇದನ್ನು ದೇಶದಲ್ಲಿ ರದ್ದು ಮಾಡಿದ್ದೆವು. ನಾವು ಯಾವ ಒಂದು ಸದುದ್ದೇಶದಿಂದ ಪಾನನಿರೋಧವನ್ನು ದೇಶದಲ್ಲಿ ರದ್ದುಮಾಡಿದ್ದೆವೋ ಅದರಿಂದ ಸತ್ಪರಿಣಾಮವಾಗುವುದರ ಬದಲು ಹೆಚ್ಚಿನ ದುಷ್ಪರಿಣಾಮವೇ ಆಯಿತು. ನಾವು ಬಯಸಿದ್ದ ಉದ್ದೇಶ ಸಫಲವಾಗಲಿಲ್ಲ. ಆದ್ದರಿಂದ ಅದನ್ನು ಈ ದಿವಸ ರದ್ದು ಮಾಡಿ ಮತ್ತೆ ಶೇಂದಿ ಅಂಗಡಿಗಳನ್ನು ಹರಾಜ್ ಮಾಡತಕ್ಕ ಅವಶ್ಯಕತೆ ಉಂಟಾಯಿತು. ಅದರಿಂದ ಸರ್ಕಾರಕ್ಕೆ ಹಣವನ್ನು ರೂಢಿಸಲು ಅನುಕೂಲವಾಗುತ್ತದೆ. ಆದರೆ ದೇಶದಲ್ಲಿ ಮೊದಲಿನ ಹಾಗೆ ಈ ದಿವಸ ಈಚಲುವನಗಳಿಲ್ಲ. ಆದುದರಿಂದ ಈ ದಿವಸ ತೆಂಗಿನ ಮರಗಳಿಂದ ಶೇಂದಿಯನ್ನು ಉತಾರ್‌ಮಾಡಲಾಗುತ್ತದೆ. ಈ ವಿಚಾರದಲ್ಲಿ ನಾನಾ ರೂ ಸಲಹೆ ಮಾಡುವುದೇನೆಂದರೆ—ರಾಜ್ಯದಲ್ಲಿ ಈ ದಿವಸ ಈಚಲುವನ ಇರತಕ್ಕ ಭೂಮಿ ಎಲ್ಲೆಲ್ಲಿ ಉಳಿದಿದೆಯೋ ಅದನ್ನು ಸರ್ಕಾರದವರು ತಮ್ಮ ವಶಕ್ಕೆ ತೆಗೆದುಕೊಂಡು ಅದನ್ನು ವೃದ್ಧಿಪಡಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

(ಶ್ರೀ ಸೋಲೂರು ಸಿದ್ದಪ್ಪ)

ಇನ್ನು ವಿದ್ಯಾಭ್ಯಾಸ ವಿಚಾರದಲ್ಲಿ ಒಂದು ಮಾತನ್ನು ಹೇಳಲಿಚ್ಛಿಸುತ್ತೇನೆ : ಇದರ ಬಗೆಗೆ ನಾನು ಒಂದು ವಿಷಯ ಪ್ರಸ್ತಾಪಮಾಡುವುದನ್ನು ಮರೆತಿದ್ದೆ. ವಿದ್ಯಾಮಂದಿರಗಳನ್ನು ಕಟ್ಟಿಸತಕ್ಕ ವಿಚಾರದಲ್ಲಿ ಈ ದಿವಸ ಏನೊಂದು ತೊಂದರೆಯಿದೆ ಎಂಬುದನ್ನು ವಿದ್ಯಾಮಂತ್ರಿಗಳು ಕಂಡುಹಿಡಿದು ಅದರ ನಿವಾರಣೆಯಲ್ಲಿ ಅವರು ನಿರತರಾಗಬೇಕು. ತಾಲ್ಲೂಕ್ ಬೋರ್ಡಿನವರು ಈ ಶಾಲಾ ಕಟ್ಟಡಗಳ ಬಗ್ಗೆ ಒಂದು ಸಾವಿರ ರೂಪಾಯಿಗಳ ಗ್ರಾಂಟನ್ನು ಕೊಡಬೇಕೆಂದರೆ ಅವರಿಗೆ ಸಾಧ್ಯವಿಲ್ಲ. ಹೀಗಾಗಿ ಅನೇಕ ಕಡೆಗಳಲ್ಲಿ ಪ್ರಾಥಮಿಕ ಶಾಲೆಗಳಿಲ್ಲದೆ ಮಕ್ಕಳ ವಿದ್ಯಾಭ್ಯಾಸ ಮರದ ಕೆಳಗೆ ನಡೆಯಬೇಕಾಗಿದೆ. ಆದುದರಿಂದ ಈ ವಿಚಾರದಲ್ಲಿ ಸರ್ಕಾರದವರು ಈ ಗ್ರಾಂಟನ್ನು 2 ಸಾವಿರ ರೂಪಾಯಿಗಳಿಗೆ ಏರಿಸಿ ಅದರಲ್ಲಿ ಒಂದು ಸಾವಿರವನ್ನು ಸರ್ಕಾರದವರು ಕೊಟ್ಟು ಇನ್ನುಳಿದ ಒಂದು ಸಾವಿರವನ್ನು ಗ್ರಾಮಪಂಚಾಯಿತಿಗಳಿಂದ ಕೊಡಿಸುವುದಕ್ಕೆ ಏರ್ಪಾಡು ಮಾಡಬೇಕಾಗಿ ಪ್ರಾರ್ಥನೆ ಮಾಡುತ್ತೇನೆ. ಸರ್ಕಾರದವರು ಇದನ್ನು ಕಾರ್ಯಗತ ಮಾಡಬೇಕಾದ್ದು ಅಗತ್ಯವೆಂದು ನಾನು ಭಾವಿಸಿದ್ದೇನೆ. ಈ ದಿವಸ ತಾಲ್ಲೂಕ್ ಬೋರ್ಡುಗಳ ಉತ್ಪನ್ನ ಸಾಕಾಗುವುದಿಲ್ಲ. ಅದಕ್ಕಾಗಿ ಆಯಾಯ ತಾಲ್ಲೂಕಿನಲ್ಲಿ ಸಬ್‌ರಿಜಿಸ್ಟ್ರಾರ್ ಆಫೀಸಿನಲ್ಲಿ ರಿಜಿಸ್ಟರ್ ಆಗತಕ್ಕ ಕಾಗದ ಪತ್ರಗಳ ಫೀಜಿನಲ್ಲಿ ನೂರಕ್ಕೆ ಮೂರು ರೂಪಾಯಿಗಳಂತೆ ಆ ದರವನ್ನು ಹೆಚ್ಚುಮಾಡಿ ಆ ಹೆಚ್ಚಿಗೆ ಬರತಕ್ಕ ಹಣವನ್ನು ತಾಲ್ಲೂಕ್ ಬೋರ್ಡುಗಳಿಗೆ ಕೊಟ್ಟರೆ ಅವರಿಗೆ ಆಗ ಈ ಶಾಲಾಕಟ್ಟಡಗಳನ್ನು ಕೈಗೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಜನರಿಂದ ಬರತಕ್ಕ ಹಣವನ್ನು ಜನರ ಅಭಿವೃದ್ಧಿಗೆ ವಿನಿಯೋಗ ಮಾಡಿದಹಾಗೆ ಆಗುತ್ತದೆ. ಸರ್ಕಾರಕ್ಕೆ ಪ್ರಜೆಗಳಿಂದ ನಾನಾ ಮುಖವಾಗಿ ಬರತಕ್ಕ ಹಣವನ್ನು ನಾನಾ ರೀತಿ ಯಲ್ಲಿ ಜನರಿಗೇ ಹಿಂದಿರುಗಿಸಿದಂತೆ ಆಗುತ್ತದೆ. ಅದರಿಂದ ಜನರೂ ತೃಪ್ತರಾಗುತ್ತಾರೆ. ಆದ್ದರಿಂದ ಇದನ್ನು ಸಂಬಂಧಪಟ್ಟ ಇಲಾಖೆಯ ಮಂತ್ರಿಗಳು ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಪಿ.ಡಬ್ಲ್ಯು.ಡಿ. ವಿಚಾರಕ್ಕೆ ಬಂದರೆ—ಸಣ್ಣ ಸಣ್ಣ ಕೆರೆಗಳ ಹಾಗೂ ಪಿಕಪ್‌ಗಳ ಬಗ್ಗೆ ಹೆಚ್ಚು ಹಣವನ್ನು ಒದಗಿಸಬೇಕಾಗಿತ್ತು. ಈಗ ಒದಗಿಸಿರತಕ್ಕದ್ದು ಸಾಲದು. ದೊಡ್ಡ ದೊಡ್ಡ ಜಲಾಶಯಗಳನ್ನು ಕಟ್ಟುವುದಕ್ಕೆ ಹೆಚ್ಚಿನ ಹಣವನ್ನು ಖರ್ಚು ಮಾಡುವ ಕಾರ್ಯವನ್ನು ನಮ್ಮ ಸರ್ಕಾರ 10 ವರ್ಷಗಳಿಂದೀಚೆಗೆ ಕೈಗೊಂಡಿದೆ; ಸಂತೋಷ. ದೊಡ್ಡ ದೊಡ್ಡ ಜಲಾಶಯಗಳನ್ನು ಮಾಡುವುದರಲ್ಲಿ ಯಾರಿಗೂ ಅಭ್ಯಂತರವಿಲ್ಲ. ಆದರೆ ಒಂದು ಕಾರ್ಯ ಮಾಡಬೇಕು. ಬೆಂಗಳೂರು ಜಿಲ್ಲೆಯಲ್ಲಿ ಮಾಗಡಿ ತಾಲ್ಲೂಕಿನಲ್ಲಿ 225 ಕೆರೆಗಳಿವೆ. ಅದರಲ್ಲಿ ಸಣ್ಣ ಕೆರೆಗಳು 180 ಇವೆ. ಅಲ್ಲಿ ಸರ್ಕಾರದವರು ಹೆಚ್ಚಿನ ಬೆಳೆಯನ್ನು ಬೆಳೆದು ತನ್ಮೂಲಕ ಕೃಷಿ ಸಂಪತ್ತನ್ನು ಹೆಚ್ಚಿಸಿ ಧಾನ್ಯವನ್ನು ಯಥೇಚ್ಛವಾಗಿ ಬೆಳೆಯಬೇಕೆಂಬ ಯೋಜನೆಯನ್ನು ಇಟ್ಟು ಕೊಂಡಿದ್ದಾರೆ. ಅದರ ಬಗೆ ಇನ್ನೂ ಪೂರ್ಣ ವಿಚಾರ ಮಾಡಿ ಲಾಭ ಪಡೆಯುವುದರ ಜೊತೆಗೆ ರೈತನ ಏಳಿಗೆಗೂ ಗಮನಕೊಟ್ಟಂತಾಗುತ್ತದೆಂಬ ಅಂಶವನ್ನು ನಾನು ಸರ್ಕಾರಕ್ಕೆ ಒತ್ತಾಯ ಮಾಡಿ ಹೇಳುತ್ತಿದ್ದೇನೆ.

5-30 P.M.

ಇನ್ನು ಸಾರಿಗೆ ವಿಷಯದಲ್ಲಿ ಸಂಬಂಧಪಟ್ಟ ಮಂತ್ರಿಗಳಲ್ಲಿ ಒಂದು ವಿಷಯ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಸಾರಿಗೆ ಸೌಕರ್ಯ ಹೆಚ್ಚಿನ ಮಟ್ಟದಲ್ಲಿ ದೇಶದ ಮೂಲೆಮೂಲೆಗಳಲ್ಲಿಯೂ ನಡೆದಿದೆ. ಇನ್ನೂ ಅದರ ಅಭಿವೃದ್ಧಿ ಬಗ್ಗೆ ಕೋಟಿಗಟ್ಟಲೆ ರೂಪಾಯಿಗಳನ್ನು ಬಂಡವಾಳ ಹಾಕಿ ಅದನ್ನು ಇನ್ನೂ ಹೆಚ್ಚಿನ ಮಟ್ಟದಲ್ಲಿ ಪ್ರಜೆಗಳಿಗೆ ಎಲ್ಲಾ ರೀತಿಯಲ್ಲಿಯೂ ಸೌಕರ್ಯಗಳನ್ನು ಒದಗಿಸುವ ವ್ಯವಸ್ಥೆ ಮಾಡಬೇಕು. ಇದಕ್ಕೆ ಬಹಳ ಹೆಚ್ಚಿನ ಮಹತ್ವವನ್ನು ಸಾರಿಗೆ ಇಲಾಖೆಯಲ್ಲಿರುವ ಅಧಿಕಾರಿಗಳು ಕೊಡಬೇಕು. ಅವರಿಂದ ಯಾವ ರೀತಿಯಲ್ಲಿಯೂ ದುರುಪಯೋಗವಾಗದೆ ಪ್ರತಿ ಯೊಂದು ಹಂತದಲ್ಲಿಯೂ ಕಾವಲು ಇಟ್ಟು ಹೆಚ್ಚಿನ ಸೌಕರ್ಯಗಳನ್ನು ಪ್ರಜೆಗಳಿಗೆ ಕೊಡಬೇಕು. ನೇರವಾಗಿ ಇದರಿಂದ ಜನಗಳಿಗೆ ಅನುಕೂಲವಾಗುವಂತೆ ತಕ್ಕ ವ್ಯವಸ್ಥೆಗಳನ್ನು ಮಾಡುವುದಕ್ಕೆ ಸಂಬಂಧಪಟ್ಟ ಮಂತ್ರಿಗಳೂ ಸಹ ಗಮನಿಸಬೇಕಾದುದು ಅವಶ್ಯಕ. ಈಗಿನ ಡ್ರೈವರ್‌ಗೆ ಸಾಕಷ್ಟು ಟ್ರೈನಿಂಗ್ ಇಲ್ಲ, ಕಂಡಕ್ಟರುಗಳಿಗೂ ಶಿಕ್ಷಣವಿಲ್ಲ. ಇಂತಹವರನ್ನು ಹೆಚ್ಚು ಸಂಖ್ಯೆಯಲ್ಲಿ ಸೇರಿಸಿ ಕೊಂಡಿರುವುದರಿಂದಲೇ ಇತ್ತೀಚೆಗೆ ಬಹಳವಾಗಿ ಅಪಾಯಗಳು ಉಂಟಾಗುತ್ತಿವೆ. ಇದರಿಂದ ದೇಶದ ಜನರಿಗೆ ನೆಮ್ಮದಿ ಇಲ್ಲ, ಭಯವಿದೆ. ಅದ್ದರಿಂದ ಸುಶಿಕ್ಷಿತರಾದ ಡ್ರೈವರ್‌ಗಳನ್ನು ನೇಮಿಸ ಬೇಕಾದುದು ಅವಶ್ಯಕವಾಗಿದೆ.

ಇನ್ನೊಂದು ವಿಷಯ. ಅನೇಕ ಅನಾವಶ್ಯಕವಾದಂಥ ಇಲಾಖೆಗಳು ಕಾರಣಾಂತರದಿಂದ ಉಳಿದಿವೆ. ಅವಿನ್ನೂ ಮುಂದುವರೆಯುತ್ತಲೇ ಇವೆ. ಅವನ್ನೆಲ್ಲಾ ಚೆನ್ನಾಗಿ ಪರಿಶೀಲಿಸಿ ಸಾಧ್ಯವಾದ ಮಟ್ಟಿಗೂ ಕೆಲವು ಇಲಾಖೆಗಳನ್ನು ರದ್ದುಮಾಡುವುದರ ಮೂಲಕ ಉಳಿಯುವ ಮೊಬಲಗನ್ನು ಸರ್ಕಾರದವರು ಕೃಷಿ ಇಲಾಖೆಗೆ ಮತ್ತು ಅದರ ಯೋಜನೆಗಳಿಗೆ, ಹಾಗೂ ನೀರಾವರಿ ಸೌಲಭ್ಯಗಳಿಗೆ, ಕರೆಂಟಿನ ಅನುಕೂಲಕ್ಕೆ ಒದಗಿಸಬೇಕಾದುದು ಅವಶ್ಯಕ. ಈಗ ನಮ್ಮ ಮಾನ್ಯ ಸ್ನೇಹಿತರು ಕೆಲವರು ಈ ವಿದ್ಯುಚ್ಛಕ್ತಿ ಇಲಾಖೆಯ ವಿಷಯವಾಗಿ ಬಹಳ ಹೊತ್ತು ಮಾತನಾಡಿದ್ದಾರೆ. ಅನೇಕರು ಕೆಲವು ಸಲಹೆಗಳನ್ನೂ ಸಹ ಮಾಡಿದ್ದಾರೆ. ರೈತರಿಗೆ ಕೊಡುವುದು ಏನು ಪಂಪು ಸೆಟ್ಟು ವಗೈರೆ ಇವೆ ಅದಕ್ಕೆ ಬೇಕಾಗುವ ಕರೆಂಟ್ ಸೌಲಭ್ಯವನ್ನು ಈಗಿರತಕ್ಕ ಮಟ್ಟಕ್ಕಿಂತ ಉತ್ತಮ ಪಡಿಸುವುದು ಅವಶ್ಯಕ. ಕರೆಂಟ್ ಉತ್ಪಾದನೆಯನ್ನು ಹೆಚ್ಚಿಗೆ ಮಾಡಬೇಕು ನಿಜ. ಹೊರ ಪ್ರಾಂತಗಳಿಗೆ ಕರೆಂಟ್ ಕೊಡುವ ಮನಸ್ಸು ಸರ್ಕಾರಕ್ಕೆ ಇದ್ದರೆ ನಮ್ಮ ದೇಶದ ಜನರಿಗೆ ನಮ್ಮಲ್ಲಿ ಉತ್ಪಾದನೆಯಾದಂಥ ಕರೆಂಟನ್ನು ಕಡಿಮೆ ಬೆಲೆಯಲ್ಲಿ ಕೊಡುವ ಒಂದು ಪ್ರೋತ್ಸಾಹವನ್ನು ಈಗ ಒದಗಿಸಬೇಕಾದುದು ಅಗತ್ಯ.

ಇನ್ನು ಮೈಸೂರು ರಾಜ್ಯದಲ್ಲಿ ನಮ್ಮ ಸ್ನೇಹಿತರು ಅನೇಕರು ಆಗಿಂದಾಗ್ಗೆ ಜನಗಳಿಂದ ಚುನಾಯಿತರಾಗಿ ಇಲ್ಲಿಗೆ ಬಂದಿದ್ದಾರೆ. ಅವರೆಲ್ಲರ ಬಗ್ಗೆ ನನಗೆ ಗೌರವವಿದೆ. ಅವರು ಬೇರೆ ಬೇರೆ ಪಕ್ಷಗಳಿಂದ ಇಲ್ಲಿಗೆ ಬಂದಿರಬಹುದು. ಕೆಲವರು ಮುಖ್ಯ ಮಂತ್ರಿಗಳ ವಿಚಾರದಲ್ಲಿ ಹೇಳುತ್ತಾ ಪದೇ ಪದೇ ಅವರು ರಾಜೀನಾಮೆ ಕೊಡಬೇಕು, ಮುಖ್ಯ ಮಂತ್ರಿಗಳ ಸ್ಥಾನಕ್ಕೆ ಅಥವಾ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಕೊಡಬೇಕು ಎಂಬುದಾಗಿ ಒಂದು ಸಲಹೆಯನ್ನು ನೀಡುತ್ತಿದ್ದಾರೆ. ಅವರಿಗೆ ನಾನು ಒಂದು ವಿಷಯವನ್ನು ಹೇಳಬೇಕಾಗಿದೆ. 4 ಕೋಟಿ ಜನರ ವಿಶ್ವಾಸವನ್ನು ಗಳಿಸಿದಂಥ ಮಾನ್ಯ ಮುಖ್ಯ ಮಂತ್ರಿಗಳು ಈಗ ನಮ್ಮೆಲ್ಲರ ಮತ್ತು ದೇಶದ ಬೆಂಬಲದಿಂದ 50 ಕೋಟಿ ಜನರ ನಾಯಕತ್ವವನ್ನು ವಹಿಸಿದ್ದಾರೆ. ಅದರ ಬಗ್ಗೆ ಯಾವುದೇ ಮನಸ್ಸಿನಲ್ಲಿ ವ್ಯತ್ಯಾಸವಿದ್ದರೂ ಕೂಡ ಯಾರೇ ಆಗಲಿ ನಮ್ಮ ಸಂತೋಷವನ್ನು ವ್ಯಕ್ತಪಡಿಸಬೇಕಾದುದು ಸಹಜ. ಹೇಗೆಂದರೆ ನಮ್ಮ ಪಕ್ಕದ ಮನೆಯ ಹುಡುಗನೇನಾದರೂ ಶ್ರೀಮಂತನಾದಾಗ ಅಥವಾ ಉತ್ತಮ ದರ್ಜೆಗೆ ಹೋದಾಗ ನಾವು ಸಂತೋಷವನ್ನು ವ್ಯಕ್ತಪಡಿಸುವುದು ಅವಶ್ಯಕ. ಆ ರೀತಿಯಾಗಿ ನಾವೆಲ್ಲರೂ ಅವರ ಬಗ್ಗೆ ನಮ್ಮ ಮೆಚ್ಚುಗೆಯನ್ನೂ ಹಾಗೂ ಸಂತೋಷವನ್ನು ವ್ಯಕ್ತಪಡಿಸಬೇಕಾದುದು ಸಹಜವಾಗಿದೆ. ಈ ದೇಶದಲ್ಲಿ ಹೆಚ್ಚಿನ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿರುವಾಗ, ಅದರಲ್ಲಿಯೂ ದೇಶ ಪ್ರಗತಿಯಾಗಿ ಮುಂದೆ ಬರುತ್ತಿರುವ ಕಾಲದಲ್ಲಿ ಇಂಥವರ ಮಾರ್ಗದರ್ಶನ ಮತ್ತು ನಾಯಕತ್ವ ನಮಗೆ ಅಗತ್ಯವಾಗಿದೆ. ಮಾನ್ಯ ಶ್ರೀ ನಿಜಲಿಂಗಪ್ಪನವರು ಸ್ವಾರ್ಥಕ್ಕಾಗಿ ಏನನ್ನೂ ಉಪಯೋಗಿಸುವುದಕ್ಕೆ ಅವಕಾಶವಿಲ್ಲ. ಏನು ಸೌಲಭ್ಯ ದೊರೆತರೂ ಅದು ಜನರಿಗೇ ಲಭಿಸುತ್ತದೆ. ಈಗ ಕೆಲವು ಕಾರಣಾಂತರಗಳಿಂದ ಅವರು ವಿಧಾನಸೌಧದಲ್ಲಿ ಮುಖ್ಯಮಂತ್ರಿಯಾಗಿಯೇ ಇರಬೇಕಾಗಿದೆ. ಏಕೆಂದರೆ, ಅನೇಕ ಕಷ್ಟ ಪರಂಪರೆಗಳು ಈಗ ದೇಶದಲ್ಲಿ ಉಂಟಾಗಿವೆ. ಆಹಾರಧಾನ್ಯಗಳ ಬಗ್ಗೆ, ಜನಗಳಿಗೆ ರಕ್ಷಣೆ ಕೊಡುವ ಬಗ್ಗೆ ನಾವೂ ನೀವೂ ಚೆನ್ನಾಗಿ ಆಲೋಚನೆ ಮಾಡಬೇಕಾದ ಸಂದರ್ಭಗಳೂ ಇವೆ. ಅವುಗಳನ್ನು ಪರಿಹರಿಸುವ ಕಾರ್ಯ ಈಗ ಬಹಳ ಅಗತ್ಯವಾಗಿದೆ.

ನಾನು ಇನ್ನು ಹೆಚ್ಚು ಹೊತ್ತು ಸಭೆಯ ಕಾಲವನ್ನು ತೆಗೆದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ಒಂದು ವಿಷಯ ಮಾತ್ರ ಇಲ್ಲಿ ಹೇಳುತ್ತೇನೆ. ರೆವಿನ್ಯೂ ಸಬ್ ಡಿವಿಜನ್ಸ್ ಎಂದು ನಮ್ಮ ಸಂಸ್ಥಾನದಲ್ಲಿವೆ. ಅವುಗಳ ಅಗತ್ಯತೆ ಅಷ್ಟಾಗಿ ಇಲ್ಲ. ಏನಾದರೂ ಅರ್ಜಿಯನ್ನು ಕೊಟ್ಟರೆ, ಅದು ತಹಸೀಲ್ದಾರಿಂದ ಅಮಲ್ದಾರರಿಗೆ ಅಮಲ್ದಾರರಿಂದ ಸಬ್ ಡಿವಿಜನ್ನಿಗೆ, ಪುನಃ ಸಬ್ ಡಿವಿಜನ್ನಿನಿಂದ ಡೆಪ್ಯುಟಿ ಕಮಿಷನರಿಗೆ ತಲುಪುವುದಕ್ಕೆ ಎಷ್ಟೋ ನಿಧಾನವಾಗುತ್ತದೆ. ಸಬ್ ಡಿವಿಜನ್ನಿನಲ್ಲಿರುವ ಅಧಿಕಾರಿಗಳು ನಿಜವಾಗಿ ಜಾಗ್ರತೆಯಾಗಿ ಕೆಲಸ ಮಾಡುತ್ತಾ ಇಲ್ಲ. ಈ ವಿಚಾರವನ್ನು ನಾನು ಅನೇಕ ವರ್ಷಗಳಿಂದಲೂ ಹೇಳುತ್ತಿದ್ದೇನೆ. ರೆವಿನ್ಯೂ ಸಬ್ ಡಿವಿಜನ್ ಆಫೀಸುಗಳ ರದ್ದಿಯಾತಿ ವಿಚಾರದಲ್ಲಿ ನಾನು ಅನೇಕ ಸಾರಿ ಈ ಸಭೆಯಲ್ಲಿ ಪ್ರಾರ್ಥನೆ ಮಾಡಿದ್ದೇನೆ. ಈಗಲು ಸರ್ಕಾರದವರು ಇದನ್ನು ಆಲೋಚನೆ ಮಾಡಬೇಕಾದಂಥ ಅಂಶ. ಅನಾವಶ್ಯಕವಾದಂಥ ಅನೇಕ ಇಲಾಖೆಗಳನ್ನು ಸುಮ್ಮನೆ ಹೆಚ್ಚಿಸಿಕೊಂಡು ತನ್ಮೂಲಕ ಪ್ರಜೆಗಳ ಮೇಲೆ ಹೆಚ್ಚಿನ ಭಾರವನ್ನು ವಹಿಸತಕ್ಕದ್ದು ಸರಿಯಲ್ಲ. ಪ್ರಜೆಗಳ ರಕ್ಷಣೆ ಬಗ್ಗೆ ಸರ್ಕಾರ ನಿಯಮಿತವಾದಂಥ ವ್ಯವಸ್ಥೆಯನ್ನು ಆಲೋಚನೆ ಮಾಡಿ ಕಾರ್ಯೋನ್ಮುಖರಾಗಬೇಕಾದುದು ಅತ್ಯಾವಶ್ಯಕ. ನಾನು ನಿನ್ನೆ ಭಾನುವಾರ ಮದ್ರಾಸಿಗೆ ಹೋಗಿದ್ದಾಗ ಅಲ್ಲಿನ ಶಾಸಕರಿಗೆ ಭವನವನ್ನು ಏರ್ಪಾಡು ಮಾಡಿದ್ದಾರೆ. ಅಲ್ಲಿನ ಭವನದಂತೆ ನಮ್ಮಲ್ಲಿಯೂ ಕೂಡ ಒಬ್ಬೊಬ್ಬರಿಗೆ ಒಂದೊಂದು ಕೊಠಡಿಯಂತೆ ಎಲ್ಲರಿಗೂ ಪಕ್ಷಪಾತವಿಲ್ಲದೆ ಒಂದೇ ಸಮನಾಗಿ ಕೊಡುವ ವ್ಯವಸ್ಥೆ ಮಾಡಬೇಕೆಂದು ಅದಕ್ಕೆ ಸರ್ಕಾರದವರು ಕೂಡಲೇ

(ಶ್ರೀ ಸೋಲೂರು ಸಿದ್ದಪ್ಪ)

ಮನಸ್ಸು ಮಾತಬೇಕೆಂದು ಹೇಳುತ್ತೇನೆ. ಈ ಸಂದರ್ಭದಲ್ಲಿ ಸರ್ಕಾರವನ್ನು ಒತ್ತಾಯ ಮಾಡಿ ಹೇಳುವಂಥ ಅಂಶಗಳು ಇನ್ನೂ ಇವೆ. ಮುಂದೆ ಕಾಲಾವಕಾಶವನ್ನು ಕಲ್ಪಿಸಿಕೊಟ್ಟಾಗ ಅವನ್ನೆಲ್ಲಾ ಹೇಳುತ್ತೇನೆ. ಈಗ ಅಧ್ಯಕ್ಷರು ಇಷ್ಟು ಅವಕಾಶವನ್ನು ನನಗೆ ಕೊಟ್ಟಿದ್ದಕ್ಕಾಗಿ ಅವರಿಗೂ, ಬಡ್ಜೆಟ್ಟನ್ನು ತಯಾರುಮಾಡಿದಂಥ ಒಳ್ಳೆಯ ದಕ್ಷರಾದ ನಮ್ಮ ಆರ್ಥಿಕ ಮಂತ್ರಿಗಳಿಗೂ, ಮಂತ್ರಿಮಂಡಲಕ್ಕೂ ಹಾಗೂ ಮಾನ್ಯ ಮುಖ್ಯ ಮಂತ್ರಿಗಳಿಗೂ ವಂದಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ—ಜೈ ಹಿಂದ್.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಸಭಾಪತಿಗಳೇ, ಇವತ್ತು ಬಡ್ಜೆಟ್ ಬಗ್ಗೆ ಪ್ರತಿಕ್ರಿಯೆಗಳು ಅನೇಕವಾಗಿ ವ್ಯಕ್ತಪಟ್ಟಿವೆ. ಬಡ್ಜೆಟ್ಟನ್ನು ಕೆಲವರು ಇದು ತೆರಿಗೆ ಇಲ್ಲದಂಥ ಬಡ್ಜೆಟ್ಟು, ಆದ್ದರಿಂದ ಸ್ವಾಗತ ಮಾಡಬೇಕು ಎಂದು, ಹೇಳುತ್ತಾರೆ. ಇನ್ನು ಕೆಲವರು ಇದು ಒಂದು ಉಳಿತಾಯದ ಬಡ್ಜೆಟ್ ಎಂದ ಹೇಳುತ್ತಾರೆ. ಮಾನ್ಯ ಆರ್ಥಿಕ ಸಚಿವರು ಬಹಳ ಬುದ್ಧಿ ಉಪಯೋಗಿಸಿ ವಿಚಾರಮಾಡಿ ಉಳಿತಾಯದ ಬಡ್ಜೆಟ್ಟನ್ನು ನಮ್ಮ ರಾಜ್ಯಕ್ಕೆ ಕೊಟ್ಟಿದ್ದಾರೆ, ಅನೇಕ ಕಡೆಗಳಲ್ಲಿ ಉಳಿತಾಯದ ಬಡ್ಜೆಟ್ಟೇ ಇಲ್ಲದೇ ಇರುವಾಗ ಮೈಸೂರು ರಾಜ್ಯ ಹೆಮ್ಮೆ ಪಡಬೇಕು ಎಂಬುದಾಗಿ ಅವರ ಪಕ್ಷದ ಕಾಂಗ್ರೆಸ್ ಸದಸ್ಯರೇ ಮಾತನಾಡಿದ್ದಾರೆ. ಆದರೆ ಅದರ ನಿಜಾಂಶ ವೇನು ಎಂಬುದನ್ನು ಮಾನ್ಯ ಸಚಿವರು ಒಪ್ಪಿಸಿರತಕ್ಕ ಬಡ್ಜೆಟ್ ಅಂಕಿಅಂಶಗಳ ಆಧಾರದಮೇಲೆ ನೋಡಿದರೆ, ಮೊಟ್ಟಮೊದಲನೆಯದಾಗಿ ಇದು ತೆರಿಗೆ ಇಲ್ಲದ ಬಡ್ಜೆಟ್ ಎಂದು ಹೇಳುವುದಕ್ಕೆ ಸಾಧ್ಯವಾಗುತ್ತದೆಯೇ ಎಂಬುದನ್ನು ನೋಡಬೇಕು ಇದು ಮೊದಲನೆಯ ಅಂಶ. ನನ ಅಭಿಪ್ರಾಯ ದಲ್ಲಿ ಆ ರೀತಿ ಅಲ್ಲ ಎಂದು ಹೇಳುತ್ತೇನೆ. ಏಕೆಂದರೆ ಇದನ್ನು ವರಮಾನವನ್ನು ತೆಗೆದುಕೊಂಡು ನೋಡಿದರೆ, ಮಾರಾಟ ತೆರಿಗೆಯಿಂದ ನಮಗೆ ಜಾಸ್ತಿ ಬಂದಿರುವುದು ಚೆನ್ನಾಗಿ ಗೊತ್ತಾಗುತ್ತದೆ. ಅದರ ಬಗ್ಗೆ ಅವರ ಭಾಷಣದ 25–26ನೇ ಪುಟಗಳಲ್ಲಿ ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ಅಂದ ಮೇಲೆ ಮಾರಾಟ ತೆರಿಗೆಯ ಮೂಲಕವೇ ಇವರು ಹೆಚ್ಚಿನ ಹಣವನ್ನು ಇವತ್ತು ಪಡೆದಿದ್ದಾರೆ. ಇದು ಯಾವ ರೀತಿಯಲ್ಲಿ ಬಂದಿದೆ, ಏತಕ್ಕೋಸ್ಕರ ಹೀಗೆ ಬಂದಿದೆಯೆಂಬುದನ್ನು ಮಾನ್ಯ ಆರ್ಥಿಕ ಸಚಿವರು ವಿವರಿಸಿದ್ದಾರೆ. ಬೆಲೆಗಳು ಜಾಸ್ತಿಯಾದ್ದರಿಂದ ಮಾರಾಟತೆರಿಗೆ ಜಾಸ್ತಿ ಬಂದಿದೆಯೆಂದು ಒಪ್ಪಿಕೊಂಡಿದ್ದಾರೆ.

ಬೆಲೆಗಳು ಏತಕ್ಕೆ ಜಾಸ್ತಿ ಆಗುತ್ತಿವೆ ಮತ್ತು ಏತಕ್ಕೆ ಜಾಸ್ತಿ ಆಗಿವೆ ಎಂಬುದನ್ನು ಸ್ವಲ್ಪ ಮಟ್ಟಿಗೆ ಪರಿಶೀಲನೆ ಮಾಡಿದರೆ, ಬೆಲೆಗಳು ಜಾಸ್ತಿ ಆಗುವುದಕ್ಕೆ ಮೂಲಭೂತ ಕಾರಣ, ಇವೊತ್ತಿನ ದಿವಸ ತೆರಿಗೆಯನ್ನು ಹೆಚ್ಚಿಸಿರುವುದು, ಮತ್ತು ಹಣದ ಉಬ್ಬರ. ಈ ತರಹ ಬೆಲೆಗಳ ಏರಿಕೆಗೆ, ಮಾರಾಟತೆರಿಗೆಗೆ ಹಣ ಕೊಡುವವರು ಯಾರು, ? ಸಾಮಾನ್ಯ ಜನರು, ಕಾರ್ಮಿಕರು, ಕೂಲಿಗಾರರು. ಇದನ್ನು ಪ್ರತ್ಯಕ್ಷ ತೆರಿಗೆ ಎಂದು ತಿಳಿದುಕೊಳ್ಳದೇ ಹೋದರೂ, ಪರೋಕ್ಷ ತೆರಿಗೆ ಎಂಬುದನ್ನು ಮರೆ ಯುವ ಹಾಗಿಲ್ಲ. ಈ ದೃಷ್ಟಿಯಿಂದ ಪರೋಕ್ಷವಾಗಿ ಮಾರಾಟತೆರಿಗೆಯನ್ನು ಹೆಚ್ಚಿಸಿರುವುದನ್ನು ಗಮನಿಸಿದರೆ ಇದು ತೆರಿಗೆ ಇಲ್ಲದಂತಹ ಬಡ್ಜೆಟ್ಟು ಎಂದು ಹೇಳುವುದಕ್ಕಾಗುವುದಿಲ್ಲ.

ಇನ್ನು ಎರಡನೆಯದಾಗಿ, ನಮ್ಮ ಮಿತ್ರರು ಹೇಳಿದರು ಇದು ಉಳಿತಾಯದ ಬಡ್ಜೆಟು ಈ ತರಹ ಬಡ್ಜೆಟ್ಟನ್ನು ಯಾರೂ ತೆಗೆದುಕೊಂಡು ಬಂದಿಲ್ಲ ಎಂದು ಹೇಳಿದರು. ನಿಜವಾಗಿ ಇದರಲ್ಲಿ ಉಳಿತಾಯ ಇದೆಯೇ, ಯಾವ ರೀತಿಯಲ್ಲಿದೆ ಎಂಬುದನ್ನು ವಿಮರ್ಶೆ ಮಾಡಿದರೆ, ಇದರಲ್ಲಿ ಉಳಿ ತಾಯ ಏತಕ್ಕೆ ಇದೆ, ಯಾವ ರೀತಿಯಲ್ಲಿ ಉಳಿತಾಯ ಇದೆ ಎಂಬುದು ಸ್ಪಷ್ಟವಾಗಿ ಕಾಣುತ್ತದೆ. 11.98 ಕೋಟಿ ರೂಪಾಯಿಗಳ ಉಳಿತಾಯ ಇದೆಯೆಂದು ಹೇಳಿದ್ದಾರೆ. ಈಗ ನಮ್ಮ ರಾಜ್ಯ ಸರ್ಕಾರ ದವರು ಸರ್ಕಾರಿ ನೌಕರರಿಗೆ ತುಟ್ಟಿ ಭತ್ಯವನ್ನು ಕೊಟ್ಟಿದ್ದಾರೆ. ಇದಕ್ಕೆ ಬೇಕಾದಂತಹ ಹಣವನ್ನು ಈ ಬಡ್ಜೆಟ್ಟಿನಲ್ಲಿ ಸೇರಿಸಿಲ್ಲ. ಮತ್ತು ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರಕ್ಕೆ ಹಣ ಸಹಾಯ ವನ್ನು ಮಾಡಿದ್ದಾರೆ. ಅದು ಇಲ್ಲದೇ ಇದ್ದರೆ ಇವೊತ್ತಿನ ದಿವಸ ಉಳಿತಾಯದ ಬಡ್ಜೆಟ್ ಆಗುತ್ತಿರಲಿಲ್ಲ.

ಇನ್ನು ಎರಡನೆಯ ಅಂಶವನ್ನು ತೆಗೆದುಕೊಂಡರೆ ಮಾನ್ಯ ಅರ್ಥ ಸಚಿವರು ಕೇಂದ್ರ ಸರ್ಕಾರ ದಿಂದ ನಮಗೆ ಹಿಂದಿನ ಪ್ರಮಾಣದಲ್ಲಿ ಹಣ ಸಹಾಯ ಬಂದಿಲ್ಲ ಎಂದು ಹೇಳಿದ್ದಾರೆ. ಹಿಂದಿನ ಆ ಒಂದು ಆಧಾರದಮೇಲೆ ಬಡ್ಜೆಟ್ಟನ್ನು ತಯಾರುಮಾಡಿದ್ದಾರೆ. ಹಿಂದಿನ ಪ್ರಮಾಣದಲ್ಲಿ ಕೇಂದ್ರ ಸರ್ಕಾರದಿಂದ ನಮಗೆ ಹಣ ಸಹಾಯ ಬಂದಿಲ್ಲವೆಂತಲೂ ಹೇಳಿದ್ದಾರೆ. ಯಾವ ಆಧಾರದಮೇಲೆ 185 ಕೋಟಿ ರೂಪಾಯಿಗಳ ಆದಾಯ ಬರುತ್ತದೆ ಎಂದು ನಿರೀಕ್ಷಣೆ ಮಾಡಿದ್ದರೋ ಆ ಆಧಾರದ ಮೇಲೆ ಖರ್ಚು ಇಷ್ಟು ಇದೆ, ಉಳಿತಾಯ ಇಷ್ಟು ಇದೆ ಎಂಬುದನ್ನ ಹೇಳಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಸೆಂಟ್ರಲಿ ಸ್ಪಾನ್ಸರ್ಡ್ ಸ್ಕೀಮಿನ ವಿಚಾರವಾಗಿ ಮಾತ್ರ ನಾನು ಹೇಳಿದ್ದು. ಹಿಂದಿನ ಬಡ್ಜೆಟ್ಟನ್ನು ತಯಾರು ಮಾಡುವಾಗ ಸೆಂಟ್ರಲಿ ಸ್ಪಾನ್ಸರ್ಡ್ ಸ್ಕೀಮಿಗೆ ಕೇಂದ್ರ ಸರ್ಕಾರದಿಂದ 10 ಕೋಟಿ ರೂಪಾಯಿಗಳು ಬರಬಹುದೆಂದು ಹೋದ ವರ್ಷ ಯೋಚನೆ ಮಾಡಿದ್ದೆವು. ಆದರೆ 8 ಕೋಟಿ ರೂಪಾಯಿಗಳು ಮಾತ್ರ ಬಂತು. ಅಷ್ಟುಮಾತ್ರಾ ಇದರಲ್ಲಿ ಸೇರಿಸಿದೆ.

Sri H. B. JWALANAIAH.—He is boosting the central figures.

Sri RAMAKRISHNA HEGDE.—No Minister would like to boost up his estimates. If he does so, he does it at his own peril.

ಶ್ರೀ ಎಂ. ಎಸ್. ಕೃಷ್ಣನ್.—ಹೋದಸಲ ಬಡ್ಜೆಟ್ಟನ್ನು ಈ ಸಭೆಯ ಮುಂದೆ ಮಂಡಿಸಿದಾಗ ಕೇಂದ್ರ ಸರ್ಕಾರದಿಂದ ಯಾವ ಯಾವ ರೀತಿಯಲ್ಲಿ ಬರುತ್ತದೆಂದು ತಿಳಿಸಿದ್ದಿರೋ ಆ ಪ್ರಕಾರ ಹಣ ಸಹಾಯ ಬಂದಿಲ್ಲ ಎಂಬುದು ಸ್ಪಷ್ಟವಾಗಿದೆ. ಇವೊತ್ತು ಈ ಸಭೆಯ ಮುಂದಿಟ್ಟಿರತಕ್ಕ ಬಡ್ಜೆಟ್ಟಿನಲ್ಲಿ 185 ಕೋಟಿ ರೂಪಾಯಿಗಳು ವರಮಾನ ಬರುತ್ತದೆ ಎಂದೇನು ಹೇಳಿದ್ದೀರೋ ಆ ವರಮಾನ ಬರುತ್ತದೆಯೇ ಎಂದು ನನಗೆ ಸಂಶಯ ಬಂದಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಸೆಂಟ್ರಲಿ ಸ್ಪಾನ್ಸರ್ಡ್ ಸ್ಕೀಮಿನಲ್ಲಿ ಮಾತ್ರ ನಾವು ಕೇಂದ್ರ ಸರ್ಕಾರದಿಂದ ಎಷ್ಟು ಹಣ ಸಹಾಯವನ್ನು ನಿರೀಕ್ಷಿಸಿದ್ದೆವೋ ಅದಕ್ಕಿಂತ ಒಂದೆರಡು ಕೋಟಿ ಕಡಿಮೆ ಸಿಕ್ಕಿತು. ಆದರೆ ಯೋಜನೆಯ ವಿಚಾರದಲ್ಲಿ ಕೇಂದ್ರ ಸರ್ಕಾರದಿಂದ ಎಷ್ಟು ಹಣ ಸಿಕ್ಕುತ್ತದೆ ಎಂದು ನಿರೀಕ್ಷೆಮಾಡಿದ್ದೆವೋ ಅಷ್ಟೇ ಹಣ ಸಹಾಯ ಸಿಕ್ಕಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಕೇಂದ್ರ ಸರ್ಕಾರದಿಂದ ನಿಯಮಿತ ಯೋಜನೆಗಳಿಗೆ ಎಷ್ಟು ಹಣ ಬರಬೇಕಾಗಿತ್ತೋ ಅಷ್ಟು ಬರಲಿಲ್ಲ ಎಂದು ನನ್ನ ಅಭಿಪ್ರಾಯ. ಅದಕ್ಕಿಂತ ಮುಖ್ಯವಾದ ಪ್ರಶ್ನೆ ಏನೆಂದರೆ 185 ಕೋಟಿ ರೂಪಾಯಿಗಳ ರೆವಿನ್ಯೂ ನೀವು ನಿರೀಕ್ಷೆ ಮಾಡಿದ್ದೀರಿ, ಅದರ ಮೇಲೆ ಉಳಿತಾಯ ಎಂದು ಹೇಳಿದ್ದೀರಿ, ತಮಗೆ ಗೊತ್ತಿರುವ ಹಾಗೆ, ಮತ್ತು ನಾವು ನೋಡಿರುವ ಹಾಗೆ ಕಳೆದ ಹಲವಾರು ವರ್ಷಗಳಲ್ಲಿ ಎಷ್ಟು ಎಸ್ಟಿಮೇಟ್ ಮಾಡಿರುತ್ತಾರೆಯೋ ಅಷ್ಟು ವರಮಾನ ಬಂದಿಲ್ಲ ಎಂಬುದು ಸ್ಪಷ್ಟವಾಗಿದೆ. ಕೇಂದ್ರ ಸರ್ಕಾರವಾಗಲೀ, ರಾಜ್ಯ ಸರ್ಕಾರವಾಗಲೀ ಎಷ್ಟು ಆದಾಯವನ್ನು ನಿರೀಕ್ಷಣೆ ಮಾಡಿದ್ದರೋ ಅಷ್ಟು ಹಣ ಬಂದಿಲ್ಲ. ಕಡಮೆ ಆಗಿದೆ. 7.30 ಕೋಟಿ ರೂಪಾಯಿಗಳು ಕಡಮೆ ಆಗಿದೆ. ಕೇಂದ್ರ ಸರ್ಕಾರದಿಂದ ಬರಬೇಕಾಗಿತ್ತು. ಅದು ಬರಲಿಲ್ಲ. ಆದ್ದರಿಂದ ಮುಂದಿನ ವರ್ಷ ಎಷ್ಟು ಹಣ ಬರುತ್ತದೆಯೆಂದು ನಿರೀಕ್ಷಣೆ ಮಾಡಿರುತ್ತಾರೆಯೋ ಅಷ್ಟು ಹಣ ಬರುವುದಿಲ್ಲ. ಕಳೆದ ವರ್ಷದ ಬಡ್ಜೆಟ್ ವರದಿಯನ್ನು ತೆಗೆದು ನೋಡಿ, ಹಿಂದಿನ ವರ್ಷದ ಪಬ್ಲಿಕ್ ಅಕೌಂಟ್ಸ್ ಕಮಿಟಿಯ ವರದಿಗಳನ್ನು ತೆಗೆದು ನೋಡಿದರೆ ತಮಗೆ ತಿಳಿಯುತ್ತದೆ. ರೆವಿನ್ಯೂ ಎಸ್ಟಿಮೇಟ್ ಏನಿದೆಯೋ ಅದು ನಿಜವಾಗಿ ಬಂದಿರುತ್ತದೆಯೇ ಹೇಗೆ ಎಂಬುದು ಗೊತ್ತಾಗುತ್ತದೆ. ನಾನು ನೋಡಿದ್ದರಲ್ಲಿ ಎಷ್ಟು ರೆವಿನ್ಯೂ ಬರುತ್ತದೆಂದು ನಿರೀಕ್ಷಣೆ ಮಾಡಿರುತ್ತಾರೆಯೋ ಅದಕ್ಕಿಂತ ಕಡಿಮೆ ಆಗಿದೆ. ಕಡಿಮೆ ಆಗುತ್ತದೆ.

ಇದು ಒಂದು ಮೂರನೆಯ ಕಾರಣ. ಆದ್ದರಿಂದ ಈ ವರ್ಷದ ಬಡ್ಜೆಟ್ಟನ್ನು ಉಳಿತಾಯದ ಬಡ್ಜೆಟ್ ಎಂದು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ನಾಲ್ಕನೆಯ ಅಂಶ ಖರ್ಚು ಕಡಿಮೆ ಆಗಿದೆ. ಅದನ್ನು ಮರೆಯುವಹಾಗಿಲ್ಲ. ಸೇಲ್ಸ್ ಟ್ಯಾಕ್ಸ್‌ನಲ್ಲಿ ಜಾಸ್ತಿ ಹಣ ಬಂದಿದ್ದರೂ ಸಹ ಖರ್ಚು ಮಾತ್ರ ಕಡಿಮೆ ಮಾಡುತ್ತಿದ್ದಾರೆ. ಸೇಲ್ಸ್ ಟ್ಯಾಕ್ಸ್‌ನಿಂದ ಜಾಸ್ತಿ ಹಣ ಬಂದಿದೆ ಎಂದು ಒಪ್ಪಿಕೊಂಡಿದ್ದಾರೆ. ಆದರೆ ಖರ್ಚು ಮಾತ್ರ ಕಡಿಮೆ ಆಗಿದೆ. ಇದರಿಂದ ಏನಾಗಿದೆ ಎಂದರೆ, ನಮಗೆ ಜಾಸ್ತಿ ಹಣ ಬಂದರೂ ಕೂಡ ಇವರು ಖರ್ಚುಮಾಡುವುದಕ್ಕೆ ತಯಾರಿಲ್ಲ ಎಂಬುದು ಗೊತ್ತಾಗುತ್ತದೆ. ಇದು ಒಂದು ಕೃತಕವಾದ ಉಳಿತಾಯದ ಬಡ್ಜೆಟ್ಟೇ ವಿನಾ ಸ್ಪಷ್ಟವಾಗಿ ಉಳಿತಾಯದ ಬಡ್ಜೆಟ್ ಅಲ್ಲ. ಎಲ್ಲಾ ಅಂಕಿ ಅಂಶಗಳನ್ನೂ ಜೋಡಣೆ ಮಾಡಿದ್ದಾರೆಯೇ ಹೊರತು, ನಿಜವಾದ ಉಳಿತಾಯದ ಬಡ್ಜೆಟ್ ಎಂದು ಕರೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಒಂದು ಕಡೆ ಸೇಲ್ಸ್ ಟ್ಯಾಕ್ಸ್‌ನಿಂದ ಹೆಚ್ಚು ಆದಾಯ ಬಂದಿದೆ ಪಾನನಿರೋಧವನ್ನು ತೆಗೆದು ಹಾಕಿರುವುದರಿಂದ ಆದಾಯ ಬಂದಿದೆ ಎಂದು ಹೇಳುತ್ತಾರೆ. ಈ ಎರಡರಿಂದಲೂ ಜಾಸ್ತಿ ವರಮಾನ ಬಂದಿದೆಯೆಂದು ಹೇಳಿದ್ದಾರೆ. ಯೋಜನೆಗಳಿಗಾಗಿ ಹೋದ ವರ್ಷ ಎಷ್ಟು ಹಣವನ್ನು ಖರ್ಚು ಮಾಡಿದ್ದೇವೊ ಅಷ್ಟನ್ನೆ ಈ ವರ್ಷವು ಮಾಡುತ್ತೇವೆಂದು ಹೇಳಿದ್ದಾರೆ. ಉಳಿತಾಯದ ಬಡ್ಜೆಟನ್ನು ತೋರಿಸಿದ್ದಾರೆ. ಒಂದಕ್ಕೊಂದು ಹೊಂದಿಕೆಯೆ ಇಲ್ಲ. ಇದರ ಅರ್ಥ ಏನು ಎಂದರೆ ನಿಜಕ್ಕೂ ತೋರಿಕೆಗೆ ಮಾಡಿರುವ ಬಡ್ಜೆಟ್ ಎಂದು ಕಾಣುತ್ತದೆ. ಹೆಚ್ಚೇ ಅನುಕೂಲಗಳನ್ನು ಹೆಚ್ಚು ಹೆಚ್ಚು ಉದ್ಯೋಗಗಳನ್ನು ಜನರಿಗೆ ಒದಗಿಸಿಕೊಡಬೇಕೆನ್ನುವ ಅಭಿಪ್ರಾಯ ಸರ್ಕಾರಕ್ಕೆ ಇಲ್ಲವೆಂದು ಕಾಣುತ್ತದೆ. ತೆರಿಗೆಗಳ ವಿಷಯವನ್ನೇ ತೆಗೆದುಕೊಂಡರೆ ಸರ್ಕಾರದವರು ಎರಡು

(ಶ್ರೀ ಎಂ. ಎಸ್. ಕೃಷ್ಣನ್)

ರೀತಿಯ ತೆರಿಗೆಗಳನ್ನು ಜನರಿಂದ ವಸುಲು ಮಾಡುತ್ತಿದ್ದಾರೆ. ಪ್ರತ್ಯಕ್ಷ ತೆರಿಗೆ ಮತ್ತು ಪರೋಕ್ಷ ತೆರಿಗೆಯನ್ನು ಜನರಿಂದ ವಸುಲು ಮಾಡುತ್ತಿದ್ದಾರೆ. ಶ್ರೀಮಂತರಿಂದ ಪ್ರತ್ಯಕ್ಷ ತೆರಿಗೆಯನ್ನು, ಜನಸಾಮಾನ್ಯರಿಂದ ಪರೋಕ್ಷ ತೆರಿಗೆಯನ್ನು ವಸೂಲು ಮಾಡುತ್ತಿದ್ದಾರೆ. ಜನಸಾಮಾನ್ಯರಿಂದ ವಸೂಲಾಗಿರುವ ಪರೋಕ್ಷ ತೆರಿಗೆ ಹೋದ ವರ್ಷಕ್ಕೂ ಈ ವರ್ಷಕ್ಕೂ ಜಾಸ್ತಿಯಾಗಿದೆ. ಇದು 1967–68ರಲ್ಲಿ 2468·05ಲಕ್ಷ ರೂಪಾಯಿಗಳಿದ್ದು 1968–69 ರಲ್ಲಿ 2539.78 ಲಕ್ಷ ರೂಪಾಯಿಗಳಿಗೇರಿದೆ. ಇದು ಪ್ರತ್ಯಕ್ಷ ತೆರಿಗೆ. ಪರೋಕ್ಷ ತೆರಿಗೆ ತೆಗೆದುಕೊಂಡರೆ, 1967–68ರಲ್ಲಿ 6157.28 ಲಕ್ಷ ರೂಪಾಯಿಗಳಿದ್ದರೆ 1968-69 ರಲ್ಲಿ 7194.77 ಲಕ್ಷಕ್ಕೆ ಏರಿದೆ. ಅಂದರೆ ಹತ್ತಿರ ಹತ್ತಿರ ಒಂದು ಕೋಟಿ ರೂಪಾಯಿಗಳಷ್ಟು ಪ್ರತ್ಯಕ್ಷ ತೆರಿಗೆಯಿಂದಲೂ 10 ಕೋಟಿ ರೂಪಾಯಿಗಳಷ್ಟು ಪರೋಕ್ಷ ತೆರಿಗೆಗಳಿಂದಲೂ ಸರ್ಕಾರಕ್ಕೆ ವರಮಾನ ಬಂದಿದೆ. ಜನಸಾಮಾನ್ಯರಿಂದ ಒಂದಕ್ಕೆ 10 ರಷ್ಟು ತೆರಿಗೆಯನ್ನು ಕಿತ್ತುಕೊಂಡಿದ್ದರೂ ಸಹ ಅದನ್ನು ಸರಿಯಾಗಿ ಉಪಯೋಗ ಮಾಡುತ್ತಿಲ್ಲವೆಂಬ ಗುರುತರವಾದ ಅಪಾದನೆಯನ್ನು ಮಾಡಬೇಕಾಗಿದೆ.

ಇನ್ನೊಂದು ವಿಷಯವನ್ನು ಮಾನ್ಯ ಅರ್ಥಿಕ ಮಂತ್ರಿಗಳ ಗಮನಕ್ಕೆ ತರಬೇಕೆಂದರೆ, ಮಾನ್ಯ ಅರ್ಥಿಕ ಸಚಿವರು ಸರ್ಕಾರಿ ವಲಯಗಳಲ್ಲಿರುವ ಕೈಗಾರಿಕೆಗಳ ಬಗ್ಗೆ ಮತ್ತು ಖಾಸಗೀ ವಲಯಗಳಲ್ಲಿರುವ ಕೈಗಾರಿಕೆಗಳ ಬಗ್ಗೆ ಬಹಳವಾಗಿ ಮಾತನಾಡಿದ್ದಾರೆ. ಈ ಖಾಸಗೀ ಮತ್ತು ಸರ್ಕಾರಿ ವಲಯಗಳಲ್ಲಿರುವ ಕೈಗಾರಿಕೆಗಳ ಬಗ್ಗೆ ಮಾತನಾಡುತ್ತಾ ಅವರು ದೊಡ್ಡ ಸೈದ್ಧಾಂತಿಕವಾದ ತತ್ವಗಳಿಗೆ ಕಟ್ಟು ಬೀಳಬಾರದೆಂದು ಹೇಳಿದ್ದಾರೆ. ಏತಕ್ಕೋಸ್ಕರವಾಗಿ ಈ ರೀತಿ ಹೇಳಿದರು ಎಂಬುದು ನನಗೆ ಅರ್ಥವಾಗಿಲ್ಲ. ಅಂದರೆ ಈ ಸರ್ಕಾರದ ಧೋರಣೆಯಾದರೂ ಏನು ? ಸರ್ಕಾರಿ ವಲಯಗಳಲ್ಲಿರುವ ಕೈಗಾರಿಕೆಗಳನ್ನು ಬೆಳೆಸಬೇಕೆಂಬುದೇ ಅಥವಾ ಖಾಸಗೀ ವಲಯಗಳಲ್ಲಿರುವ ಕೈಗಾರಿಕೆಗಳನ್ನು ಬೆಳೆಸಬೇಕೆಂಬುದೇ ? ಈ ವಿಚಾರದ ಬಗ್ಗೆ ಉತ್ತರವನ್ನು ಮಾನ್ಯ ಅರ್ಥ ಸಚಿವರು ತಮ್ಮ ಬಡ್ಜೆಟ್‌ನಲ್ಲಿ ತಿಳಿಸಿಲ್ಲ. ಸುಮ್ಮನೆ ಸೈದ್ಧಾಂತಿಕವಾಗಿ ವಿಚಾರ ಮಾಡಕೂಡದು ಎಂದು ಮಾತ್ರ ಹೇಳಿದ್ದಾರೆ. ಇದರಿಂದ ನನಗಂತೂ ಸಂಶಯ ಬರುತ್ತದೆ, ಏನೆಂದರೆ ಖಾಸಗಿಯವರಿಗೆ ಅಂದರೆ ನಮ್ಮ ದೇಶದ ಬಂಡವಾಳಗಾರರಿಗೆ ಹೆಚ್ಚು ಹೆಚ್ಚು ರಿಯಾಯಿತಿ ತೋರಿಸುವ ಮನೋಭಾವ ಇಟ್ಟುಕೊಂಡು ಆ ಒಂದು ದಿಸೆಯಲ್ಲಿ ಈ ರಾಜ್ಯದ ಬಡ್ಜೆಟ್‌ನ್ನು ತಯಾರು ಮಾಡುತ್ತಿದ್ದಾರೊ ಎಂದು. ಇದೇ ಈ ಸರ್ಕಾರದವರ ಧೋರಣೆ ಎಂಬುದಾಗಿ ಈ ಬಡ್ಜೆಟ್‌ನಲ್ಲಿ ಹೇಳಿರುವ ವಿಷಯಗಳಿಂದ ತಿಳಿದು ಬರುತ್ತದೆ. ಮಾನ್ಯ ಆರ್ಥಿಕ ಸಚಿವರ ಗಮನಕ್ಕೆ ಇನ್ನೊಂದು ವಿಚಾರವನ್ನು ತರಬೇಕಾಗಿದೆ. ಮೊನ್ನೆ ಮಾನ್ಯ ಅರ್ಥಿಕ ಮಂತ್ರಿಗಳು ಟೋಕಿಯೋ, ಜರ್ಮನಿ, ಅಮೆರಿಕಾ ಮುಂತಾದ ಹೊರ ದೇಶಗಳಿಗೆ ಹೋಗಿಬಂದರು. ಮತ್ತು ಮುಖ್ಯಮಂತ್ರಿಗಳ ಜೊತೆಯಲ್ಲಿ ಕಲ್ಕತ್ತಾ, ಬೊಂಬಾಯಿ ಮೊದಲಾದ ಪಟ್ಟಣಗಳಿಗೆ ಹೋಗಿಬಂದರು. ಈ ವಿಚಾರದಲ್ಲಿ ದುಡ್ಡಿನ ಪ್ರಶ್ನೆಗೆ ನಾನು ಹೋಗುವುದಿಲ್ಲ. ಈ ಮಂತ್ರಿಗಳು ಈ ರೀತಿ ಎಲ್ಲಾ ಪ್ರದೇಶಗಳಿಗೂ ಹೋಗಿ ಬಂದಮೇಲೆ ನಮ್ಮ ರಾಜ್ಯಕ್ಕೆ ಎಷ್ಟು ಕೈಗಾರಿಕೆಗಳು ಬಂದವು ಎಂಬುದಾಗಿ ಕೇಳುತ್ತೇನೆ. ಹೊರಗಿನಿಂದ 87 ಉದ್ಯಮಿಗಳು ಈ ವಿಚಾರದಲ್ಲಿ ಮಾಹಿತಿಗಳನ್ನು ಕೋರಿ ಪತ್ರವನ್ನು ಬರೆದಿದ್ದಾರೆಂದು ಬಡ್ಜೆಟ್‌ನಲ್ಲಿ ತಿಳಿಸಿದ್ದಾರೆಯೇ ಹೊರತು ಎಷ್ಟು ಕೈಗಾರಿಕೆಗಳು ನಮ್ಮ ರಾಜ್ಯದಲ್ಲಿ ಬರುತ್ತವೆಂಬ ಬಗ್ಗೆ ಸರಿಯಾದ ಅಂಕಿ ಅಂಶಗಳನ್ನು ಕೊಟ್ಟಿಲ್ಲ. ಇಡೀ ಪ್ರಪಂಚವನ್ನು ತೆಗೆದುಕೊಂಡರೆ ಇವತ್ತಿನದಿವಸ ಎರಡು ಬಣಗಳಿವೆ. ಒಂದು ಸಾಮ್ರಾಜ್ಯಷಾಹಿ ರಾಜ್ಯಗಳಾದರೆ ಮತ್ತೊಂದು ಸಮತಾವಾದಿ ರಾಷ್ಟ್ರಗಳು. ಈ ವಿಚಾರದಲ್ಲಿ ಮಾನ್ಯ ಅರ್ಥಿಕ ಸಚಿವರಿಗೆ ಗೊತ್ತಿದ್ದರೂ ಸಹ ಆ ಬಗ್ಗೆ ಧೈರ್ಯವಾಗಿ ಹೇಳುತ್ತಿಲ್ಲ. ಮೊನ್ನೆ ಡಹಲಿಯಲ್ಲಿ ಸಂಯುಕ್ತ ರಾಷ್ಟ್ರಗಳ ವಾಣಿಜ್ಯ ವ್ಯಾಪಾರ ಸಹಾಯ ಸಭೆಯ ಅಧಿವೇಶನ ನಡೆಯಿತು. ಅಲ್ಲಿ ನಡೆದ ಸಭೆಯಲ್ಲಿ ಎರಡು ಬಣಗಳವರೂ ಸಹ ಸೇರಿದ್ದರು. ಅವರು ಆ ರೀತಿ ಸಭೆ ಸೇರಿದ ಅಭಿಪ್ರಾಯ ಅಭಿವೃದ್ಧಿ ರಾಷ್ಟ್ರಗಳು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ಸಹಾಯ ಮಾಡಬೇಕೆಂಬ ಉದ್ದೇಶದಿಂದ. ಆ ಸಭೆಯಲ್ಲಿ ಹೊರ ದೇಶಗಳಿಂದ ಬಂದಂಥ ಪ್ರತಿನಿಧಿಗಳಲ್ಲಿ ಯಾರು ನಮ್ಮ ಸ್ನೇಹಿತರು ಯಾರು ನಮ್ಮ ಶತ್ರುಗಳು ಎಂಬುದು ಸಹ ಗೊತ್ತಾಗಿದೆ. ನಮ್ಮ ದೇಶದ ಅರ್ಥಿಕ ಮುಗಟ್ಟನ್ನು ಬಗೆಹರಿಸಿಕೊಳ್ಳಬೇಕಾದರೆ ಯಾವ ಯಾವ ಕಡೆಯಿಂದ ನಮಗೆ ಸಹಾಯ ಬರುತ್ತದೋ ಅದನ್ನು ಪಡೆದುಕೊಳ್ಳುವ ಒಂದು ಮನೋಭಾವ ನಮ್ಮಲ್ಲಿರಬೇಕು ಎಂಬುದಾಗಿ ಒಂದು ಕಡೆ ಸರ್ಕಾರದ ವಕ್ತಾರರು ಹೇಳಿದ್ದಾರೆ. ಇನ್ನೊಂದು ವಿಚಾರ ಹೇಳುವುದಾದರೆ ಮಾನ್ಯ ಅರ್ಥಿಕ ಸಚಿವರು ಸಮತಾವಾದಿ ರಾಷ್ಟ್ರಗಳ ಬಗೆಗೆ ಒಂದು ತಪ್ಪು ಕಲ್ಪನೆಯನ್ನು ಇಟ್ಟುಕೊಂಡಿದ್ದಾರೋ ಎಂಬ ಅಭಿಪ್ರಾಯ ನನ್ನಲ್ಲಿ

ಬಂದಿದೆ. ಮುಖ್ಯ ಮಂತ್ರಿಗಳಾದ ಶ್ರೀ ನಿಜಲಿಂಗಪ್ಪನವರು ಈ ಒಂದು ತಪ್ಪು ಕಲ್ಪನೆ ಇಟ್ಟು ಕೊಂಡಿದ್ದಾರೆ. ಆದರೆ ಆರ್ಥಿಕಸಚಿವರಿಂದ ನಾನು ಇದನ್ನು ನಿರೀಕ್ಷೆ ಮಾಡಿರಲಿಲ್ಲ. ಎಲ್ಲಿಂದ ಸಹಾಯ ಬರುತ್ತದೋ ಅಲ್ಲಿಂದ ತಗೆದುಕೊಳ್ಳೋಣ ಎಂದು ಹೇಳುತ್ತಾರ. ಈ ರೀತಿ ಹೇಳುವಾಗ ಸಮತಾವಾದಿ ರಾಷ್ಟ್ರಗಳಿಂದ ಬರತಕ್ಕ ಸಹಾಯವನ್ನು ಪಡೆದುಕೊಳ್ಳಬೇಕೆಂದು ಮಾತ್ರ ಕೇಳಿ ಕೊಳ್ಳುತ್ತೇನೆ. ಸಮತಾವಾದಿ ರಾಷ್ಟ್ರಗಳ ಕಲ್ಪನೆಯಾದರೂ ಸಹ ಹಿಂದುಳಿದ ರಾಷ್ಟ್ರಗಳನ್ನು ಮುಂದೆ ತರಬೇಕೆಂಬುದೇ ಆಗಿದೆ. ನಮ್ಮಲ್ಲಿರುವ ಕಚ್ಚಾಮಾಲನ್ನು ಅವರು ತೆಗೆದುಕೊಂಡು ಅವರಲ್ಲಿ ತಯಾರಾಗಿರುವ ಮಾಲುಗಳನ್ನು ನಮಗೆ ಕೊಡುತ್ತಿದ್ದಾರೆ, ಇನ್ನು ಹೆಚ್ಚಿನ ಸಹಾಯ ಮಾಡಲು ಸೋವಿಯಟ್. ರಷ್ಯ ಮುಂದೆ ಬಂದಿದೆ. ಆದ್ದರಿಂದ ಇಂತಹವರಿಂದ ಸಹಾಯ ಪಡೆಯ ಬೇಕಾದ್ದು ಸರ್ಕಾರದ ಕರ್ತವ್ಯ. ಇನ್ನು ಒಂದೆರಡು ವಿಚಾರಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಇನ್ನು ಮಾನ್ಯ ಆರ್ಥಿಕ ಸಚಿವರು ಹೊರದೇಶಗಳಿಗೆ ಹೋಗಿ ಬಂದ ವಿಷಯದಲ್ಲಿ ಈ ರೀತಿ ಹೇಳಿದ್ದಾರ: "ಸರ್ಕಾರಿ ಮತ್ತು ಖಾಸಗಿ ವಲಯಗಳೆರಡರಲ್ಲೂ ನಡೆಯುವ ನಮ್ಮ ಉದ್ಯಮ ಯೋಜನೆಗಳಲ್ಲಿ ಕೆಲವಕ್ಕೆ ವಿದೇಶೀ ಸಂಸ್ಥೆಗಳಿಂದ ತಾಂತ್ರಿಕ ಮತ್ತು ಆರ್ಥಿಕ ಸಹಕಾರವನ್ನು ಗಳಿಸಿಕೊಳ್ಳುವ ಶಕ್ಯತೆಯನ್ನು ಅನ್ವೇಶಿಸುವ ದೃಷ್ಟಿಯಿಂದ ಮತ್ತು ನಮ್ಮ ವಿದೇಶೀ ಸಹೋದ್ಯಮಿ ಗಳೊಡನೆ ನಮ್ಮ ಸಂಪರ್ಕವನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ ಆಗಸ್ಟ್ 26, 1967ರಿಂದ ಅಕ್ಟೋಬರ್, 26, 1967ರವರೆಗೆ ಅಮೇರಿಕಾದ ಸಂಯುಕ್ತ ಸಂಸ್ಥಾನಗಳು, ಜಪಾನ್, ಯುನೈ ಟೆಡ್ ಕಿಂಗ್‌ಡಮ್ ಮತ್ತು ಯುರೋಪಿನ ಬೇರೆ ಬೇರೆ ಮುಖ್ಯ ದೇಶಗಳನ್ನು ಸಂದರ್ಶಿಸಿದೆನು. ಇದರಿಂದ ನಮ್ಮ ರಾಜ್ಯದಲ್ಲಿ ಹೊಸ ಉದ್ಯಮಗಳ ಸ್ಥಾಪನೆಗೆ ನ್ಯಾಯಸಮ್ಮತ ಸಹಭಾಗದ ರೂಪ ದಲ್ಲೂ ತಾಂತ್ರಿಕ ಜ್ಞಾನದಾನದ ರೂಪದಲ್ಲೂ ವಿದೇಶೀ ಸಹಕಾರವು ಇನ್ನಷ್ಟು ಹೆಚ್ಚು ಲಭಿಸಿತೆಂದು ದೃಢವಾಗಿ ನಂಬಿದ್ದೇನೆ ಎಂದು. ಅಲ್ಲಿಂದ ನಮ್ಮ ರಾಜ್ಯಕ್ಕೆ ಬಂದಮೇಲೆ ಆರ್ಥಿಕ ಮಂತ್ರಿಗಳು ಕೇಂದ್ರ ಸರ್ಕಾರದ ಬಗ್ಗೆ ಬಹು ಕಟುವಾಗಿ ಟೀಕೆ ಮಾಡಿದರು. ಕೈಗಾರಿಕೆಗಳನ್ನು ಸ್ಥಾಪಿಸಲು ಹೊರದೇಶಗಳಿಂದ ಬರುವವರಿಗೆ ಕೇಂದ್ರ ಸರ್ಕಾರದವರು ಒಂದು ಸರಿಯಾದ ನೀತಿಯನ್ನು ಅನು ಸರಿಸುತ್ತಿಲ್ಲವೆಂಬ ಟೀಕೆಯನ್ನು ಮಾಡಿದರು. ಇವತ್ತಿನ ದಿವಸ ಇವರು ಮಾತನಾಡುವುದನ್ನು ನೋಡಿದರೆ ಕೇಂದ್ರ ಸರ್ಕಾರದವರ ನೀತಿಯನ್ನು ಇವರೂ ಸಹ ಒಪ್ಪಿಕೊಂಡಿದ್ದಾರೆಂದು ಗೊತ್ತಾಗುತ್ತದೆ. ಕೈಗಾರಿಕಾ ಮುಗ್ಗಟ್ಟು ನಮ್ಮ ದೇಶದಲ್ಲಿ ಪೂರ್ತಿಯಾಗಿ ಹೋಗುತ್ತಿದೆ ಎಂಬು ದಾಗಿ ಮಾತನಾಡುತ್ತಿದ್ದಾರೆ. ಒಬ್ಬ ಸಣ್ಣ ಹುಡುಗನೂ ಸಹ ಈ ವಿಚಾರವನ್ನು ಒಪ್ಪುವುದಿಲ್ಲ. ಈ ರೀತಿಯೆಲ್ಲಾ ಮಾನ್ಯ ಅರ್ಥಿಕ ಸಚಿವರು ಮಾತನಾಡುವುದು ಸರಿಯಲ್ಲ. ಮಾನ್ಯ ಅರ್ಥಿಕ ಸಚಿವರು ಈ ರೀತಿಯ ಸ್ಟೇಟ್‌ಮೆಂಟ್ ಕೊಡುವುದರಿಂದ ಇದು ಸರ್ಕಾರದ ದಿವಾಳಿತನವನ್ನು ತೋರಿಸುತ್ತದೆಯೇ ಹೊರತು, ಅವರ ಬುದ್ಧಿವಂತಿಕೆಯನ್ನು ತೋರಿಸುವುದಿಲ್ಲವೆಂದು ಗೊತ್ತಾಗುತ್ತದೆ.

ಇನ್ನು ಇದೇ ಸಂದರ್ಭದಲ್ಲಿ ವಿದ್ಯುಚ್ಛಕ್ತಿಯ ಬಗ್ಗೆ ಒಂದೆರಡು ವಿಚಾರಗಳನ್ನು ಹೇಳ ಬೇಕಾಗಿದೆ. ಈ ವಿಚಾರದಲ್ಲ ಮಾನ್ಯ ಪ್ಯಾಲನಯ್ಯನವರು ಹೇಳಿದ್ದಾರೆ. ಈ ವಿಚಾರದಲ್ಲಿ ಮಾನ್ಯ ಆರ್ಥಿಕ ಸಚಿವರು ಏತಕ್ಕೆ ಈ ರೀತಿಯ ಹೇಳಿಕೆಯನ್ನು ತಮ್ಮ ಬಡ್ಜೆಟ್‌ನಲ್ಲಿ ಹೇಳಿದ್ದಾರೆ ಎಂಬುದು ಗೊತ್ತಾಗಿಲ್ಲ. ಮೈಸೂರು ರಾಜ್ಯದಲ್ಲಿ ಹೆಚ್ಚು ಹೆಚ್ಚು ವಿದ್ಯುಚ್ಛಕ್ತಿ ತಯಾರಾಗುತ್ತಿದೆ ಎಂಬುದು ಅರ್ಥವಾದರೂ ಏನು? ಈ ವಿಚಾರದಲ್ಲಿ ಪ್ಲಾನಿಂಗ್ ಕಮಿಷನ್ ಸದಸ್ಯರಾದ ಶ್ರೀ ಆರ್. ವೆಂಕಟ ರಾಮನ್ ಅವರು ಹೇಳಿರುವಂಥ ಒಂದು ವರದಿ ಪತ್ರಿಕೆಗಳಲ್ಲಿ ಬಂದಿದೆ. ದಕ್ಷಿಣದ ರಾಜ್ಯಗಳವರು ಇನ್ನು ಮುಂದೆ ಪವರ್ ಪ್ರಾಜೆಕ್ಟ್‌ಗಳನ್ನು ಪ್ರಾರಂಭ ಮಾಡಲು ಅನುಮತಿ ಕೊಡುವುದಿಲ್ಲವೆಂದು ಹೇಳಿದ್ದಾರೆ. ದಕ್ಷಿಣದವರು ಎಲ್ಲ ಸೇರಿ ಒಂದು ಗ್ರಿಡ್ ಮಾಡಿ, ಈಗಿರತಕ್ಕಂಥ ಪವರ್‌ನ್ನು ಪೂಲ್ ಮಾಡಿಕೊಳ್ಳಿ, ಬೇರೆ ಪವರ್ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳಲು ಹಣದ ಮುಗ್ಗಟ್ಟು ಇದೆಯೆಂದು ಹೇಳಿದ್ದಾರೆ. ಇದರಿಂದ ನಮ್ಮ ಸರ್ಕಾರದವರು ಕಾಳಿನದಿ ಯೋಜನೆ, ಮೇಕೆದಾಟು ಯೋಜನೆ, ಹೊಗೇನಕಲ್ ಪ್ರಾಜೆಕ್ಟ್ ಮತ್ತು ಬಾರಹೊಳೆ ಪ್ರಾಜೆಕ್ಟ್ ಇವುಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲವೆನ್ನುವ ಅರ್ಥವಾಗುತ್ತದೆ.

6–00 P.M.

ಇದು ಸರಿಯಾದುದಲ್ಲ ಈ ರೀತಿ ತಾವು ಹೇಳಕೂಡದು ಎಂದು ನಾನು ತಮಗೆ ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಮಿನರ್ವ ಮತ್ತು ರಾಜಾ ಮಿಲ್ಲಿನಲ್ಲಿ ಹಣಕೊಟ್ಟಿದ್ದಾರೆ ನಿಜ. ಹಣ ಕೊಟ್ಟಿದ್ದರೂ ಸಹ ಇವತ್ತು ಪರಿಸ್ಥಿತಿ ಏನಾಗಿದೆ ಎಂದರೆ, ಅಲ್ಲಿ ತುಟ್ಟಿಭತ್ಯ 40 ರೂಪಾಯಿ ಕಡಿತ ಮಾಡಿದ್ದಾರೆ.

(ಶ್ರೀ ಎಂ. ಎಸ್. ಕೃಷ್ಣನ್)

ಮೂರು ಸಾವಿರ ಕೆಲಸಗಾರರಿಗೆ ಈ ರೀತಿ ಕಟ್ ಮಾಡಿದ್ದಾರೆ. ಈ ಪರಿಸ್ಥಿತಿಯಲ್ಲಿ ಲೇಬರ್ ಕಮಿಶನರ್‌ರವರು ಮಾಲಕರ ವಿರುದ್ಧವಾಗಿ ಪ್ರಾಸಿಕ್ಯೂಟ್ ಮಾಡುವುದಕ್ಕೆ ಕಾರ್ಯಕ್ರಮ ಕೈಗೊಂಡರು. ಹೀಗಿದ್ದರೂ ಸಹ ಮ್ಯಾನೇಜಮೆಂಟಿನವರು ಹೈಕೋರ್ಟಿಗೆ ಹೋಗಿದ್ದಾರೆ. ಸರ್ಕಾರದ ಧೋರಣೆ ಏನು ? ತುಟ್ಟಿಭತ್ಯೆ ಕೊಡುವುದಕ್ಕೆ ಶಕ್ತಿ ಇಲ್ಲವೇ ? ಕೊಡದಿರುವುದು ಸರಿಯೇ ? ಕೈಗಾರಿಕಾ ಇಲಾಖೆ ಒಂದು ರೀತಿ ಹೇಳುತ್ತದೆ, ಲೇಬರ್ ಇಲಾಖೆ ಒಂದು ರೀತಿ ಹೇಳುತ್ತದೆ. ಇವರು ಅಗ್ರಿಮೆಂಟಿನಲ್ಲಿ ಏನೇನು ಕರಾರು ಮಾಡಿದ್ದಾರೆಯೋ, ಆದರ ಪ್ರಕಾರ ಮ್ಯಾನೇಜಮೆಂಟಿನವರು ಒಪ್ಪಿಕೊಳ್ಳುವುದು ಅವರ ಜವಾಬ್ದಾರಿ. ಮ್ಯಾನೇಜಮೆಂಟಿನವರು ಆ ಒಪ್ಪಂದವನ್ನು ಜಾರಿಗೆ ತಂದು ತುಟ್ಟಿಭತ್ಯ ಕಡಿತವನ್ನು ವಾಪಸುಪಡೆಯುವಂತಾಗಲು ಸರಕಾರವು ಪ್ರಯತ್ನ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಡಿ. ದೇವರಾಜ ಅರಸ್ (ಪಶುಪಾಲನೆ, ಮೀನುಗಾರಿಕೆ, ವಾರ್ತೆ ಮತ್ತು ಪ್ರಚಾರ ಶಾಖೆಗಳ ಮಂತ್ರಿಗಳು).—ನೀವು ಈಗ ಹೇಳುತ್ತಿದ್ದೀರಿ—ಲೇಬರ್ ಇಲಾಖೆ ಈ ರೀತಿ ಹೇಳುತ್ತಿದೆ ಎಂದು. ತಾವು ಸ್ಪಷ್ಟವಾಗಿ ಹೇಳಬೇಕು. You mentioned just now about the Labour Department. You know that there is already an agreement subsisting between these two parties even before we gave assistance to this Mill.

Accordingly the mill started working. Now it is true that the management have cut down the D. A. Now any decision or any kind of negotiation has to proceed on the basis of the agreement that is already in existence between the two parties.

ಶ್ರೀ ಎಂ. ಎಸ್. ಕೃಷ್ಣನ್.—ನಾನು ತಮಗೆ ಉತ್ತರ ಕೊಡಬೇಕಾಗಿ ಬರುತ್ತದೆ. ಪ್ರಶ್ನೆ ಏನೆಂದರೆ, 40 ರೂಪಾಯಿ ಕಟ್ ಮಾಡಿದ್ದಾರೆ. ಅಗ್ರಿಮೆಂಟ್‌ನಲ್ಲಿ ಕಟ್ ಮಾಡಬೇಕೆಂದು ಇರಲಿಲ್ಲ ಲೇಬರ್ ಡಿಪಾರ್ಟ್‌ಮೆಂಟ್ ಪ್ರೊಸಿಕ್ಯೂಟ್ ಮಾಡುತ್ತೇವೆಂದು ಹೇಳಿವರು. ಮ್ಯಾನೇಜ್‌ಮೆಂಟಿನವರು ಹೈಕೋರ್ಟಿಗೆ ಹೋಗಿದ್ದಾರೆ. ಇದರಲ್ಲಿ ನಾನು ಹೇಳುವುದೇನೆಂದರೆ, ಕೈಗಾರಿಕೆ ಇಲಾಖೆಯ ಪಾತ್ರವೇನು, ಇದರ ಸ್ಪಷ್ಟತೆ ಏನು ?

Sri D. DEVARAJ URS.—Let him suggest what Government has to do in this affair. If the other party were to go to court how are we to prevent them from going to the High Court ?

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಸಚಿವರು ಆ ರೀತಿ ಉತ್ತರ ಕೊಡುತ್ತಾರೆಂದು ನಾನು ಎಣಿಸಿರಲಿಲ್ಲ. ತನಗೆ ಹಕ್ಕು ಇಲ್ಲವೆಂದು ಮಾತನಾಡುತ್ತಿದ್ದಾರೆ. ಮಾಲಕ ಎಷ್ಟೋ ಅನುಕೂಲವನ್ನು ಪಡೆಯುತ್ತಾನೆ. ಇವತ್ತು 40 ರೂಪಾಯಿ 7-8 ಸಾವಿರ ಕೆಲಸಗಾರರಿಗೆ ಕಟ್ ಮಾಡಿದ್ದಾರೆ. ಇದನ್ನು ಸರಿಪಡಿಸಲಿಕ್ಕೆ ನಮಗೆ ಅಧಿಕಾರವಿಲ್ಲವೆಂದು ಮಂತ್ರಿಗಳು ಹೇಳಿದರೆ ಇದಕ್ಕಿಂತ ನಾಚಿಕೆಗೇಡಿತನ ಬೇರೆ ಇಲ್ಲ. ಅವರನ್ನು ಎಲ್ಲಿ ಕಿವಿ ಹಿಂಡಬೇಕೋ, ಅಲ್ಲಿ ಹಿಂಡಬೇಕು. ಈ ವಿಚಾರದಲ್ಲಿ ಹೆಚ್ಚು ಈಗ ಮಾತನಾಡುವುದಿಲ್ಲ. ಡಿಮ್ಯಾಂಡ್ ಬಂದಾಗ ಮಾತನಾಡುತ್ತೇನೆ.

ಕೊನೆಯದಾಗಿ ಈ ಪಬ್ಲಿಕ್ ಸೆಕ್ಟರಿನ ಕೈಗಾರಿಕೆಗಳ ವಿಚಾರಣೆಗೆ ಒಂದು ಈ ಮಾನ್ಯ ಸಭೆಯ ಕಮಿಟಿಯನ್ನು ಮಾಡಬೇಕು. ಹಲವಾರು ರೀತಿಯ ಆರೋಪಣೆಗಳನ್ನು ವಿಚಾರ ಮಾಡುವುದಕ್ಕೆ ಪಬ್ಲಿಕ್ ಅಕೌಂಟ್ಸ್ ಕಮಿಟಿಗೆ ಬಿಟ್ಟರೆ ಸಾಲದು, ಅದಕ್ಕೆ ಈ ಸಭೆಯ ಒಂದು ಕಮಿಟಿ ಮಾಡಬೇಕೆಂದು ಸೂಚಿಸುತ್ತೇನೆ.

ಇನ್ನು ಎನ್. ಜಿ. ಒ. ಗಳಿಗೆ ಡಿ. ಎ. ಜಾಸ್ತಿ ಮಾಡಿದ್ದೀರಿ, ಇದು ಸ್ವಾಗತಾರ್ಹ. ಆದರೆ ಈಗಿನ ಕಾಲದಲ್ಲಿ ಒಂದು ಸರ್ಟಿಫಿಕೇಟಿನಲ್ಲಿ ಅವರಿಗೆ ಸ್ವಲ್ಪ ಕೊಡುವುದು ಬಹಳ ಅನ್ಯಾಯ. ದಯವಿಟ್ಟು ಅದನ್ನು ತೆಗೆದು, ಜೀವನ ವೆಚ್ಚ ಹೆಚ್ಚಿರುವುದರಿಂದ, ಹಣದ ರೂಪದಲ್ಲೇ ಕೊಡಬೇಕೆಂದು

ಕೇಳಿಕೊಳ್ಳುತ್ತೇನೆ. ಅದೇ ರೀತಿಯಲ್ಲಿ ಪೆನ್ಸನ್‌ದಾರರಿಗೂ ಲಿಬರಲ್ ಆಗಿ ಕಮ್ಯೂಟ್ ಮಾಡುವುದು ಬಹಳ ಒಳ್ಳೆಯದು ಎಂದು ಮತ್ತು ಅದರಲ್ಲೂ ಲೋಯರ್ ಗ್ರೇಡಿನವರಿಗೆ ಇನ್ನೂ ಹೆಚ್ಚಿನ ಅನುಕೂಲ ಸಿಗುವಹಾಗೆ ಮಾಡಬೇಕೆಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. DEPUTY SPEAKER.—The House stands adjourned to meet at 1 P.M. tomorrow.

The House adjourned at Five minutes past Six of the Clock to meet again at One of the Clock on Tuesday the 5th March 1968.